ಹದಿವಯಸ್ಸು ಅಸ್ವಸ್ಥ ಮನಸ್ಸು

ಡಾ. ಸಿ. ಆರ್. ಚಂದ್ರಶೇಖರ್

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು-೧೮

ಹದಿವಯಸ್ಸು ಅಸ್ವಸ್ಥ ಮನಸ್ಸು

ಡಾ. ಸಿ. ಆರ್. ಚಂದ್ರಶೇಖರ್

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು - ೧೮
೧೯೮೧

HADIVAYASSU ASWASTHA MANASSU— A Collection of articles concerning youth psychology by Dr. C. R. Chandra Shekhar; published by Kannada Sahitya Parishat, Chamarajpet, Bangalore - 18. Pp. VI+80 Price. Rs.4-00.

ಮೊದಲನೆಯ ಮುದ್ರಣ : 1981

ಬೆಲೆ : ನಾಲ್ಕು ರೂಪಾಯಿಗಳು

ಪ್ರಕಾಶಕರು
ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು-೧೮

ಮುದ್ರಕರು :
ವೃದ್ಧಿ ಉದ್ಯಮ ಕೇಂದ್ರ, ಸರಸ್ವತಿಪುರಂ, ಮೈಸೂರು-೫೭೦ ೦೦೯

ಅಧ್ಯಕ್ಷರ ಮಾತು

65 ವರ್ಷಗಳ ಸಮರ್ಥ, ಸಾರ್ಥಕ ಹಿನ್ನೆಲೆಯಿರುವ ಕನ್ನಡ ಸಾಹಿತ್ಯ ಪರಿಷತ್ತು 300ಕ್ಕೂ ಹೆಚ್ಚು ಪ್ರಕಟಣೆಗಳನ್ನು ಹೊರತಂದಿದೆ. ಈ ಪ್ರಕಟಣೆಗಳಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆ, ಕನ್ನಡನಾಡಿನ ಇತಿಹಾಸ, ಧರ್ಮ ಹೀಗೆ ವಿವಿಧ ವಿಷಯಗಳಿಗೆ ಸಂಬಂಧ ಪಟ್ಟ ಕೆಲವು ಕೃತಿಗಳನ್ನೂ ಕೂಡ ಪರಿಷತ್ತು ಪ್ರಕಟಿಸಿದೆ. ಕರ್ನಾಟಕದ ಬೆಂಗಳೂರು, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳೂ ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ನೂರಾರು ಕೃತಿಗಳನ್ನು ಪ್ರಕಟಿಸಿವೆ. ಅವುಗಳ ಸೇವೆ ದೊಡ್ಡದು; ನಾವೆಲ್ಲಾ ಗುರುತಿಸುವಂತಹದು. ಅದೇ ರೀತಿ ಕೃಷಿ ವಿಶ್ವವಿದ್ಯಾನಿಲಯ ಕೂಡ ಕೃಷಿ ವಿಜ್ಞಾನಕ್ಕೆ ಸಂಬಂಧಪಟ್ಟ ಅನೇಕ ಪುಸ್ತಕಗಳನ್ನು ಇತ್ತೀಚೆಗೆ ಪ್ರಕಟಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತು ಆ ಪ್ರಮಾಣದಲ್ಲಿ ವಿಜ್ಞಾನದ ಕೃತಿಗಳನ್ನು ಪ್ರಕಟಿಸಲು ಸಾಧ್ಯವಾಗುವುದಿಲ್ಲವಾದರೂ ಕೆಲವು ಮಹತ್ವದ ಮತ್ತು ಜನಸಾಮಾನ್ಯರ ಜೀವನ ನಿರ್ವಹಣೆಗೆ ನೇರವಾಗಿ ಸಂಬಂಧಪಟ್ಟ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ.

ಇದೀಗ ಈ ಮಾಲೆಯಲ್ಲಿ ಡಾ. ಸಿ. ಆರ್. ಚಂದ್ರಶೇಖರ್ ಅವರ "ಹದಿವಯಸ್ಸು ಅಸ್ವಸ್ಥ ಮನಸ್ಸು" ಎಂಬ ಈ ಪುಸ್ತಕವನ್ನು ತುಂಬಾ ಸಂತೋಷದಿಂದ ಪ್ರಕಟಿಸಲಾಗುತ್ತಿದೆ. ಸಮಾಜದಲ್ಲಿ ಎಲ್ಲೆಡೆಗೂ ಕಂಡುಬರುವ ಮನೋದೌರ್ಬಲ್ಯದ ಹಿನ್ನೆಲೆಯಲ್ಲಿನ, ಅದನ್ನು ನಿವಾರಿಸಿಕೊಳ್ಳಬಹುದಾದ ಮಾರ್ಗವನ್ನು ಲೇಖಕರು ತಿಳಿಯಾದ ಕನ್ನಡದಲ್ಲಿ ಚನ್ನಾಗಿ ನಿರೂಪಿಸಿದ್ದಾರೆ. ಇದಕ್ಕಾಗಿ ಲೇಖಕರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಹಂಪ. ನಾಗರಾಜಯ್ಯ
ಅಧ್ಯಕ್ಷ

ಸಂಪಾದಕರ ಮಾತು

ಬಾಲ್ಯಾವಸ್ಥೆಯಿಂದ ಯೌವನಕ್ಕೆ ಕಾಲಿಟ್ಟ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಘಟಿಸುವ ದೈಹಿಕ ಹಾಗು ಮಾನಸಿಕ ಪರಿಣಾಮಕಾರಿ ಪರಿವರ್ತನೆಯನ್ನು ಗಮನಿಸಿ, "ಹದಿವಯಸ್ಸು ಅಸ್ವಸ್ಥ ಮನಸ್ಸು" ಎಂಬ ವೈದ್ಯಕೀಯ ತಿಳಿವಳಿಕೆಯ ಸಿದ್ಧಪಾಠ ಇರುವ ಈ ಪುಸ್ತಕವನ್ನು ಹೊರತರಲಾಗಿದೆ.

ಸಾಮಾನ್ಯ ಓದುಗರನ್ನ ಗಮನದಲ್ಲಿರಿಸಿಕೊಂಡು ವೈದ್ಯಕೀಯ ವಿಜ್ಞಾನವನ್ನು ಸರಳೀಕರಿಸಿ ಆಡುಮಾತಿನಲ್ಲಿ ಈ ಪುಸ್ತಕವನ್ನು ಸಿದ್ಧಮಾಡಲಾಗಿದೆ.

ಹದಿವಯಸ್ಸಿನಲ್ಲಿ ಮಾನಸಿಕ ಸ್ವಸ್ಥತೆಯನ್ನು ಪ್ರತಿಯೊಬ್ಬನು ಕಾಪಾಡಿಕೊಳ್ಳುವುದು ತೀರ ಅಗತ್ಯ ಎಂದು ಒತ್ತಿಹೇಳುವ ಈ ಪುಸ್ತಕ, ಮುಕ್ತವಾದ ಲೈಂಗಿಕ ಶಿಕ್ಷಣ ಅಗತ್ಯ ಎಂದು ಪರಿಗಣಿಸಿರುವ ಈಚಿನ ದಿನಗಳಲ್ಲಿ, ಪೂರ್ವಭಾವಿ ತಿಳಿವಳಿಕೆಗೆ ಈ ಪುಸ್ತಕ ಸಹಾಯಕಾರಿ ಆಗಿದೆ.

ಡಾ. ಸಿ. ಆರ್. ಚಂದ್ರಶೇಖರ್ ಅವರು ದಿನನಿತ್ಯ ತಾವು ಸಂದರ್ಶಿಸುವ ರೋಗಿಗಳ ವಿಚಾರವನ್ನೇ ಆಧಾರವಾಗಿಟ್ಟುಕೊಂಡು ಆಡುಮಾತಿನಲ್ಲಿ, ವೈದ್ಯಕೀಯ ವಿಜ್ಞಾನದ ಹೊಸ ಹೊಸ ಪಾರಿಭಾಷಿಕ ಪದಗಳನ್ನು ಉಚಿತವಾಗಿ ಪ್ರಯೋಗಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಈ ಪುಸ್ತಕವನ್ನು ಕನ್ನಡ ಜನ ಸ್ವಾಗತಿಸಿ ಓದುವರೆಂದು ದೃಢವಾಗಿ ನಂಬಲಾಗಿದೆ.

ವಿ. ಕೃ. ಗೋಕಾಕ್
ಪ್ರಧಾನ ಸಂಪಾದಕರು.

ಪರಿವಿಡಿ

ಆತಂಕ

ಹದಿವಯಸ್ಸನ್ನು ಆತಂಕದ ಅವಧಿ ಎಂದೇ ಕರೆಯಬಹುದು. ಆ ಅವಧಿಯಲ್ಲಿ ಒಂದುಕಡೆ ಶರೀರ ಬಾಲ್ಯದ ಪೊರೆಯನ್ನು ಕಳಚಿ, ಗಂಡು ಅಥವಾ ಹೆಣ್ಣಿನ ವಿಶಿಷ್ಟ ಅವಯವ, ಅಲಂಕಾರಗಳನ್ನು ಹೊಂದಲು ಸಡಗರ ಪಡುತ್ತಿದ್ದರೆ, ಇನ್ನೊಂದೆಡೆ ಬಾಲ್ಯ ಸಹಜ ಮುಗ್ಧತೆಯನ್ನು ಪಕ್ಕಕ್ಕೆ ಸರಿಸಿ ಪ್ರಪಂಚದ ಪೈಪೋಟಿ ಜೀವನಕ್ಕೆ ಸನ್ನದ್ಧಗೊಳ್ಳಲು ಬೇಕಾದ ಪ್ರೌಢತೆಯನ್ನು ಪಡೆಯಲು ಮನಸ್ಸು ಹಾತೊರೆಯುತ್ತಿರುತ್ತದೆ. ಹೀಗೆ ಹದಿವಯಸ್ಸು ಒಂದು ತ್ರಿಶಂಕುಸ್ಥಿತಿ. ಇತ್ತ ಬಾಲ್ಯದ ಮೃದುತ್ವವಾಗಲೀ, ಮುಗ್ಧತ್ವವಾಗಲೀ ಇಲ್ಲದ; ಅತ್ತ ದೊಡ್ಡವರ ದೃಢತೆ ಅಥವಾ ಪ್ರೌಢತೆಯಾಗಲೀ ಇಲ್ಲದ ಎಡಬಿಡಂಗಿ ಸ್ಥಿತಿ. ಏನಾದರೂ ತಪ್ಪು ಮಾಡಿದರೆ, ಸರಿಯಾಗಿ ಕೆಲಸ ಮಾಡದಿದ್ದರೆ, 'ಏನು ನೀನಿನ್ನೂ ಮಗುವೇ, ವಯಸ್ಸು ಸಾಲದೇ, ಹೀಗೆಮಾಡಲು ನಾಚಿಕೆಯಾಗುವುದಿಲ್ಲವೇ' ಎಂದು ಹೀಯಾಳಿಸುತ್ತಾರೆ. ಅದೇ ಹಿರಿಯರು ಮತ್ತೊಂದು ಸಂದರ್ಭದಲ್ಲಿ 'ಏಯ್, ದೊಡ್ಡವರು ಇರುವ ಕಡೆ ನಿನಗೇನು ಕೆಲಸ, ಹೊರಡು ಇಲ್ಲಿಂದ. ಬಂದು ಬಿಟ್ಟ ದೊಡ್ಡಮನುಷ್ಯ' ಎಂದು ಕಂತ್ರಿನಾಯಿಯನ್ನು ಅಟ್ಟುವಂತೆ ಓಡಿಸುತ್ತಾರೆ. 'ದೊಡ್ಡವನಾದೆ, ಮನೆ ಕಷ್ಟ ಸುಖ ಅರ್ಥ ಮಾಡಿಕೋಬೇಕಪ್ಪ' ಎಂದು ಜವಾಬ್ದಾರಿ ಹೊರಿಸುವ ಅವರು, 'ಯಾರನ್ನು ಕೇಳಿ ಸಿನಿಮಾಕ್ಕೆ ಹೋಗಿದ್ದೆಯೋ,ತುಟೀಮೇಲೆ ಚಿಗುರು ಮೀಸೆ ಮೊಳೀತಾ ಇದ್ದಹಾಗೇ, ತಲೆ ತಿರುಗಿ ಹೋಗುತ್ತೆ' ಎಂದು ಛೀಮಾರಿ ಹಾಕುತ್ತಾರೆ. ಅದರ ಅರ್ಥ ನೀನಿನ್ನೂ ಎಳಸು ಸ್ವತಃ ನಿರ್ಧಾರಕೈಗೊಳ್ಳಲು ಆಗದವನು, ಅನುಭವಸ್ಥರಾದ ನಮ್ಮನ್ನು ನೀನು ಆಶ್ರಯಿಸಿಕೊಂಡೇ ಇರಬೇಕು ಎಂದು.

ಮದುವೆ ಮುಂಜಿಗಳಂಥ ಸಮಾರಂಭಗಳಲ್ಲಿ ಹತ್ತಾರು ಕುಟುಂಬಗಳ ಜನ ಒಟ್ಟಿಗೆ ಸೇರಿದಾಗ ಹದಿವಯಸ್ಸಿನವರ ಎಡಬಿಡಂಗಿ ಸ್ಥಿತಿಯನ್ನು ಚೆನ್ನಾಗಿ ಕಾಣ

ಬಹುದು. ಪುಟ್ಟ ಮಕ್ಕಳು ತಿಂಡಿ ಮೆಲ್ಲುತ್ತಾ ಕುಣಿದು ಕುಪ್ಪಳಿಸುತ್ತಿರುತ್ತಾರೆ. ದಡ್ಡವರು ಆ ಕೆಲಸ ಈ ಕೆಲಸ ಎಂದು ಗಡಿಬಿಡಿಯಲ್ಲಿರುತ್ತಾರೆ. ಆದರೆ ಹದಿವಯಸ್ಸಿನವರು–ತಾಯಿಯ ಅಥವಾ ಅಕ್ಕಂದಿರ ಭಾರಿ ಸೀರೆಯನ್ನುಟ್ಟು ಒಂದಷ್ಟು ಒಡವೆ ಹೇರಿಕೊಂಡು ಪುಟ್ಟಗೌರಮ್ಮಗಳಾಗಿ ತಾಯಿಯ ಪಕ್ಕದಲ್ಲಿ ಮುದುಡಿ ಕುಳಿತಿರುತ್ತಾರೆ. ಕುಣಿಯುವ ಮಕ್ಕಳತ್ತ ಆಸೆಗಣ್ಣುಗಳನ್ನು ಬಿಡುತ್ತಾ, ಅಲ್ಲಿ ಇಲ್ಲಿ ಆಡ್ಡಾಡಲು ಹೋಗಿ 'ಸುಮ್ಮನೆ ಒಂದುಕಡೆ ಕೂತ್ಕೊಳ್ಳೇ, ನೋಡಿದವರು ಚೆಲ್ಲು ಹುಡುಗಿ ಎಂದಾರು ಎಂದು ತಾಯಿಯಿಂದಲೋ ಅಜ್ಜಿಯಿಂದಲೋ ಗದರಿಸಿಕೊಳ್ಳುತ್ತಾ ತೊಳಲಾಡುತ್ತಾರೆ. ಹುಡುಗರಾದರೆ ಹೆಂಗಸರ ಗುಂಪಿನೆಡೆಗೆ ಕಳ್ಳನೋಟ ಬೀರುತ್ತಾ, ಅದನ್ನು ಯಾರಾದರೂ ಕಂಡರೇನೋ ಎಂದು ಬೆದರುತ್ತಾ, ಇಲ್ಲದ ಗಾಂಭೀರ್ಯವನ್ನು ನಟಿಸುತ್ತಾ ಪೆಕರುಗಳಂತೆ ಅಡ್ಡಾಡುತ್ತಿರುತ್ತಾರೆ.

ಪ್ರಕೃತಿ ಸಹಜವಾದ ಶಾರೀರಿಕ ಹಾಗೂ ಮಾನಸಿಕ ಬದಲಾವಣೆಗಳಿಂದ ದಿಙ್ಮೂಢರಾಗಿ, ಹಲವು ವಿಷಯಗಳನ್ನು ತಿಳಿದುಕೊಳ್ಳಲು ಆಸೆಪಟ್ಟು, ಏನು ಮಾಡಿದರೆ ಸರಿ, ಏನು ಮಾಡಿದರೆ ತಪ್ಪು ಎಂದು ಅರ್ಥವಾಗದೆ ಗೊಂದಲದಲ್ಲಿ ಸಿಕ್ಕಿ ಕಂಗೆಡುತ್ತಾರೆ. ಆತಂಕ ಅವರನ್ನು ಆವರಿಸುತ್ತದೆ. ಹದಿವಯಸ್ಸಿನ ಪ್ರತಿಯೊಬ್ಬನಿಗೂ ತಾನು ಬೇಗ ಬೆಳೆದು ದೊಡ್ಡವನಾಗಿ ಬಿಡಬಾರದೇ ಎನಿಸುತ್ತದೆ. ದೊಡ್ಡವನಾಗಿ ಬಿಟ್ಟರೆ ತನ್ನಿಷ್ಟದಂತೆ ಬೇಕಾದಲ್ಲಿಗೆ ಹೋಗಬಹುದು. ಬೇಕಾದ್ದು ಮಾಡಬಹುದು, ಅಣ್ಣಂದಿರಂತೆ ಅನುಮತಿ ಪಡೆಯದೇ ಸ್ನೇಹಿತರೊಂದಿಗೆ ಸಿನಿಮಾಕ್ಕೆ ಹೋಗಬಹುದು. ಅಕ್ಕಂದಿರಂತೆ ಮನಸಿಗಿಷ್ಟವಾದ ಬಟ್ಟೆ, ಬಳೆ, ಕ್ಲಿಪ್ ತೆಗೆದುಕೊಳ್ಳಬಹುದು. ಅಪ್ಪನಂತೆ ಸಿಗರೇಟ್ ಸೇದಬಹುದು. ಅಮ್ಮನಂತೆ ಖರ್ಚು ಮಾಡಬಹುದು. ಸ್ಕೂಲಿಗೆ ಹೋಗುವ ಹಾಗಿಲ್ಲ, ಪರೀಕ್ಷೆಗಳ ಕಾಟವಿಲ್ಲ, ಇತ್ಯಾದಿ.

ಹೆಣ್ಣು ಗಂಡಿನ ಸಂಬಂಧ ಗುಟ್ಟಾಗಿ, ಅದರ ಬಗ್ಗೆ ಮಾತನಾಡುವುದೂ ಅಪರಾಧವೆನ್ನುವ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಹದಿವಯಸ್ಸಿನವರಿಗೆ ಲೈಂಗಿಕ ವಿಷಯ ಕಲ್ಪನಾತೀತವಾದ ಅಪೂರ್ವ ವಸ್ತುವಾಗಿಬಿಡುತ್ತದೆ. ಬೇಡ, ಕೂಡದು ಎಂದು ನಿರ್ಬಂಧ ಹೇರಿದಷ್ಟೂ ಬೇಕೇ ಬೇಕು, ಇಣುಕಿ ನೋಡಲೇ ಬೇಕು ಎಂಬ ಉತ್ಕಟ ಆಸೆ ಉಕ್ಕುತ್ತದೆ. ಕದ್ದು ಕಾಣುವ, ಮುಚ್ಚಿ ಕೇಳುವ ಚಪಲವಾಗುತ್ತದೆ. ಹಾಗೆ ಮಾಡುವುದು ತಪ್ಪು ಎಂದು ಸಂಪ್ರದಾಯ ಹೇಳುವುದರಿಂದ ಹಾಗೂ ತಪ್ಪಿಗೆ ಶಿಕ್ಷೆಯನ್ನೂ ವಿಧಿಸುವುದರಿಂದ ವ್ಯಕ್ತಿ ಸಂದಿಗ್ಧಕ್ಕೆ ಬೀಳುತ್ತಾನೆ. ಪ್ರಕೃತಿಗನುಗುಣವಾಗಿ ಒಳಮನಸ ನಿಜಪ್ರವೃತ್ತಿ (id) ಲೈಂಗಿಕ ವಿಚಾರಗಳನ್ನು ತಿಳಿದುಕೊಳ್ಳಲು ಹಾತೊರೆಯುತ್ತದೆ. ಕಾಮಾಕಾಂಕ್ಷಿಯಾಗುತ್ತದೆ. ಈ ವಯಸ್ಸಿನಲ್ಲಿ ನಿಜಪ್ರವೃತ್ತಿಯನ್ನು ಹತೋಟಿಯಲ್ಲಿಡುವ ಮೇಲಹಂ (super ego) ಸರಿಪ್ರಮಾಣದಲ್ಲಿರುವು

ದಿಲ್ಲ. ಅದು ಅತಿಯಾಗಿ ನಿಜಪ್ರವೃತ್ತಿಯನ್ನು ಪೂರ ತಿಳಿದುಬಿಡಬಹುದು. ಇಲ್ಲ ಬಡವಾಗಿ, ನಿಜಪ್ರವೃತ್ತಿಯ ಕೈ ಮೇಲಾಗಬಹುದು. ಈ ಎರಡರಲ್ಲೂ ಅಹಂ (ego) ಕಷ್ಟಕ್ಕೆ ಸಿಗುತ್ತದೆ. ನಿಜಪ್ರವೃತ್ತಿಯನ್ನು ಪೂರ ಅದುಮಿಡುವುದು ಅಪಾಯಕಾರಿ. ಜ್ವಾಲಾಮುಖಿಯಂತೆ ಒಂದು ದಿನ ಸಿಡಿಯುತ್ತದೆ. ಮೇಲಹಂ ಸೋತರೆ ತಪ್ಪಿತಸ್ಥ ಭಾವನೆ ಮನಸ್ಸನ್ನು ಆವರಿಸಿ, ಅಹಂ ಅನ್ನು ಚುಚ್ಚಿ ಚುಚ್ಚಿ ನೋಯಿಸುತ್ತದೆ. ಹೀಗೆ ವ್ಯಕ್ತಿ ತೀವ್ರ ಆತಂಕಕ್ಕೆ ತುತ್ತಾಗಿ, ಉದ್ವೇಗ, ಖಿನ್ನತೆ, ಉನ್ಮಾದ, ಗೀಳುಪೀಡೆ ಮುಂತಾದ ಚಿತ್ತ ಚಂಚಲತೆಗಳಿಗೆ ಒಳಗಾಗುತ್ತಾನೆ.

ಲೈಂಗಿಕ ವಿಚಾರ ಒಂದೇ ಅಲ್ಲ, ಇನ್ನಿತರ ಯಾವುದೇ ವಿಷಯಗಳಾಗಲೀ, ನಿಜ ಪ್ರವೃತ್ತಿಗೂ ಮೇಲಹಂಇಗೂ ತಿಕ್ಕಾಟ ತಂದರೆ ಆತಂಕ ಹಿಂದೆಯೇ ಬರುತ್ತದೆ.

ಉದಾಹರಣೆ : ಆನಂದನಿಗೆ ಈ ದಿನ ಸಿನೇಮಾಕ್ಕೆ ಹೋಗುವ ಆಸೆ, ಜೊತೆಗಾರರೆಲ್ಲ ಹೊರಟಿದ್ದಾರೆ. ಆದರೆ ಮೊನ್ನೆತಾನೇ ಅವನು ಮನೆಯವರೊಂದಿಗೆ ಸಿನೇಮಾ ನೋಡಿ ಬಂದಿದ್ದಾನೆ. ಜೊತೆಗಾರರ ಸಂಗಡ ಸಿನೇಮಾ ನೋಡುವುದೇ ಮಜ. ಈ ದಿನ ಮತ್ತೆ ಹೋಗುತ್ತೇನೆ ಎಂದರೆ ಅಮ್ಮ ಬೈಯುತ್ತಾಳೆ. ಅಪ್ಪನಿಗೆ ತಿಳಿದರೆ ಸಿಟ್ಟಿಗೆದ್ದು ಬಡಿಯಲೂ ಬಹುದು. ಪದೇ ಪದೇ ಸಿನೇಮಾ ನೋಡುವುದು ಒಳ್ಳೆಯದಲ್ಲ ಎನ್ನುತ್ತಾಳೆ ಅಜ್ಜಿ. ಅವನ ನಿಜಪ್ರವೃತ್ತಿ ಸಂಗಡಿಗರೊಡನೆ ಕೂಡಿ ಸಿನೆಮಾ ನೋಡುವುದರ ಮಜವನ್ನು ನೆನಸಿಕೊಂಡು ಲೊಟ್ಟೆ ಹಾಕುತ್ತದೆ. ಆದರೆ ಮೇಲಹಂ, 'ಬೇಡ ಅದು ಒಳ್ಳೆಯದಲ್ಲ, ಹಿರಿಯರು ಒಪ್ಪುವುದಿಲ್ಲ ಎಂದು ಹಿತ ನುಡಿಯುತ್ತದೆ. ಎರಡೂ ಬಲವಾಗಿವೆ. ಆನಂದ ಸಂದಿಗ್ಧದಲ್ಲಿ ಚಡಪಡಿಸುತ್ತಾನೆ. ಅಮ್ಮನ ಹತ್ತಿರ ಬರುತ್ತಾನೆ ಸಿನೇಮಾಕ್ಕೆ ಹೋಗಲೆ ಎಂದು ಕೇಳಲು ಬಾಯಿ ತೆರೆಯುತ್ತಾನೆ. ಬೈದರೆ, ಬೇಡ ಎಂದು ಗದರಿದರೆ.... ಗಾಬರಿಯಿಂದ ಬಾಯಿ ಒಣಗಿ ಮಾತೇಹೊರಡದು. ಹೋಗಿ ಕುಳಿತುಕೊಂಡು ಓದೋಣ ಎಂದು ಕೂರುತ್ತಾನೆ. ಪುಸ್ತಕ ತೆರೆದರೆ ಪಾಠದ ಬದಲು ಸಿನೇಮಾ ಮಂದಿರ, ಭಿತ್ತಿ ಚಿತ್ರಗಳೇ ಕಾಣುತ್ತಾನೆ. ಮತ್ತೆ ಏಳುತ್ತಾನೆ....

ತನ್ನ ಸ್ನೇಹಿತೆ ತೆಗೆದುಕೊಂಡಿರುವ ಹೊಸ ನಮೂನೆಯ ಬಳೆ ನಿರ್ಮಲೆಯನ್ನು ಆಕರ್ಷಿಸಿದೆ. ತನಗೂ ಆ ತರಹದ ಬಳೆ ಬೇಕು ಎಂದು ಅವಳ ನಿಜಪ್ರವೃತ್ತಿ ಬಯಸುತ್ತಿದೆ. ಆದರೆ ಅಮ್ಮ ಒಪ್ಪುವುದಿಲ್ಲ ಎಂದು ಗೊತ್ತು. "ಹೋದವಾರವೇ ನಾಲ್ಕು ಜೊತೆ ಬಳೆ ತೆಗೆದುಕೊಂಡಿದ್ದೀಯಾ ಈಗ ಮತ್ತೆ ಏಕೆ. ದುಡ್ಡು ಕೊಳೀತಾ ಬಿದ್ದಿದೆಯೇನೇ" ಎಂದು ಬೈತಾಳೆ. ಮಧ್ಯಾಹ್ನ ಮೇಜಿನ ಮೇಲೆ ತಂದೆ ಇಟ್ಟ ಹಣದಲ್ಲಿ ಎರಡು ರೂಪಾಯಿ ತೆಗೆದರೆ ಹೇಗೆ? ಮನೆಯಲ್ಲಿ ಇಷ್ಟೊಂದು ಜನರಿದ್ದಾರೆ, ನಾನೇ ತೆಗೆದುಕೊಂಡದ್ದು ಎಂದು ಯಾರಿಗೆ ಗೊತ್ತಾಗುತ್ತೆ. ಆಸೆಬುರುಕ ನಿಜಪ್ರವೃತ್ತಿ ಯೋಚಿಸಿತು. ಮೇಲಹಂ ಒಡನೆಯೇ "ಏನೂ, ಕಳ್ಳತನ ಮಾಡುತ್ತೀಯಾ ಕೆಟ್ಟ ಹುಡುಗಿ" ಎಂದು ಎಚ್ಚರಿಸಿತು. ಈ ತಾಕಲಾಟದಲ್ಲಿ ಕೊನೆಗೆ ನಿಜಪ್ರವೃತ್ತಿಯೇ ಗೆದ್ದು, ನಿರ್ಮಲೆ ಹಣ ಕದ್ದು ಬಳೆ ಕೊಂಡಳು.

ಅಮ್ಮ ಕೇಳಿದಾಗ, "ಇವು ನನ್ನ ಸ್ನೇಹಿತೆಯವು. ಎರಡು ದಿನ ಹಾಕಿಕೊಂಡು ಕೊಟ್ಟು ಬಿಡುತ್ತೇನೆ" ಎಂದಳು. ಅಪ್ಪ ಹಣವನ್ನು ಎಣಿಸದೆ ಜೇಬಿಗೆ ಹಾಕಿಕೊಂಡದ್ದರಿಂದ ಅವಳ ಕಳ್ಳತನ ಯಾರಿಗೂ ತಿಳಿಯಲಿಲ್ಲ. ಆದರೆ ನಿರ್ಮಲೆಯ ಮನಸ್ಸು ಅಗ್ನಿಕುಂಡವಾಯಿತು. ಕೇವಲ ಎರಡು ಬಳೆಗಳಿಗಾಗಿ, ನಾನು ಕಳ್ಳತನ ಮಾಡಿದೆ; ಸುಳ್ಳು ಹೇಳಿದೆ. ನಾನು ತಪ್ಪು ಮಾಡಿದೆ. ದೇವರು ನನಗೆ ಒಳ್ಳೆಯದು ಮಾಡುವುದಿಲ್ಲ ಎಂದು ಖಿನ್ನಳಾದಳು. ತಪ್ಪಿತಸ್ಥರನ್ನು ದೇವರು ದಂಡಿಸುತ್ತಾನೆ ಎಂದು ನಂಬಿದ ಅವಳು, ತನಗೆ ಆಗುವ ಶಿಕ್ಷೆಯನ್ನು ನೆನೆದು ಆತಂಕಗೊಂಡಳು. ನಗು ಮಾಯವಾಯಿತು, ಊಟ ರುಚಿಸದಾಯ್ತು. ಕೆಟ್ಟ ಕನಸುಗಳಿಂದ ನಿದ್ರೆ ದೂರವಾಯ್ತು....

ರಘು ಅಕ್ಕ ಪಕ್ಕ ನೋಡಿ 'ಒಂದು ವಿಲ್ಸ್‌ಫಿಲ್ಟರ್' ಕೊಡಿ ಎಂದ. ಹೋಟೆಲಿನ ಮೂಲೆಯಲ್ಲಿ ಕುಳಿತು ಸಿಗರೇಟ್ ಹಚ್ಚಿ ಸೇದಿ ಆನಂದಿಸುತ್ತಿದ್ದ. ಮನೆಯಿಂದ ಬಹು ದೂರವಿರುವ ಹೋಟೆಲ್, ಗೊತ್ತಿರುವವರು ಯಾರೂ ಬರುವುದಿಲ್ಲ ಎಂದುಕೊಂಡ. ಧೂಮಪಾನದ ಸವಿಯಲ್ಲಿ ತನ್ಮಯನಾಗಿದ್ದ ಅವನು ಒಮ್ಮೆಗೇ ಬೆಚ್ಚಿದ. ಕಾಫಿಯ ಜೊತೆಗೆ ನೊಣ ಬಾಯಿಗೆ ಬಂದಂತೆ ಮುಖವಾಯಿತು. ತತ್‌ಕ್ಷಣ ಸಿಗರೇಟನ್ನು ಕೆಳಕ್ಕೆ ಹಾಕಿದ. ಅವನ ಸೋದರಮಾವ ಹೋಟೆಲೊಳಕ್ಕೆ ಬಂದಿದ್ದರು. ಇವನನ್ನು ನೋಡಿ ನಕ್ಕು ದೂರದಲ್ಲೇ ತಮ್ಮ ಗೆಳೆಯರೊಂದಿಗೆ ಕುಳಿತರು. ರಘುವಿನ ಎದೆ ನಗಾರಿ ಬಾರಿಸಿತು. ಬಾಯಿ ಒಣಗಿ ಕೈ ಕಾಲು ನಡುಗಿದವು, ಬವಳಿ ಬಂದಂತಾಯ್ತು. ಮಾವ ಅಪ್ಪನಿಗೇನಾದರೂ ತಾನು ಸಿಗರೇಟು ಸೇದುತ್ತಿದ್ದುದನ್ನು ತಿಳಿಸಿದರೆ ತನ್ನ ಗತಿ ಮುಗಿಯಿತು. ಕಷ್ಟಪಟ್ಟು ಕುರ್ಚಿಯಿಂದೆದ್ದು ಮನೆ ಸೇರಿದ. ಅಸಾಧ್ಯ ತಲೆನೋವು ಬಂತು ಮಲಗಿದ. ಮಾರನೇ ದಿನವೂ ನಿಂತಲ್ಲಿ ಕುಳಿತಲ್ಲಿ ಅದೇ ಯೋಚನೆ, ಮಾವ ಹೇಳಿಬಿಟ್ಟರೆ....ತೊಣಚಿಹೊಕ್ಕ ನಾಯಿಯಂತಾದ.'ದೇವರೇ ಇನ್ನೆಂದೂ ಸಿಗರೇಟ್ ಮುಟ್ಟುವುದಿಲ್ಲ, ಮಾವ ಅಪ್ಪನಿಗೆ ಈ ವಿಷಯ ಹೇಳದಂತೆ ನೋಡಿಕೋ, ನಿನಗೆ ಜೋಡಿ ಕಾಯಿ ಹೊಡೆಸುತ್ತೇನೆ' ಎಂದು ಹರಕೆ ಹೊತ್ತ! ಎರಡು ವಾರಗಳ ನಂತರ ಮಾವ ಮನೆಗೆ ಬಂದು ಆ ವಿಷಯ ಎತ್ತದೆ ರಘುವನ್ನು ಜಾಣಹುಡುಗನೆಂದು ಹೊಗಳಿದರು. ಆಗ ತಿಳಿಯಿತು, ಗೆಳೆಯರೊಂದಿಗೆ ಮಾತಿನಲ್ಲಿ ಮಗ್ನರಾಗಿದ್ದ ಅವರು, ಅವನು ಸಿಗರೇಟ್ ಸೇದುತ್ತಿದ್ದುದನ್ನು ಗಮನಿಸಿರಲಿಲ್ಲ ಎಂದು. ರಘುವನ್ನು ಬಾಧಿಸುತ್ತಿದ್ದ ಆತಂಕ ಮಾಯವಾಯಿತು....

ಹೀಗೆ ನಾನಾ ಕಾರಣಗಳಿಂದ ಬರುವ ಆತಂಕ ಹರೆಯದವರನ್ನು ಕಾಡುತ್ತದೆ. ಆತಂಕದ ಚಿಹ್ನೆಗಳು ಇವು: ವಿನಾಕಾರಣ ಗಾಬರಿ, ಏನೋ ಕೇಡಕು ಆಗಬಹುದೆಂಬ ಕಳವಳ, ಚಡಪಡಿಕೆ, ಸಮಾಧಾನವಿಲ್ಲದಿರುವುದು, ನಿಂತಲ್ಲಿ ನಿಲ್ಲಲು, ಕುಳಿತಲ್ಲಿ ಕೂರಲು ಆಗದಿರುವುದು, ಹೃದಯ ಬಡಿತ ಹೆಚ್ಚುತ್ತದೆ, ಎದೆ ಡವಡವಗುಟ್ಟುತ್ತದೆ. ಮೈ ಬಿಸಿಯಾಗಿ ಜ್ವರಬಂದಂತಾಗುತ್ತದೆ. ಹೊಟ್ಟೆಯಲ್ಲಿ ಸಂಕಟ, ಕೈ ಕಾಲು ನವಿರಾಗಿ ಅದುರುತ್ತವೆ.

ಬಾಯೊಣಗಿ ಮಾತು ತೊದಲುತ್ತದೆ. ಸುಸ್ತು, ನಿಶ್ಶಕ್ತಿ ಕಾಣಿಸಿಕೊಳ್ಳುತ್ತವೆ. ಮನಸ್ಸು ಚಂಚಲವಾಗಿ ಗ್ರಹಿಸುವ, ಕಲಿಯುವ ಶಕ್ತಿ ಕುಂದುತ್ತದೆ ಮರೆವು ಹೆಚ್ಚುತ್ತದೆ. ಸಾಮರ್ಥ್ಯ ಕಡಿಮೆಯಾಗಿ, ಮಾಡುವ ಕೆಲಸದಲ್ಲಿ ತಪ್ಪುಗಳಾಗುತ್ತವೆ. ಆಗ ಮತ್ತಷ್ಟು ಗಾಬರಿಯಾಗಿ ತೊಂದರೆಗಳು ದುಪ್ಪಟ್ಟಾಗುತ್ತವೆ. ಇದೊಂದು ವಿಷವರ್ತುಲವಾಗಿ ವ್ಯಕ್ತಿ ಕಂಗಾಲಾಗುತ್ತಾನೆ.

ಸುತ್ತ ಮುತ್ತಲಿನವರ ಸಹಾನುಭೂತಿ, ಮನೆಯವರ ಹಾಗೂ ಸಹೋದ್ಯೋಗಿಗಳ ಆಸರೆ, ಪ್ರೋತ್ಸಾಹ, ನೆರವು ಆತಂಕವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತವೆ. ಆತಂಕದ ಪ್ರಮಾಣ ಅತಿಯಾಗಿದ್ದರೆ, ಅವುಗಳ ಜೊತೆಗೆ ಉದ್ವೇಗ ನಿವಾರಕ ಔಷಧ, ಆತಂಕವನ್ನು ಕಡಿಮೆ ಮಾಡಬಲ್ಲ ಯೋಗಾಸನಗಳು, ಸಡಿಲಿಕೆ ವ್ಯಾಯಾಮಗಳು, ಮನೋಚಿಕಿತ್ಸೆ ಬೇಕಾಗಬಹುದು. ತಜ್ಞರ ಸಲಹೆ ಮತ್ತು ಚಿಕಿತ್ಸೆ ಅವಶ್ಯಕವಾಗುತ್ತವೆ.

ಪ್ರಾರ್ಥನೆ, ಭಕ್ತಿ, ಪೂಜೆ, ಧ್ಯಾನ, ಧಾರ್ಮಿಕ ಪುಸ್ತಕಗಳ ಪಠಣ, ಯಾತ್ರೆ ಮುಂತಾದ ಧಾರ್ಮಿಕ ಚಟುವಟಿಕೆಗಳು ಆತಂಕದ ಅಗ್ನಿಯನ್ನು ಆರಿಸಲು ಗಮನಾರ್ಹವಾಗಿ ನೆರವಾಗುತ್ತವೆ.

ಮನಸ್ಸಿಗೆ ತೃಪ್ತಿಯನ್ನು ತರುವ ಹಲವು ಆರೋಗ್ಯಕರ ಹವ್ಯಾಸಗಳು ಉದಾ:— ಸಂಗೀತ, ಚಿತ್ರಕಲೆ, ಸಾಹಿತ್ಯ ವಾಚನ, ಹೊರಾಂಗಣ ಅಥವಾ ಒಳಾಂಗಣ ಕ್ರೀಡೆಗಳು ಕೂಡ ಆತಂಕವನ್ನು ನಿವಾರಿಸುವಲ್ಲಿ ನೆರವಾಗುತ್ತವೆ.

ಖಿನ್ನತೆ

ರಾಜುವಿಗೆ ಕಳೆದ ಆರು ತಿಂಗಳಿಂದಲೂ ಹೊಟ್ಟೆನೋವು. ಹೆಚ್ಚು ಕಡಿಮೆ ದಿನವೂ ಬರುತ್ತದೆ. ಬಂದಾಗ ಹೊಟ್ಟೆ ಹಿಡಿದುಕೊಂಡು ಮಲಗಿಬಿಡುತ್ತಾನೆ. ಹತ್ತಾರು ಡಾಕ್ಟರುಗಳು ನೋಡಿದರು. ಬೇರಿಯಂ ಪರೀಕ್ಷೆಯೂ ಸೇರಿ ಎಲ್ಲ ಪರೀಕ್ಷೆಗಳೂ ಆದುವು, ನೋವಿನ ಕಾರಣ ತಿಳಿಯಲಿಲ್ಲ. ಹೊಟ್ಟೆ ಆಪರೇಷನ್ ಮಾಡಿ ನೋಡಿದರು, ಯಾವ ನ್ಯೂನತೆಯನ್ನೂ ಕಾಣದೆ ನಿರಾಶರಾದರು. ಕೊನೆಗೆ ಈ ನೋವು ಮಾನಸಿಕ ಕಾರಣದಿಂದ ಬಂದಿರಬಹುದೆಂದು ಊಹಿಸಿ ರಾಜುವನ್ನು ಮಾನಸಿಕ ಆಸ್ಪತ್ರೆಗೆ ಕಳುಹಿಸಿದರು. ಸಾಕಷ್ಟು ಶ್ರೀಮಂತ ತಂದೆ ತಾಯಿಗಳ ಎರಡನೇ ಮಗ. ಯಾವ ಕೊರತೆಯೂ ಇಲ್ಲ. ಓದಿನಲ್ಲಿ ಬುದ್ಧಿವಂತ. ಅವನ ಸಾಮಾಜಿಕ ಸಂಬಂಧವನ್ನು ಅರಿಯುವುದಕ್ಕಾಗಿ ವೈದ್ಯರು 'ನಿನಗೆಷ್ಟು ಜನ ಸ್ನೇಹಿತರಿದ್ದಾರಪ್ಪ' ಎಂದು ಪ್ರಶ್ನಿಸಿದಾಗ ರಾಜು ಬಿಕ್ಕಳಿಸಿ ಅಳತೊಡಗಿದ. ವೈದ್ಯರು ಸಮಾಧಾನ ಹೇಳಿ ಸಹಾನುಭೂತಿಯಿಂದ ವಿಚಾರಿಸಿದಾಗ ಅವನ ಹೊಟ್ಟೆನೋವಿನ ಕಾರಣ ಹೊರಬಿತ್ತು. ರಾಜು ಮತ್ತು ಗೋಪಿ ಲಂಗೋಟಿ ಗೆಳೆಯರು. ಸ್ಕೂಲಿಗೆ ಬಂದ ನಂತರವಂತೂ ಅವರದು ಗಳಸ್ಯ ಕಂಠಸ್ಯ ಸ್ನೇಹ. 'ಒಳ್ಳೆ ಗಂಡ ಹೆಂಡತಿಯರಂಗೆ ಇದ್ದಾರೆ' ಎಂದು ರಾಜುವಿನ ಅಕ್ಕನೇ ತಮಾಷೆ ಮಾಡಿದ್ದಳು. ಒಂದು ದಿನ ಹೊಟ್ಟೆನೋವು,ಜ್ವರ ಬಂದು ಮಲಗಿದ ಗೋಪಿ ಮತ್ತೆ ಏಳಲಿಲ್ಲ. ದೊಡ್ಡಾಸ್ಪತ್ರೆಯಲ್ಲಿ ಆಪರೇಷನ್ ಆದರೂ ಬದುಕಲಿಲ್ಲ. ಅಪೆಂಡಿಸೈಟಿಸ್ ಆಗಿ ಅದು ಒಡೆದು ಹೊಟ್ಟೆಯಲ್ಲೆಲ್ಲಾ ಕೀವು ತುಂಬಿತ್ತೆಂದು ಡಾಕ್ಟರು ಹೇಳಿದರಂತೆ. ರಾಜು ದುಃಖತಪ್ತನಾದ, ಒಂದು ತಿಂಗಳು ಗೋಪಿಯನ್ನು ನೆನೆಸಿಕೊಂಡು ಅತ್ತ. ಕ್ರಮೇಣ ದುಃಖ ಹಿಂಗಿದಂತೆ ಕಂಡರೂ ಮೊದಲಿನ ಲವಲವಿಕೆ ಬರಲಿಲ್ಲ ಯಾಂತ್ರಿಕವಾಗಿ ಶಾಲೆಗೆ ಹೋಗತೊಡಗಿದ. ಗೋಪಿ ಕೂರುತ್ತಿದ್ದ ಜಾಗವನ್ನು ಕಂಡಾಗ ಹೊಟ್ಟೆ ಹಿಡಿದು, ಧ್ವನಿ ಉಡುಗುತ್ತಿತ್ತು. ಬಳಿಕ ನೋವು ಕಾಣಿಸಿಕೊಂಡಿತು ಅಗಲಿದ ಗೆಳೆಯನಿಗಾಗಿ ಅವನ ದುಃಖ ಪೀಡಿತ ಮನಸ್ಸು ಹೊಟ್ಟೆನೋವಿನ ಮೂಲಕ ತನ್ನ ತಾಪವನ್ನು ವ್ಯಕ್ತಪಡಿಸುತ್ತಿತ್ತು. ಸೂಕ್ತ ಮನೋಚಿಕಿತ್ಸೆಯಿಂದ ರಾಜು ಗುಣಮುಖನಾದ.

ಮುಮ್ತಾಜಳ ತಲೆನೋವು

'ಕಳೆದ ಒಂದು ತಿಂಗಳಿನಿಂದ ಇವಳಿಗೆ ವಿಪರೀತ ಸಿರ್‌ಕ ದರ್ದ್ ಡಾಕ್ಟ್ರೆ' ಕಿವಿ, ಮೂಗು, ಗಂಟಲು ಡಾಕ್ಟ್ರು, ಕಣ್ಣಿನ ಡಾಕ್ಟ್ರು ಎಲ್ಲ ನೋಡಿ ಏನೂ ತೊಂದರೆ ಇಲ್ಲ ಅಂತ ಹೇಳಿ ಯಾವುದೋ ಮಾತ್ರೆ ಕೊಟ್ಟರು. ಅವನ್ನು ತಿಂದರೂ ಇವಳ ತಲೆನೋವು ನಿಲ್ಲಲಿಲ್ಲ. ನಾವು ನರಗಳ ಮಿಸ್ಟೇಕ್ ಇರಬಹುದು ಎಂದು ನರಗಳ ಡಾಕ್ಟ್ರಿಗೂ ತೋರಿಸ್ದೋ. ಅವರು ನಿಮ್ಮ ಹತ್ತಿರ ಹೋಗಿ ಎಂದರು. 'ಅವಳ ಮಿದ್ಲಿಗೇ ಏನಾದ್ರೂ ಆಗಿಬಿಟ್ಟದೆಯೋ ನೋಡಿ' ಎಂದಳು ಮುಮ್ತಾಜಳ ತಾಯಿ. "ತಲೆ ಎಲ್ಲಿ ನೋಯುತ್ತೆ ನಿಂಗೆ" ಎಂದಾಗ ಇಡೀ ತಲೆಯ ಮೇಲೆಲ್ಲಾ ಕೈ ಆಡಿಸಿ 'ಇಲ್ಲೆಲ್ಲಾ ನೋಯುತ್ತೆ' ಎಂದು ಮುಖ ಸಿಂಡರಿಸಿದಳು. ನೋಡಲು ಲಕ್ಷಣವಾದ ಹುಡುಗಿ, ತಾಯಿ ಸಂಪ್ರದಾಯದಂತೆ ಬುರ್ಖಾ ಧರಿಸಿದ್ದಳು. ಇವಳು ಷರ್ಟ್ ಪ್ಯಾಂಟ್ ಹಾಕಿದ್ದಳು. 'ತಲೆ ನೋವಲ್ಲದೆ ಇನ್ನೇನು ತೊಂದರೆ' ಎಂದೆ. 'ಬೇಜಾರು ಡಾಕ್ಟ್ರೆ ಯಾವುದರಲ್ಲೂ ಇಂಟರೆಸ್ಟ್ ಇಲ್ಲ' ಹಸಿವಾಗೋದಿಲ್ಲ. ಒಂದೊಂದು ದಿನ ನಿದ್ದೆನೂ ಬರೋದಿಲ್ಲ' ಎಂದಳು 'ಸಿಟ್ಟು ಕೋಪ ಬರುತ್ತಾ' ಎಂದು ವಿಚಾರಿಸಿದೆ. 'ಅಯ್ಯೋ ಅದನ್ಯಾಕೆ ಕೇಳ್ತೀರಿ, ಮಾತಾಡಿಸಿದರೆ ಸಾಕು ಮೇಲೆ ಬೀಳ್ತಾಳೆ. ಬಹುತ್ ನಾರಾಜ್ ಡಾಕ್ಟ್ರೇ' ಎಂದಳು ತಾಯಿ. 'ಹೌದೇನಮ್ಮ, ಏಕೆ ಅಷ್ಟೊಂದು ಕೋಪ, ಯಾರ ಮೇಲೆ ಕೋಪ' ನಗುತ್ತಾ ಕೇಳಿದೆ. 'ಇನ್ಯಾರ ಮೇಲೆ ಡಾಕ್ಟ್ರೆ, ನನ್ ಮೇಲೆ. ಅವಳು ಹೇಳ್ದಂಗೆ ನಾನು ಕುಣಿಯಬೇಕು. ದೇಖೋ ಸಾಬ್ ನಾವು ಮುಸಲ್ಮಾನರು ರೀತಿರಿವಾಜಿನವರು ಹೊರಗಡೆ ಬಂದ್ರೆ ಬುರ್ಖಾ ಆಕ್ಕೊತೀವಿ. ಆದರೆ ಜಮಾನ ಬದಲಾಗ್ತಿದೆ. ಇವರಿಗೆ ಅದೊಂದು ಬೇಕಿಲ್ಲ. ಊರೆಲ್ಲಾ ತಿರುಗಬೇಕು, ಷರ್ಟು ಇಜಾರ ಹಾಕೋಬೇಕು, ಸ್ನೇಹಿತರೊಂದಿಗೆ ಸಿನೇಮಾ, ಪಿಕ್‌ನಿಕ್ ಹೋಗಬೇಕು. ಇದನ್ನೆಲ್ಲಾ ಮಾಡಾಕೆ ಬಿಟ್ಟರೆ ನಮ್ಮ ಜನ ಸುಮ್ಮನಿರ್ತಾರಾ ? ಹೋದ ತಿಂಗಳು ಇವಳ ಸ್ಕೂಲ್ ಹುಡುಗ್ರು ತಾವು ತಾವೇ ಬ್ಲಫ್, ತಲಕಾಡು, ಮೈಸೂರು ಅಂತ ಮೂರು ದಿವಸ ಟ್ರಿಪ್‌ಗೆ ಹೋದರು. ನಾನು ಓಯ್ತೀನಿ ಅಂತ ಇವಳು ಹಟ ಮಾಡಿದಳು, ನಾನು ಬಿಲ್‌ಕುಲ್ ಆಗಲ್ಲಾ ಅಂದೆ. ಮೇಷ್ಟ್ರುಗಳಾಗಲೀ ದೊಡ್ಡವರಾಗಲೀ ಯಾರೂ ಹೋಗ್ತಾ ಇಲ್ಲ, ಬರೀ ಹುಡುಗರು. ಹೆಂಗೆ ಕಳಿಸೋದು ಡಾಕ್ಟ್ರೆ. ಅತ್ತೂ ಕರೆದು ರಂಪ ಮಾಡಿದಳು, ಉಪವಾಸ ಮಾಡಿದಳು, ತಲೆನೋವು ಬರಿಸಿಕೊಂಡಳು. ಅತ್ತು ಅತ್ತು ಮಿದುಳು ವೀಕ್ ಆಗ್ಬುಟ್ಟದೆ ಅಂತ ಕಾಣ್ತದೆ ಡಾಕ್ಟ್ರೆ'. ಮಗಳ ಖಾಯಿಲೆಯನ್ನು ಅವಳ ತಾಯಿಯೇ ಸರಿಯಾಗಿ ಗುರುತಿಸಿದ್ದಳು. "ಡಾಕ್ಟ್ರೆ ಮನೆ ಒಂದು ಜೈಲು ಆಗ್ಬಿಟ್ಟದೆ. ಎಲ್ಲೂ ಹೋಗೋಹಾಗಿಲ್ಲ. ಯಾರ ಜೊತೆ ಮಾತಾಡೋ ಹಾಗಿಲ್ಲ. ನನ್ನ ಮೇಲೆ ಸ್ವಲ್ಪಾನೂ ನಂಬಿಕೆ ಇಲ್ಲ. ಹೊಟ್ಟೆ ತುಂಬಾ ಊಟ ಹಾಕಿ, ಮೈ ತುಂಬಾ ಬಟ್ಟೆ ತಗೊಟ್ಟುಬಿಟ್ಟು, ಮೇಲೊಂದು ಒಡವೆ ಹಾಕಿಬಿಟ್ಟರೆ ಅವರ ಪ್ರೀತಿ ಮುಗಿದು ಹೋಯತು. ಇ ವ ರ ನ್ನು ನೋಡಿದರೆ, ಒಂದು ಕಡೆ ಸಿಟ್ಟು ಬರುತ್ತೆ,

ಇನ್ನೊಂದು ಕಡೆ ತಾನೇ ಪ್ರಪಂಚ ಎಂದು ವರ್ತಿಸುವ ಇವರನ್ನು ಕಂಡರೆ ಮರುಕವಾಗುತ್ತೆ' ಎಂದಳು ಮುಮ್ತಾಜ್.

ಹದಿವಯಸ್ಸಿನಲ್ಲಿ ಖಿನ್ನತೆ ಆತಂಕದಂತೆಯೇ ಸಾಮಾನ್ಯವಾಗಿ ಕಂಡುಬರುತ್ತದೆ. ಆತಂಕಕ್ಕೆ ಕಾರಣವಾದ ವಿಚಾರಗಳೇ ಖಿನ್ನತೆಗೂ ಕಾರಣವಾಗಬಹುದು. ಮನೆಯವರೊಂದಿಗೆ ವೈಮನಸ್ಸು, ವಿದ್ಯಾಭ್ಯಾಸದಲ್ಲಿನ ತೊಂದರೆಗಳು, ವಿಫಲತೆಗಳು, ಪ್ರೀತಿಪಾತ್ರರ ಅಗಲಿಕೆ, ಸಾವು, ಕಷ್ಟ ನಷ್ಟಗಳು, ನೋವು ನಿರಾಶೆಗಳು ಖಿನ್ನತೆಯನ್ನು ತರುತ್ತವೆ. ಏನೋ ಬೇಸರ ಎಲ್ಲದರಲ್ಲೂ ನಿರಾಸಕ್ತಿ, ಹಸಿವಿಲ್ಲದಿರುವಿಕೆ; ಅಮ್ಮ ಗೋಡಂಬಿ, ದ್ರಾಕ್ಷಿ ಹಾಕಿ ಕೇಸರಿಬಾತು ಮಾಡಿಕೊಟ್ಟರೂ ರುಚಿ ಇಲ್ಲದಿರುವಿಕೆ; ನಿದ್ರೆ ಸರಿಯಾಗಿ ಬಾರದಿರುವುದು, ಲವಲವಿಕೆ ಇಲ್ಲದೆ ಮೈ ಜಡವೆನಿಸುವುದು, ಸುಸ್ತು, ಸಂಕಟ ಖಿನ್ನತೆಯ ಸಾಮಾನ್ಯ ಚಿಹ್ನೆಗಳು. ಖಿನ್ನತೆ ಜಾಸ್ತಿ ಆಗಿಬಿಟ್ಟರೆ ಆತ್ಮಹತ್ಯೆಯ ಯೋಚನೆಗಳೂ ಬರಬಹುದು. ಕೆಲವು ಸಾರಿ ರಾಜುವಿಗಾದಂತೆ, ಮುಮ್ತಾಜಳಿಗಾದಂತೆ ಶಾರೀರಿಕ ತೊಂದರೆಗಳ ಮೂಲಕ ಖಿನ್ನತೆ ಕಾಣಿಸಕೊಳ್ಳುತ್ತದೆ. ಮೈ ಕೈ ನೋವು, ತಲೆಭಾರ, ತಲೆಸುತ್ತು, ನಿಶ್ಶಕ್ತಿ, ನರಗಳ ಎಳೆತ, ಜಳುಕು ಎಂದು ಇವರು ಮನೆವೈದ್ಯರಲ್ಲಿಗೆ ಹೋಗಿ ನೋವು ನಿವಾರಕ ಮಾತ್ರೆಗಳಿಗೆ ಅಥವಾ ಒಳ್ಳೆ ಟಾನಿಕ್‌ಗೆ ದುಂಬಾಲು ಬೀಳುತ್ತಾರೆ. ಖಿನ್ನತೆಯ ಕಾರಣವನ್ನು ಹುಡುಕಿ ಚಿಕಿತ್ಸೆ ನಡೆಸದಿದ್ದರೆ ಶೀಶೆಗಟ್ಟಳೆ ಟಾನಿಕ್‌ಗಳು, ನೂರಾರುಮಾತ್ರೆಗಳು ಅವರಿಗೆ ಗುಣವನ್ನು ತರುವುದಿಲ್ಲ. ನೋವು ಖಿನ್ನತೆಯಿಂದ ಬಂದಿದೆ ಎಂದು ತಿಳಿಯುವುದು ಹೇಗೆ ? ನೋವಿನ ಜೊತೆಗೆ ಬೇಸರ, ನಿರಾಸಕ್ತಿ ಇದ್ದರೆ, ನೋವು ನಿವಾರಕ ಔಷಧ ತಿಂದರೂ ನೋವು ಕಡಿಮೆಯಾಗದಿದ್ದರೆ, ಮನೋವೈದ್ಯರನ್ನು ಕಾಣುವುದು ಉಚಿತ.

ಗೀಳುಪೀಡೆ

ಕೈತೊಳೆಯುವ ಕಮಲಿ

'ನಮಗೆ ಸಾಕಾಗಿಹೋಗಿದೆ ಡಾಕ್ಟ್ರೆ' ಬೆಂಗಳೂರಿನಲ್ಲಿ ಮೊದಲೇ ನೀರಿನ ಬರ. ಇವಳು ಮುಖ ತೊಳೆಯೋದಿಕ್ಕೆ ಮೂರು ಬಕೆಟ್ ನೀರು ಬೇಕು. ಸ್ನಾನ ಮಾಡೋಕೆ ಕುಳಿತರೆ ಹಂಡೆ, ತೊಟ್ಟಿಗಳಲ್ಲಿರೋ ನೀರೆಲ್ಲಾ ಖಾಲಿ. ದಿನಕ್ಕೆ ಲೆಕ್ಕವಿಲ್ಲದಷ್ಟು ಸಾರಿ ಸೋಪ್ ಹಾಕಿ ಕೈ ತೊಳೆಯುತ್ತಾಳೆ. ವಾರಕ್ಕೆ ಎರಡು ಸೋಪ್ ಖರ್ಚು ಮಾಡ್ತಾಳೆ. ನಾವು ಗದರಿದೆವು, ಬೈದೆವು, ಕೊನೆಗೆ ಎರಡು ಏಟು ಹಾಕಿದೆವು. ಏನೂ ಪ್ರಯೋಜನ ಆಗಲಿಲ್ಲ. ಕೊನೆಗೆ ಯಾರೋ ಮೆಂಟಲ ಅಸ್ಪತ್ರೆಗೆ ಕರಕೊಂಡು ಹೋಗಿ ಅಂದರು. ಇಲ್ಲಿಗೆ ಬಂದೆವು' ಎಂದರು ಗೌರಮ್ಮ.

"ಹಾಗೆ ಮಾಡಬಾರದು ಅಂತ ನನಗೂ ಗೊತ್ತು ಡಾಕ್ಟ್ರೆ. ಆದರೆ ಕೈ ಕೊಳೆಯಾಗಿದೆ, ಮೈ ಗಲೀಜಾಗಿದೆ ಅನ್ನೋ ಆಲೋಚನೆ ಬರ್‍ತಾನೆ ಇರುತ್ತೆ. ಹಾಗೇನೂ ಇಲ್ಲ ಅಂತ ಗೊತ್ತು. ಆದರೆ ಆರೀತಿ ಯೋಚನೆ ಬಂದಾಗ ಮೈ ಕೈ ಸರಿಯಾಗಿ ತೊಳಕೋಬೇಕು. ತೊಳೀದೆ ಹೋದರೆ ಬಹಳ ಮುಜುಗರ, ಚಡಪಡಿಕೆ ಆಗುತ್ತೆ. ನಾನೇನ್ಮಾಡಲಿ ನೀವೇ ಹೇಳಿ" ಎಂದು ಕಮಲಿ ತನ್ನ ಅಸಹಾಯಕತೆಯನ್ನು ತೋಡಿಕೊಂಡಳು.

ಈ ರೀತಿ ಬೇಡದ, ಅರ್ಥವಿಲ್ಲದ ಆಲೋಚನೆಗಳು ಬರಲು ಕೆಲವು ಸಾರಿ ಮನಸ್ಸಿನ ಕಣಜಗಳಲ್ಲಿ ಮುಚ್ಚಿಟ್ಟ ಅಹಿತ ಅನುಭವ, ಆಸೆಗಳು ಕಾರಣವಾಗಬಲ್ಲುವೆಂದು ತಿಳಿದ ಮನೋವೈದ್ಯರು ಔಷಧದ ಸಹಾಯದಿಂದ ಕಮಲಿಯನ್ನು ಅರೆಪ್ರಜ್ಞಾವಸ್ಥೆಗೊಯ್ದು ಕೇಳಿದರು. ಸಾಲಾಗಿ ನಾಲ್ಕನೇ ಹೆಣ್ಣಾಗಿ ಹುಟ್ಟಿದ ಕಮಲಳನ್ನು ಕಂಡರೆ ತಂದೆ ತಾಯಿಗಳಿಗೆ ಅಷ್ಟೇನೂ ಅಕ್ಕರೆ ಇರಲಿಲ್ಲ. ಛೇ, ಹೆಣ್ಣು ಮಗು ಎಂದು ಛೇಡಿಸಿಯೇ ಬೆಳೆಸಿದರು. 'ನಾವೇನು ಪಾಪ ಮಾಡಿದೆವು ಅಂತ ದೇವರು ನಮಗೆ ಬರೀ ಹೆಣ್ಣು ಮಕ್ಕಳನ್ನು ಕೊಟ್ಟ' ಎಂದು ಅವಳೆದುರೇ ಹಲುಬಿದರು. ಬುದ್ಧಿ ತಿಳಿದ ಮಗು ಕಮಲಿಗೆ ತಾನು ಪಾಪದ ಮಗು

ಜೇಡವ ಮಗುವಾಗಿದ್ದೇನೆ ಎಂದು ತಿಳಿಯಲು ಕಷ್ಟವಾಗಲಿಲ್ಲ. ವರ್ಷದ ಹಿಂದೆ ಪಕ್ಕದ ಮನೆಯ ರಾಜ 'ತಮಾಷೆ, ತೋರಿಸುತ್ತೇನೆ ಬಾ' ಎಂದು ಕರೆದು, ಕುತೂಹಲದಿಂದ ಹತ್ತಿರ ಹೋದಾಗ ಬಾಗಿ ಕೆನ್ನೆಗೆ ಮುತ್ತಿಟ್ಟು ಇದೇ ತಮಾಷೆ ಎಂದಾಗ ಛೀ ಎಂಜಲು ಎಂದು ಓಡಿಬಂದು ಸೋಪಾಕಿ ತಿಕ್ಕಿ ತೊಳೆದರೂ ಎಂಜಲು ಹೋಗಲಿಲ್ಲ ಎನಿಸಿತು. ಮೊದಲೇ ಪಾಪದಿಂದ ಹುಟ್ಟಿದವಳು ಈಗ ರಾಜ ಮುತ್ತಿಟ್ಟು ಎಂಜಲು ಮಾಡಿದ್ದಾನೆ, ತಾನು ಕೊಳಕಿ ಮೈಲಿಗೆಯಾದವಳು ಎನಿಸಿತು. ಅಂದಿನಿಂದ ಮೈಲಿಗೆಯ ಭೂತ ಅವಳನ್ನು ಕಾಡಲಾರಂಭಿಸಿತು. ಈ ಭೂತೋಚ್ಚಾಟನೆಗೆ ತೊಳೆಯುವ ಕೆಲಸವನ್ನು ಬಿಡದೆ ಕೈಗೊಂಡಿದ್ದಳು.

ಅನುಮಾನದ ಅರವಿಂದ

ವಾರ್ಡ್ ಕೆಲಸ ಮುಗಿಸಿ, ನನ್ನ ರೂಮಿನಲ್ಲಿ ಕುಳಿತು ವೈದ್ಯಕೀಯ ಪತ್ರಿಕೆಯನ್ನು ತಿರುವಿಹಾಕುತ್ತಿದ್ದೆ. ಬಾಗಿಲಲ್ಲಿ ಇಬ್ಬರು ಹದಿವಯಸ್ಸಿನ ಹುಡುಗರು ನಿಂತು ಒಳಬರಲು ಸಂಕೋಚಪಡುತ್ತಿದ್ದರು. ಒಳಕ್ಕೆ ಕರೆದಾಗ ಹಿಂಜರಿಯುತ್ತಲೇ ಬಂದು ಕುಳಿತರು. ನನ್ನಿಂದೇನಾಗಬೇಕು ನಿಮಗೆ ಎಂದೆ. ಅವರಲ್ಲಿ ಒಬ್ಬ "ಸಾರ್, ನಾವಿಬ್ಬರೂ ಪಿ.ಯು.ಸಿ.ಯಲ್ಲಿ ಓದ್ತಿದೇವೆ. ಕಾಲೇಜು ಹಾಸ್ಟೆಲಿನಲ್ಲಿ ಒಂದೇ ರೂಮಿನಲ್ಲಿದ್ದೇವೆ. ನನ್ನ ಹೆಸರು ರಾಮಕೃಷ್ಣ. ಈತ ಅರವಿಂದ. ಈತನಿಗೆ ಒಂದು ವಿಚಿತ್ರವಾದ ಅಭ್ಯಾಸವಿದೆ. ನಿಮ್ಮ ಸಲಹೆ ಪಡೆಯೋಣ ಅಂತ ಬಂದೆವು" ಎಂದ. "ಔಟ್‌ಪೇಷೆಂಟ್ ವಿಭಾಗಕ್ಕೆ ಬಂದರೆ ವಿವರವಾಗಿ ನೋಡ್ತೇವಪ್ಪ" ಎಂದೆ. "ಆತನ ವಿಚಿತ್ರ ಅಭ್ಯಾಸ ಖಾಯಿಲೇನೋ ಅಲ್ಲವೋ ಅಂತ ತಿಳ್ಕೊಂಡು ಆಮೇಲೆ ಔಟ್‌ಪೇಷೆಂಟ್ ವಿಭಾಗಕ್ಕೆ ಹೋಗೋಣ ಅಂತ ಸಾರ್" ಎಂದಾಗ "ಆಯ್ತು, ಏನು ಇವನ ವಿಚಿತ್ರ ಅಭ್ಯಾಸ" ಎಂದೆ.

ಇವನು ಬಹಳ ಅಚ್ಚುಕಟ್ಟು ಸಾರ್. ರೂಮ್‌ನಲ್ಲಿ ಒಂದು ಚೂರು ಧೂಳಿರೋ ಹಾಗಿಲ್ಲ. ಸ್ವೀಪರ್ ಸರಿಯಾಗಿ ಗುಡಿಸೋಲ್ಲ ಅಂತ ತಾನೇ ದಿನಕ್ಕೆ ನಾಲ್ಕೈದು ಸಾರಿ ಗುಡಿಸುತ್ತಾನೆ. ಅವನ ಸಾಮಾನುಗಳು ಅವನು ಹೇಗಿಟ್ಟಿರ್ತಾನೋ ಹಾಗೇ ಇರಬೇಕು. ಸ್ವಲ್ಪ ಹೆಚ್ಚೂ ಕಡಿಮೆಯಾದರೆ ಓದೋದು ಬಿಟ್ಟು, ಊಟ, ನಿದ್ದೆ ಬಿಟ್ಟು ಸರಿಯಾಗಿ ಜೋಡಿಸ್ತಾನೆ. ಇದೆಲ್ಲಾ ಹೋಗಲಿ, ರಾತ್ರಿಹೊತ್ತು ಬೋಲ್ಟ್ ಹಾಕಿದೆಯೋ ಇಲ್ಲವೋ ಅಂತ ಎಂಟ್ಹತ್ತು ಸಾರಿ ನೋಡ್ತಾನೆ. ಯಾಕೋ ಹಿಗ್ಮಾಡ್ತೀಯಾ ಅಂದ್ರೆ, ನಾನೇನ್ಮಾಡಲೋ ಬೋಲ್ಟ್ ಹಾಕಿರೋದು ಗೊತ್ತಿದ್ದರೂ, ಹಾಕಿಲ್ಲದೆ ಹೋದರೆ ಎನ್ನೋ ಅನುಮಾನ ಬಲವಾಗುತ್ತೆ, ಆಗ ಹೋಗಿ ಚೆಕ್ ಮಾಡಲೇಬೇಕು ಅನ್ನಿಸಿ ಬಿಡುತ್ತೆ ಅಂತಾನೆ. ಇದನ್ನು ಬಿಟ್ಟರೆ ಇವನಿಗೆ ಇನ್ಯಾವ ತೊಂದರೆಯೂ ಇಲ್ಲ. ಏನು ಮಾಡ್ಬೇಕು ಅಂತ ನೀವು ಹೇಳಬೇಕು ಸಾರ್" ಎಂದ ರಾಮಕೃಷ್ಣ. "ಇದೊಂದು ರೀತಿಯ ಮನೋಬೇನೆ, ಇದಕ್ಕೆ ಚಿಕಿತ್ಸೆ ಅಗತ್ಯ" ಎಂದು ಅರವಿಂದನಿಗೆ ಆಸ್ಪತ್ರೆಯಲ್ಲಿ ಹೇಳಿದರು.

ಕಮಲಿಯನ್ನು ಕಾಡಿಸುತ್ತಿದ್ದ ಮೈ ಕೈ ತೊಳೆಯುವ ಚಟವನ್ನು, ಅರವಿಂದನ ಅತಿ ಅನುಮಾನವನ್ನು ಗೀಳುಪೀಡೆ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಹದಿವಯಸ್ಸಿನಲ್ಲಿ ಪ್ರಾರಂಭವಾಗುವ ಈ ಚಿತ್ತ ಚಂಚಲ ಹಲವರಲ್ಲಿ ಸ್ವಲ್ಪ ಪ್ರಮಾಣವಲ್ಲಿದ್ದು ಕ್ರಮೇಣ ಜಾಸ್ತಿಯಾಗಿ, 'ಯಾಕೋ ವಿಚಿತ್ರವಾಗ್ತಿದೆ. ಡಾಕ್ಟರಿಗೆ ತೋರಿಸಬೇಕು' ಎನ್ನುವಂತಾಗಲು ಕೆಲವಾರು ವರ್ಷಗಳೇ ಬೇಕಾಗುತ್ತದೆ. ತನ್ನದಲ್ಲದ ಅಸಹಜವಾದ, ಅರ್ಥಹೀನವಾದ ಆಲೋಚನೆಗಳು ಪದೇ ಪದೇ ಬರುತ್ತಿರುತ್ತವೆ. ಕೆಟ್ಟ ಗ್ರಾಮಫೋನ್ ರೆಕಾರ್ಡಿನಂತೆ ಹಾಡಿದ್ದೇ ಹಾಡೋ ಕಿಸಬಾಯಿ ದಾಸ ಎಂಬಂತೆ ತಲೆ ಚಿಟ್ಟೆಡಿಸುತ್ತವೆ. ಅದನ್ನು ತಡೆಗಟ್ಟಲು ವಿಫಲನಾಗಿ, ತೀವ್ರ ಆತಂಕಕ್ಕೊಳಗಾಗುತ್ತಾನೆ. ಕೆಲವು ಸಾರಿ ಈ ಆತಂಕ ಕಳೆಯಲು ಕೆಲವು ಚಟುವಟಿಕೆಗಳಲ್ಲಿ ತೊಡಗುತ್ತಾನೆ. ಉದಾ:— ಕೊಳೆಯಾಗಿದೆ ಎಂಬ ಯೋಚನೆ ಬಂದಾಗ, ತೊಳೆಯುವುದು. ಯೋಚನೆಯನ್ನು ತುಂಡರಿಸಲು ಮೂರು ಬಾರಿ ಚಿಟಿಕೆ ಹೊಡೆಯುವುದು ಇತ್ಯಾದಿ. ಗೀಳುಪೀಡೆಗೆ ಒಳಗಾದವರಲ್ಲೆಲ್ಲಾ ಅವರ ಮನಸ್ಸಿನ ಕಣಜಗಳಲ್ಲಿ ಯಾವುದಾದರೂ ಆತಂಕಕಾರಿ ವಿಷಯ ಹುದುಗಿರುತ್ತದೆ, ಎಂದು ಹೇಳಲಾದರೂ, ಕೆಲವರಲ್ಲಿ ಮಾತ್ರ ಅದರ ಸುಳಿವು ವೈದ್ಯರಿಗೆ ಸ್ಪಷ್ಟವಾಗಿ ದೊರಕುತ್ತದೆ.

ಗೀಳುಪೀಡೆ ಸುಲಭವಾಗಿ ಚಿಕಿತ್ಸೆಗೆ ಬಗ್ಗುವುದಿಲ್ಲ. ರೋಗಿಯನ್ನೂ ವೈದ್ಯನನ್ನೂ ಸಾಕಷ್ಟು ಸತಾಯಿಸುತ್ತವೆ. ನಡವಳಿಕೆ ಚಿಕಿತ್ಸೆ, ಮನೋಚಿಕಿತ್ಸೆ, ಔಷಧಗಳು, ಶಸ್ತ್ರ ಚಿಕಿತ್ಸೆ ಬಳಕೆಯಲ್ಲಿರುವ ಅಸ್ತ್ರಗಳು.

ಕೆಲವು ಸಾರಿ ಈ ಗೀಳುಪೀಡೆ ನಿರುಪದ್ರವಿಯಾಗಿರುತ್ತದೆ. ವಿಜ್ಞಾನಿಗಳಿಗೆ, ಪುಸ್ತಕ ಭಂಡಾರದ ಅಧಿಕಾರಿಗೆ, ಅಂಕಿ ಅಂಶ ತಜ್ಞರಿಗೆ ಗೀಳುಪೀಡೆ ವ್ಯಕ್ತಿತ್ವ ಒಂದು ವರವಾಗುತ್ತದೆ. ಈ ವ್ಯಕ್ತಿತ್ವದಿಂದ ಅವರ ಪ್ರತಿಯೊಂದು ಕೆಲಸವೂ ಅಚ್ಚುಕಟ್ಟಾಗಿ ನಿಖರವಾಗುವುದರಿಂದ ತಮ್ಮ ವೃತ್ತಿಯಲ್ಲಿ ಹೆಸರು ಗಳಿಸುತ್ತಾರೆ.

ಉನ್ಮಾದ ಚಂಚಲತೆ

ಪರಿಮಳ ಸುಂದರವಾದ ಹುಡುಗಿ. ಹತ್ತು ಜನರಲ್ಲಿ ಎದ್ದುಕಾಣುವ ರೂಪ. ಹದಿವಯಸ್ಸು ಅವಳಿಗೆ ಮತ್ತಷ್ಟು ಚೆಲುವು ತಂದಿದೆ. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುತ್ತದೆ. ಇಂತಹ ಮಗಳನ್ನು ಪಡೆದು ಬೀಗುತ್ತಿದ್ದ ಅವಳ ತಂದೆತಾಯಿಗಳು ಈಗ ಚಿಂತಾಕ್ರಾಂತರಾಗಿದ್ದಾರೆ. ಒಂದು ತಿಂಗಳ ಹಿಂದೆ ಕಾಲೇಜಿನಿಂದ ಹಿಂದಿರುಗಿದ ಅವಳು ಮೈಗೆ ಹುಶಾರಿಲ್ಲವೆಂದು ಮಲಗಿದವಳು ಇಂದಿಗೂ ಹಾಗೆಯೇ ಇದ್ದಾಳೆ. ದಿನಕ್ಕೆರಡು ಬಾರಿ ಅಥವಾ ಮೂರು ಬಾರಿ 'ಆಂ' ಎಂದು ಕಿರುಚಿ ಪ್ರಜ್ಞೆತಪ್ಪುತ್ತಾಳೆ. ಆಗ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತದೆ. ಐದು ನಿಮಿಷಗಳ ನಂತರ ಕಣ್ತೆರೆದು, ನರಳುತ್ತಾಳೆ. ನನಗೇನಾಗಿದೆ ಎಂದು 'ಏನಾಗುತ್ತಮ್ಮ ನಿನಗೆ' ಎಂದು ಕೇಳಿದವರನ್ನೇ ಮರು ಪ್ರಶ್ನಿಸುತ್ತಾಳೆ. ಉಳಿದಂತೆ ತಲೆಭಾರ, ತಲೆನೋವು, ಊಟ ಸೇರದು. ಡಾಕ್ಟರು ಬಂದರು, ಇಂಜಕ್ಷನ್ ಮಾತ್ರೆ ಕೊಟ್ಟು ಹೋದರು. ಹುಡುಗಿ ಹೆದರಿರಬಹುದೆಂದು ಮಂತ್ರವಾದಿ ಬಂದು ದಿಗ್ಬಂಧನ ಮಾಡಿ ತಾಯಿತ ಕಟ್ಟಿದ. ಮಠದ ಗುರುಗಳು ಮಂತ್ರಿಸಿಕೊಟ್ಟ ವಿಭೂತಿ ತಿಕ್ಕಿಯಾಯಿತು. ತಿರುಪತಿ ತಿಮ್ಮಪ್ಪನಿಗೆ ಹರಕೆ ಕಟ್ಟಿಯಾಯಿತು. ಅವರಿವರು ಹೇಳಿದ ಚಿಕಿತ್ಸೆಗಳೆಲ್ಲಾ ಮುಗಿದವು. ಪರಿಮಳ ಮಾತ್ರ ಹಾಗೇ ಉಳಿದಳು. ನರಗಳ ದೋಷದಿಂದ ಕೆಲವು ಸಾರಿ ಹೀಗಾಗುತ್ತೆ, ಮೆಂಟಲ್ ಆಸ್ಪತ್ರೆಗೆ ಹೋಗಿ ತೋರಿಸಿ ಎಂದು ಯಾರೋ ಹೇಳಲಾಗಿ ಪರಿಮಳಳನ್ನು ನಮ್ಮಲ್ಲಿಗೆ ಕರೆತಂದರು. ವೈದ್ಯರ ಎದುರಿನಲ್ಲಿಯೇ ಒಂದು ಸಾರಿ ಪ್ರಜ್ಞೆತಪ್ಪಿ ಬಿದ್ದಳು. ಅದನ್ನು ನೋಡಿದ ಅವರಿಗೆ ಅದು ಉನ್ಮಾದದ ಮೂರ್ಛೆ ಎಂದು ಅರಿಯಲು ಕಷ್ಟವಾಗಲಿಲ್ಲ. ನೇರ ಮಾತುಕತೆಯಿಂದ ಯಾವ ಮಾನಸಿಕ ಸಮಸ್ಯೆಯೂ ಕಾಣದಿರಲು, ಅವಳ ಒಳ ಮನಸ್ಸನ್ನು ಅರಿಯಲು ಔಷಧದ ಸಹಾಯ ಪಡೆಯಲಾಯಿತು. (ಇದನ್ನು ಮನೋರೇಚನೆ ಅಥವಾ abreaction ಎಂದು ಕರೆಯಲಾಗುತ್ತದೆ.) ಆಗ ತಿಳಿದು ಬಂದದ್ದು:

ಪರಿಮಳ ತನ್ನ ರೂಪ, ಸ್ನೇಹಭಾವದಿಂದ ಕಾಲೇಜಿನಲ್ಲಿ ಸಾಕಷ್ಟು ಪ್ರಸಿದ್ಧಿಯಾಗಿದ್ದಳು. ಆದರೆ ಹುಡುಗರೊಂದಿಗೆ ವ್ಯವಹರಿಸುವಾಗ ಸಾಕಷ್ಟು ಎಚ್ಚರಿಕೆ ವಹಿಸುತ್ತಿದ್ದಳು. ಒಳ್ಳೆಯವರೆಂದು ತೋರಿದ ಕೆಲವೇ ಹುಡುಗರೊಂದಿಗೆ ಮಾತ್ರ ಮಾತನಾಡುತ್ತಿದ್ದಳು. ಅವಳ ಸ್ನೇಹ ಮಾಡಲು ಹುಡುಗರು ಪೈಪೋಟಿ ನಡೆಸುತ್ತಿದ್ದರು. ಹೀಗೆ ಪ್ರಯತ್ನ ನಡೆಸಿ ವಿಫಲನಾದವನಲ್ಲಿ ಮುರುಗನ್ ಒಬ್ಬ. ಗೆಳೆಯರ ಗುಂಪಿನಲ್ಲಿ ಅವಹೇಳನಕ್ಕೆ ಗುರಿಯಾಗಿ, ತುಳಿಸಿಕೊಂಡ ಹಾವಾದ. "ಪರಿಮಳಳಿಗೆ ಕೊಬ್ಬು ಹೆಚ್ಚಾಗಿದೆ; ಅದನ್ನು ನಾನು ಇಳಿಸುತ್ತೇನೆ. ಒಂದು ಸಲವಾದರೂ ಅವಳನ್ನು ತಬ್ಬಿ ಮುತ್ತಿಡದಿದ್ದರೆ ನನ್ನ ಹೆಸರು ಮುರುಗನ್ ಅಲ್ಲ" ಎಂದು ಹಟ ತೊಟ್ಟ. ಇದು ಕಿವಿಯಿಂದ ಕಿವಿಗೆ ಹಬ್ಬಿ ಪರಿಮಳಳನ್ನೂ ತಲಪಿತು. ಹೆದರಿದರೂ, ನಾನು ಹುಶಾರಾಗಿದ್ದರೆ ಅವನೇನು ಮಾಡಬಲ್ಲ ಎಂದುಕೊಂಡಳು. ಇದಾಗಿ ಆರು ತಿಂಗಳು ಕಳೆದುವು. ಅಂದು ಕಾಲೇಜಿನಿಂದ ಬರುವಾಗ ಕತ್ತಲಾಗಿತ್ತು. ಕ್ಲೊ ಕ್ಲಾಸ್ ಸಂದ್ಯ ನೋಡಲು ಉಳಿದದ್ದೇ ತಪ್ಪಾಯಿತೆಂದುಕೊಂಡಳು. ಹೇಗಿದ್ದರೂ ವಿಮಲ ಜೊತೆಗಿದ್ದಾಳೆ. ತನ್ನ ಮನೆಯ ಹಿಂದಿನ ಕ್ರಾಸ್ ತನಕ ಬರುತ್ತಾಳೆ ಎನ್ನುವ ಧೈರ್ಯ. ವಿಮಲಳನ್ನು ಬಿಟ್ಟು, ಒಬ್ಬಳೇ ಹೆಜ್ಜೆಹಾಕಲಾರಂಭಿಸಿದಳು. ಅವಳ ಮನೆಯ ಕ್ರಾಸಿನಲ್ಲಿ ತಿರುಗುವಾಗ, ಫಕ್ಕನೆ ಪ್ರತ್ಯಕ್ಷನಾಗಿದ್ದ ಮುರುಗನ್. ಅವಳನ್ನಪ್ಪಿ ಮುತ್ತಿಟ್ಟು ಕ್ಷಣಾರ್ಧದಲ್ಲಿ ಮಾಯವಾದ. ಎಲ್ಲವೂ ಮಿಂಚಿನಂತೆ ನಡೆದು ಹೋಗಿತ್ತು. ಗಾಬರಿಯಿಂದ ಸುತ್ತಲೂ ನೋಡಿದಳು, ಸಧ್ಯ ಯಾರೂ ಇರಲಿಲ್ಲ. ಯಾರಾದರೂ ನೋಡಿದರೋ ಎಂಬ ಅಳುಕು ಅವಳನ್ನು ಕಾಡಿತು. ಮಾರನೆಯ ದಿನ ಮೈದಾನದಲ್ಲಿದ್ದಾಗ, ಹುಡುಗರ ಗುಂಪೊಂದು ಅವಳ ಪಕ್ಕದಲ್ಲಿ ನಿಂತು, "ಏನಮ್ಮಾ ಗುರೂ, ಎಲ್ಲರಿಗೂ ಮದುವೆ ಆದಮೇಲೆ ಸಿಗೋ ಸುಖ ನಿನಗೆ ಮದುವೆ ಮೊದಲೇ ಸಿಕ್ತಂತೆ. ಬಲು ಅದೃಷ್ಟ ಕಣಮ್ಮ ನಿನ್ನದು" ಎಂದಾಗ ಪರಿಮಳ ದಿಗ್ಭ್ರಮೆಗೊಂಡಳು. 'ಅಂದರೆ ನಿನ್ನೆ ನಡೆದ ಘಟನೆ ಎಲ್ಲರಿಗೂ ಗೊತ್ತಾಗಿ ಹೋಗಿದೆ' ಇನ್ನು ನನ್ನ ಗತಿ....ಎಲ್ಲರ ಬಾಯಲ್ಲಿ ಥೂ, ಛೀ, ಎನಿಸಿಕೊಂಡು, ಹೀನಾಯವಾಗಿ ಬದುಕಬೇಕು. ಹೆದರಿ ನಡುಗಿದಳು. ಮನೆಗೆ ಹೇಗೆ ಬಂದಳೋ ಅವಳಿಗೇ ತಿಳಿಯದು. ಮನೆಯವರಿಗೆ ನಡೆದದ್ದನ್ನು ಹೇಗೆ ಹೇಳುವುದು ? ಈ ಮಾನಸಿಕ ತುಮುಲಕ್ಕೆ ಸಿಕ್ಕಿ ಜರ್ಝರಿತಳಾಗಿ ಉನ್ಮಾದಕ್ಕೆ ಸಿಲುಕಿದಳು. ವೈದ್ಯರು ಅವಳ ಮನಸ್ಸಿಗೆ ಸಮಾಧಾನ, ಸಲಹೆಗಳನ್ನಿತ್ತು, ಧೈರ್ಯ ತುಂಬಿದರು. ಬಳಿಕ ಸೂಕ್ತ ಮನೋಚಿಕಿತ್ಸೆಯಿಂದ ಗುಣಮುಖಳಾದಳು.

ಹೀಗೆ ಮನಸ್ಸು ತೀವ್ರ ಸಂದಿಗ್ಧಕ್ಕೆ ಸಿಲುಕಿದಾಗ, ಅತಿ ಆತಂಕಕ್ಕೆ ಗುರಿಯಾದಾಗ, ಸಂಕಷ್ಟದಿಂದ ಪಾರಾಗಲು, ಮನಸ್ಸು ಉನ್ಮಾದ ಸ್ಥಿತಿಗೆ ಇಳಿಯುತ್ತದೆ. ಆತಂಕಕಾರಿ ಸಮಸ್ಯೆ ದೈಹಿಕ ಚಿಹ್ನೆಯಾಗಿ ಮಾರ್ಪಡಬಹುದು; (ಮೂರ್ಛೆರೋಗ, ಕೈ ಕಾಲು ಬಿದ್ದುಹೋಗುವುದು, ಮಾತು ನಿಲ್ಲುವುದು, ಕಣ್ಣು ಕಾಣಿಸದಂತಾಗುವುದು, ಇತ್ಯಾದಿ.) ಅಥವಾ ಮರೆವು ಪ್ರಜ್ಞೆತಪ್ಪುವುದು, ಅರೆ ಪ್ರಜ್ಞಾವಸ್ಥೆಯಲ್ಲಿ ತನ್ನತನವನ್ನು ಮರೆತು,

ಹಿಂದಿನ ನೆನಪೊಂದೂ ಇಲ್ಲದೆ ಹೊಸಬನಂತೆ ಬಾಳುವುದು ಇತ್ಯಾದಿ. ಈ ಸ್ಥಿತಿಗಳಲ್ಲಿ ಅಂಗಾಂಗಗಳೆಲ್ಲವೂ ಚೆನ್ನಾಗಿಯೇ ಇರುತ್ತವೆ. ಆದರೆ ಕಾರ್ಯರೂಪದ ನ್ಯೂನತೆ ಇರುತ್ತದೆ. ಈ ಮೂಲಕ ಈ ವ್ಯಕ್ತಿಗಳು ವಾಸ್ತವಿಕತೆಯಿಂದ ದೂರವಾಗುತ್ತಾರೆ. ಹೀಗೆ ಉನ್ಮಾದ ಸ್ಥಿತಿಮನಸ್ಸಿನ 'ತುರ್ತು ಪರಿಸ್ಥಿತಿಯ ರಕ್ಷಣಾಕ್ರಮ.' ಈ ಕ್ರಮದಿಂದ ಆತಂಕ ಕಡಿಮೆಯಾಗುತ್ತದೆ. ಜೊತೆಗೆ ಸಂಕಷ್ಟ ಸನ್ನಿವೇಶದಿಂದ, ಸಮಸ್ಯೆಯಿಂದ ವ್ಯಕ್ತಿಗೆ ಬಿಡುಗಡೆ ದೊರೆತು, ಖಾಯಿಲೆಯ ನೆಪದಲ್ಲಿ ಎಲ್ಲರ ಆರೈಕೆ, ಆಸರೆ ದೊರೆಯುತ್ತದೆ. ಅಂದರೆ ವ್ಯಕ್ತಿ ಬೇಕೆಂತಲೇ ಈ ರೀತಿ ನಾಟಕವಾಡುತ್ತಾನೆ ಎಂದಲ್ಲ. ವ್ಯಕ್ತಿಯ ಹೊರ ಮನಸ್ಸಿಗೆ ಅರಿವಿಲ್ಲದಂತೆಯೇ ನಡೆಯುವ ಒಳಮನಸ್ಸಿನ ಕ್ರಿಯೆ ಇದು. ಇದನ್ನು ತಾಂತ್ರಿಕವಾಗಿ ಉನ್ಮಾದ ಪರಿವರ್ತನಾ ಪ್ರತಿಕ್ರಿಯೆ, ಉನ್ಮಾದ ಪ್ರತ್ಯೇಕತಾ ಪ್ರತಿಕ್ರಿಯೆ ಅಥವಾ ಸಡಿಲವಾಗಿ ಉನ್ಮಾದ (ಹಿಸ್ಟೀರಿಯಾ) ಎನ್ನುತ್ತಾರೆ.

....ಸಿದ್ಧತೆ ಸಾಲದೆ, ಪರೀಕ್ಷೆಯಲ್ಲಿ ತಾನು ಫೇಲಾಗಬಹುದು ಎಂದು ವಿದ್ಯಾರ್ಥಿಗೆ ಅನಿಸುತ್ತದೆ. ಫೇಲಾದರೆ ಅವಮಾನ, ಜೊತೆಗೆ ಏಕೆ ಓದಲಿಲ್ಲ ಎಂದು ದೊಡ್ಡವರು ಬೈಯಬಹುದು. ಈ ಸಂಕಷ್ಟದಿಂದ ಪಾರಾಗಲು ಒಳ ಮನಸ್ಸು, ಬಲಗೈನ ನರತಂತುಗಳಿಗೆ ನಿಷ್ಕ್ರಿಯವಾಗಲು ಸೂಚಿಸುತ್ತದೆ. ಕೈಗೆ ಹೀಗಾಯಿತು. ಪರೀಕ್ಷೆಗೆ ಹೇಗೆ ಹೋಗುವುದು? 'ಅಯ್ಯೋ ಪಾಪ, ಪರೀಕ್ಷೆಯ ಸಮಯದಲ್ಲೇ ಹೀಗಾಯಿತೇ....ಹೋಗಿದ್ದರೆ ಪಾಸಾಗುವಂತ ಹುಡುಗ. ಯೋಚನೆ ಮಾಡಬೇಡವಯ್ಯ, ಮೊದಲು ಕೈ ಸರಿಮಾಡಿಕೋ. ಮುಂದಿನ ಸಾರಿ ಪರೀಕ್ಷೆಗೆ ಕೂರುವಂತೆ' ಎನ್ನುತ್ತಾರೆ. ವಿದ್ಯಾರ್ಥಿಗೆ ಬೇಕಾದ್ದೂ ಅದೇ. ಉನ್ಮಾದದ ಪಾರ್ಶ್ವವಾಯು ಹೀಗೆ ಅವನ ಮಾನ ಉಳಿಸುತ್ತದೆ.

....ತಾನು ತಪ್ಪು ಮಾಡಿಲ್ಲ. ಎಲ್ಲಾ ಸ್ನೇಹಿತನ ಕಿತಾಪತಿ. ಆದರೆ ಎಷ್ಟು ಹೇಳಿದರೂ ಅಪ್ಪ ಕೇಳದೆ ಎಲ್ಲರೆದುರು ತನ್ನನ್ನು ಛೀಮಾರಿ ಮಾಡಿ ಹೊಡೆದರು. ಅನ್ಯಾಯವಾಗಿ ತನಗೆ ಅವಮಾನ ಮಾಡಿದ ಅಪ್ಪನಿಗೆ ಚೆನ್ನಾಗಿ ಬೈಯ ಬೇಕೆನಿಸುತ್ತದೆ. ಆದರೆ ತಂದೆಯನ್ನು ಬೈಯುವುದೇ ? ಅದು ಒಳ್ಳೆಯದಲ್ಲ. ಅಕಸ್ಮಾತ್ ಬೈದರೆ ಇನ್ನಷ್ಟು ಹೊಡೆತ ಬೀಳುತ್ತದೆ.... ಪರವಾಗಿಲ್ಲ, ನನಗೆ ಅವಮಾನವಾದಂತೆ ಅವರಿಗೂ ಆಗಲಿ ಬೈದೇಬಿಡುತ್ತೇನೆ....ಒಳ ಮನಸ್ಸು ತಕ್ಷಣ ವಿಜಯನ ರಕ್ಷಣೆಗೆ ಬರುತ್ತದೆ ಮಾತು ನಿಲ್ಲುತ್ತದೆ, ಮೂಕನಾಗುತ್ತಾನೆ. ತಥ್ ಮಾತು ನಿಂತು ಅಪ್ಪ ಬಚಾವಾದ, ಇಲ್ಲದಿದ್ದರೇ.... ಎಂದು ಸಮಾಧಾನ ಹೊಂದುತ್ತದೆ ವಿಜಯನ ಮನಸ್ಸು. ಉನ್ಮಾದದ ಮೂಕತನ ಅವನನ್ನು ಇಕ್ಕಟ್ಟಿನಿಂದ ರಕ್ಷಿಸುತ್ತದೆ.

... ನಾಲ್ಕೈದು ಮಕ್ಕಳ ನಡುವೆ ತನ್ನನ್ನು ಕೇಳುವವರಿಲ್ಲ. ತನ್ನ ನ್ಯಾಯವಾದ ಬೇಡಿಕೆಗಳನ್ನು ಪೂರೈಸುತ್ತಿಲ್ಲ. ಈ ಅನ್ಯಾಯವನ್ನು ಸಹಿಸಲಾರೆ ಎಂದು ಚೀರುತ್ತದೆ ರೇಣುಕಳ ಹೊರ ಮನಸ್ಸು. ಹೆದರಬೇಡ, ಉಪಾಯ ಮಾಡುವ ಎಂದು ಒಳ ಮನಸ್ಸು ಕೈ ಕಾಗಲು ಮಾಂಸಖಂಡಗಳನ್ನು ನಿಯಂತ್ರಿಸುವ ನರತಂತುಗಳಿಗೆ ಆದೇಶವೀ...

ತ್ತವೆ. ಕೈ ಕಾಲುಗಳು ಅದುರಲು ಶುರುವಾಗುತ್ತವೆ. ಸರಿ, ಖಾಯಿಲೆ ಎಂದು ರೋಗಿಯ ಪಟ್ಟ ಸಿಕ್ಕಿ, ಮನೆಯವರೆಲ್ಲರ ಉಪಚಾರ, ಶುಶ್ರೂಷೆ, ಬಂದವರೆಲ್ಲ 'ರೇಣು ಹೇಗಿದ್ದಾಳೆ ಈಗ' ಎಂದು ವಿಚಾರಿಸುವುದು ನಡೆಯುತ್ತದೆ. ಪಾಪ ಖಾಯಿಲೆಯವಳು; ಅವಳಿಗೆ ಮೊದಲು ಕೊಡಿರಿ ಎಂಬ ಪ್ರಾಶಸ್ತ್ಯ ಸಿಗುತ್ತದೆ. ರೇಣುಕಳು ಬಯಸಿದ್ದು ಅದನ್ನೇ.

ಹೀಗೆ ಉನ್ಮಾದದ ಚಂಚಲತೆ ಬಂದಾಗ, ಮನಸ್ಸಿನ ಕುಂದು ಕೊರತೆ ಏನು ಎಂದು ತಿಳಿದು ಅದನ್ನು ಸರಿಪಡಿಸಿದರೆ, ದೈಹಿಕ ಚಿನ್ಹೆಗಳು ಮಾಯವಾಗುತ್ತವೆ. ಕೇವಲ ಔಷಧಗಳಿಂದ ಉಪಯೋಗವಿಲ್ಲ.

ಉನ್ಮಾದ ಚಿತ್ತ ಚಂಚಲತೆ ಯಾವುದೇ ದೈಹಿಕ ಖಾಯಿಲೆಯನ್ನು ಅನುಕರಿಸಬಹುದು. ಪ್ರಪಂಚದ ಮಹಾನಟರುಗಳನ್ನೆಲ್ಲಾ ಇದರ ಮುಂದೆ ನಿವಾಳಿಸಿ ತೆಗೆಯಬೇಕು. ಜನ ಸಾಮಾನ್ಯರನ್ನಿರಲಿ, ವೈದ್ಯರನ್ನೇ ಏಮಾರಿಸಿಬಿಡುತ್ತದೆ. ನಿಜವಾದ ಖಾಯಿಲೆಗೂ ಇದಕ್ಕೂ ಅಷ್ಟೊಂದು ಸಾಮ್ಯವಿರುತ್ತದೆ. ವಿವರವಾಗಿ ಪರೀಕ್ಷೆಮಾಡಿ, ಯಾವ ದೈಹಿಕ ನ್ಯೂನತೆ ಕಂಡುಬರದಿದ್ದಾಗ ಅಥವಾ ದೈಹಿಕ ನ್ಯೂನತೆಗೂ ರೋಗಿಯ ತೊಂದರೆಗಳಿಗೂ ತಾಳೆಯಾಗದಿದ್ದಾಗ, ವೈದ್ಯರು ಇದು ಉನ್ಮಾದದ ಚಿನ್ಹೆಯಿರಬಹುದೇ ಎಂದು ಊಹಿಸುತ್ತಾರೆ. ಆಗ ಮನೋವೈದ್ಯರ ಸಲಹೆ ಚಿಕಿತ್ಸೆ ಬೇಕೇ ಬೇಕಾಗುತ್ತದೆ.

ಹರೆಯದ ವಿದ್ಯಾರ್ಥಿಗಳಲ್ಲಿ ಮಾನಸಿಕ ಅಸ್ವಸ್ಥತೆ

ಪರೀಕ್ಷೆಗಳಲ್ಲಿ ಪಾಸಾಗಿ ಯಾವುದಾದರೊಂದು ಪದವಿ ಪಡೆಯುವುದೇ ಇಂದಿನ ವಿದ್ಯಾಭ್ಯಾಸದ ಅಂತಿಮ ಗುರಿ. ಪರೀಕ್ಷೆ ಸಮಯದಲ್ಲಿ ಹಗಲು ರಾತ್ರಿ ಓದಿ ಹೇಗೋ ಉತ್ತೀರ್ಣನಾಗಿಬಿಟ್ಟರೆ ಉಳಿದ ಅವಧಿಯಲ್ಲೆಲ್ಲಾ ಮಜವಾಗಿರಬಹುದು. ಹೀಗೆ ಪರೀಕ್ಷೆ ವಿದ್ಯಾರ್ಥಿಗಳ ಪಾಲಿಗೆ ಕೊಳ್ಳಿದೆವ್ವ. ಈ ಹಾಳಾದ ಪರೀಕ್ಷೆ ಇಲ್ಲದಿದ್ದರೆ ಎಷ್ಟು ಚೆಂದ ಎಂದು ಕನಸು ಕಾಣುತ್ತಾರೆ. ಪರೀಕ್ಷೆ ಸಮಯದಲ್ಲಿ ಗಣೇಶ, ಸರಸ್ವತಿ, ಆಂಜನೇಯರುಗಳ ದೇವಸ್ಥಾನದ ಅರ್ಚಕರಿಗೆ ಖುಷಿ. ಅವರ ತೆಂಗಿನಕಾಯಿ, ದಕ್ಷಿಣೆಯ ಗಂಟು ಸಾಕಷ್ಟು ದಪ್ಪವಾಗುವುದು ಈ ಕಾಲದಲ್ಲೇ. ಅದಕ್ಕೇ ದೊಡ್ಡವರು ಸಂಕಟ ಬಂದಾಗ ವೆಂಕಟರಮಣ ಎಂದದ್ದು.

ಪರೀಕ್ಷೆಯ ಬಗ್ಗೆ ಆತಂಕ ಸಹಜವಾದದ್ದು. ಸ್ವಲ್ಪ ಮಟ್ಟಿನ ಆತಂಕ ಒಳ್ಳೆಯದೇ. ಅದು ವಿದ್ಯಾರ್ಥಿಯನ್ನು ಚುರುಕುಗೊಳಿಸಿ, ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ. ಕೆಲವರಲ್ಲಿ ಈ ಆತಂಕ ಮಿತಿಮೀರಿ ಕಷ್ಟನಷ್ಟಕ್ಕೆ ತುತ್ತಾಗುತ್ತಾರೆ. ನಾನು ಮೆಡಿಕಲ್ ಕಾಲೇಜು ಸೇರಿದಾಗ, ಪಿ.ಪಿ.ಸಿ. ತರಗತಿಯಲ್ಲಿ ನಮ್ಮ ಜೊತೆಗೆ ಡೆಂಟಲ್ ಕಾಲೇಜಿನ ವಿದ್ಯಾರ್ಥಿಗಳೂ ಇರುತ್ತಿದ್ದರು. ಅವರಲ್ಲಿ ಅಂಜನಪ್ಪ ಎನ್ನುವ ಒಬ್ಬನಿಗೆ ಆರ್ಗ್ಯಾನಿಕ್ ಕೆಮಿಸ್ಟ್ರಿ ಕಂಡರೆ ಹೆದರಿಕೆ. ಫಾರ್ಮುಲಾಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ತನಗೆ ಸಾಧ್ಯವಿಲ್ಲ ಎಂದೇ ಅವನ ನಂಬಿಕೆ. ಉಳಿದ ಪಠ್ಯವಿಷಯಗಳಲ್ಲಿ ಜಾಣನಾಗಿದ್ದ. ಪರೀಕ್ಷೆ ಹತ್ತಿರ ಬಂತು. ಅವನ ಗಾಬರಿ, ಆತಂಕ ಹೆಚ್ಚುತ್ತಲೇ ಹೋಯಿತು. ನಾವೆಲ್ಲಾ ಎಷ್ಟೇ ಸಮಾಧಾನ ಹೇಳಿದರೂ ಪ್ರಯೋಜನವಾಗಲಿಲ್ಲ. ಆರ್ಗ್ಯಾನಿಕ್ ಕೆಮಿಸ್ಟ್ರಿ ಪೇಪರ್ ಇದ್ದ ದಿನ ಅವನು ರೂಮ್ ಬಿಟ್ಟು ಹೊರಬರಲಿಲ್ಲ. 'ನನ್ನಿಂದ ಸಾಧ್ಯವಿಲ್ಲ, ಏನೂ ಜ್ಞಾಪಕವಿಲ್ಲ' ಎಂದುಬಿಟ್ಟ. ಪರೀಕ್ಷಾ ಫಲಿತಾಂಶ ಬಂದಾಗ ಉಳಿದ ವಿಷಯಗಳಲ್ಲೆಲ್ಲಾ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದ. ಎರಡು ವರ್ಷ ಕಳೆದವು. ಅಂಜನಪ್ಪ

ಆರ್ಗ್ಯಾನಿಕ್ ಕೆಮಿಸ್ಟ್ರಿ ಪೇಪರ್ ಬರೆಯಲಿಲ್ಲ. ಕೊನೆಗೆ ವೈದ್ಯರೊಬ್ಬರ ಸಲಹೆಯಂತೆ, ಮನೋವೈದ್ಯರನ್ನು ಕಂಡು ಚಿಕಿತ್ಸೆ ಪಡೆದನಂತೆ. ಆತಂಕ ಕಡಿಮೆಯಾಗಿ, ಪರೀಕ್ಷೆಗೆ ಕುಳಿತು ಪಾಸು ಮಾಡಿದನೆಂದು ತಿಳಿಯಿತು.

* * *

'ಎಲ್ಲಾ ಓದಿದ್ದೆ ಕಣೋ. ಕೊಶ್ಚನ್ ಪೇಪರ್ ಕೈಗೆ ಎತ್ತಿಕೊಂಡೆ. ಪ್ರಶ್ನೆಗಳು ಸುಲಭವಾಗಿಯೇ ಇದ್ದುವು. ಬರೆಯೋಕೆ ಶುರುಮಾಡ್ತೇನೆ.....ಉತ್ತರ ಜ್ಞಾಪಕಕ್ಕೇ ಬರಲಿಲ್ಲ....'

* * *

'ನೋಬೆಲ್ ಬಹುಮಾನ ಪಡೆದ ಭಾರತದ ಕವಿ ಯಾರು ಅಂತ ವೈವಾದಲ್ಲಿ ಕೇಳಿದರು ಕಣೋ. ರವೀಂದ್ರನಾಥ ಟಾಗೋರ್ ಅಂತ ಗೊತ್ತಿತ್ತು. ನಾಲಿಗೆ ತುದೀಲೇ ಇತ್ತು ಆದರೆ ಹೇಳೋದಿಕ್ಕೆ ಆಗಲಿಲ್ಲ....'

* * *

'ಮೋತಿಲಾಲ್ ನೆಹರೂ ಬಗ್ಗೆ ಏನು ಬರೆದೋ '?

'ಫಸ್ಟ್ ಕ್ಲಾಸಾಗಿ ಬರೆದ್ನೋ! ನಾಲ್ಕು ಪೇಜು ಬರೆದಿದ್ದೇನೆ. ಇಪ್ಪತ್ತಕ್ಕೆ ಹದಿನೆಂಟು ನಂಬರ್ ಬರುತ್ತೆ. ಅವರು ಸ್ವಾತಂತ್ರ ಚಳುವಳೀಲಿ ಭಾಗವಹಿಸಿದ್ದು, ನಮ್ಮ ದೇಶದ ಪ್ರಧಾನ ಮಂತ್ರಿಯಾಗಿದ್ದು, ಪಂಚವಾರ್ಷಿಕ ಯೋಜನೆಗಳನ್ನು ಮಾಡಿದ್ದು ಎಲ್ಲಾ ಬರೆದಿದ್ದೇನೆ'

'ಶೇ ಮಂಕೇ! ಅವರು ಕೇಳಿರೋದು ಮೋತಿಲಾಲ್ ನೆಹರೂನ. ಜವಾಹರ್ ಲಾಲ್ ನೆಹರೂನಲ್ಲವೋ ಬಕರಾ!,

'ಅಂ....ಹೌದೇನೋ....ಅಯ್ಯೋ....'

* * *

ಇವೆಲ್ಲಾ ವಿದ್ಯಾರ್ಥಿ ಆತಂಕಗೊಂಡಾಗ ಜರುಗುವ ಮಾಮೂಲಿ ಘಟನೆಗಳು. ಆತಂಕ ಹೆಚ್ಚಿದಾಗ, ಮನಸ್ಸು ಚಂಚಲವಾಗುತ್ತದೆ. ಗಮನವಿರಿಸಲು ಸಾಧ್ಯವಾಗುವುದಿಲ್ಲ. ಆ ಸ್ಥಿತಿಯಲ್ಲಿ ಓದಿದ್ದನ್ನು ಗ್ರಹಿಸಲಾಗಲೀ, ಗ್ರಹಿಸಿದ್ದನ್ನು ಜ್ಞಾಪಕದಲ್ಲಿಟ್ಟುಕೊಂಡು, ಬೇಕಾದಾಗ ಉಪಯೋಗಿಸಲು ಆಗುವುದಿಲ್ಲ. ಮನಸ್ಸು ಗೊಂದಲವಾಗಿ ತಪ್ಪುಗಳು ಹೆಚ್ಚುತ್ತವೆ. ಇನ್ನು ಕೆಲವು ಸಾರಿ ತೀವ್ರ ಆತಂಕದಿಂದ ದೈಹಿಕ ತೊಂದರೆಗಳು ಕಾಣಿಸಿಕೊಳ್ಳಬಹುದು. ಪ್ರಜ್ಞೆ ತಪ್ಪುವುದು, ಬರೆಯಲಾಗದಷ್ಟು ಕೈ ನಡುಗುವುದು, ಮಾತನಾಡಲಾಗದಷ್ಟು ತೊದಲುವುದು ಅಥವಾ ಮಾತೇ ನಿಲ್ಲುವುದು, ಪದೇಪದೇ ಮಲಮೂತ್ರ ಮಾಡುವುದು, ತಲೆನೋವು, ತಲೆಸುತ್ತು, ವೇಗದ ಎದೆಬಡಿತ, ಎದೆನೋವು, ಹೊಟ್ಟೆನೋವು ಇತ್ಯಾದಿ.

ಪರೀಕ್ಷೆಗೆ ಪ್ರಾರಂಭದಿಂದಲೇ ಓದುವುದು; ಓದಿದ್ದನ್ನು ಮನನಮಾಡಿ, ಗೆಳೆಯರೊಂದಿಗೆ ಚರ್ಚಿಸುವುದು; ಪರೀಕ್ಷೆಯ ಹಿಂದಿನ ದಿನದಲ್ಲಿ ಹೊಸ ವಿಷಯಗಳನ್ನು ಮೊದಲ ಬಾರಿಗೆ ಓದದೇ, ಓದಿದ ವಿಷಯಗಳನ್ನು ಮಾತ್ರ ಮೆಲುಕು ಹಾಕುವುದು; 'ನಾನು ಸಾಕಷ್ಟು ಅಭ್ಯಾಸ ಮಾಡಿದ್ದೇನೆ. ಪಾಸಾಗುತ್ತೇನೆ. ದುರಾದೃಷ್ಟವಶಾತ್ ಫೇಲಾದರೆ ಇನ್ನೊಮ್ಮೆ ಕಟ್ಟಿದರಾಯಿತು' ಎಂಬ ಭಾವನೆ ಇಟ್ಟುಕೊಳ್ಳುವುದು; ಹಗಲೂ ರಾತ್ರಿ ಓದಬೇಕೆಂದು ಶರೀರದ ಊಟ ನಿದ್ರೆಗೆ ಮೋಸ ಮಾಡದಿರುವುದು; ಡೆಕ್ಸೆಡ್ರಿನ್ ಮುಂತಾದ ನಿದ್ರೆ ದೂರಮಾಡುವ ಔಷಧಗಳಿಂದ ದೂರವಿರುವುದು—ಆತಂಕವನ್ನು ಕಡಿಮೆ ಮಾಡಲು ಪ್ರತಿಯೊಬ್ಬ ವಿದ್ಯಾರ್ಥಿಯೂ ಮಾಡಬೇಕಾದ ವಿಚಾರಗಳು. ಇವೆಲ್ಲ ಮಾಡಿಯೂ, ಆತಂಕ ಹೆಚ್ಚಾಗಿದ್ದರೆ, ಮನೋವೈದ್ಯರ ನೆರವು ಪಡೆಯುವುದು ಅವಶ್ಯ.

ಓದಿದ್ದು ಮರೆಯುವ ರಮೇಶ—

"ಡಾಕ್ಟ್ರೆ ನನ್ನ ಜ್ಞಾಪಕಶಕ್ತಿ ಕಡಿಮೆ ಆಗ್ತಾ ಇದೆ. ಓದಿದ್ದು ಒಂದೂ ನೆನಪಿಲ್ಲ ಟೆಸ್ಟ್ ಮಾಡಿ ಒಳ್ಳೇ ಔಷಧಿ ಕೊಡಿ" ಎಂದು ಕೇಳಿದ ರಮೇಶನನ್ನು ನೋಡಿದೆ. ಸಿರಿವಂತ ಮನೆಯ ಹುಡುಗ. ಸೌಕರ್ಯ ಸೌಲಭ್ಯಗಳಿಗೆ ಕೊರತೆ ಇಲ್ಲದ ಮನೆ. ತಂದೆ ತಾಯಿ ಇಬ್ಬರೂ ಪದವೀಧರರು. ಸಂಸಾರವೆಂದರೆ ಹೀಗಿರಬೇಕು ಎನ್ನುವಂತಹ ಕುಟುಂಬ. ಪರಿಚಯವಿದ್ದರಿಂದ ಅವರ ವಿಷಯ ನನಗೆ ಸಾಕಷ್ಟು ತಿಳಿದಿತ್ತು. ರಮೇಶನೇನೂ ದಡ್ಡನಲ್ಲ. "ರ್‍ಯಾಂಕ್ ಬರಬೇಕು ಅಂತ ಮನೇಲಿ ಒತ್ತಾಯ ಮಾಡಿದಾರೇನು" ಎಂದೆ ನಗುತ್ತಾ. ರಮೇಶ ಈ ಬಾರಿ ಏಳನೇ ತರಗತಿ ಪರೀಕ್ಷೆಗೆ ಕೂಡಬೇಕಾಗಿದೆ. "ಹಾಗೆಲ್ಲಾ ಅವರು ಹೇಳೋಲ್ಲ ಅನ್ನೋದು ನಿಮಗೂ ಗೊತ್ತು ಡಾಕ್ಟ್ರೇ. ಇದೆಲ್ಲ 'ಆಂಕ್ಸೈಟಿ' (ಆತಂಕ) ಯಿಂದ ಬಂದಿದೆ ಅಂತ ನೀವು ಹೇಳಬೇಡಿ. ನನಗೆ ಯಾವ ಕಾನ್‌ಫ್ಲಿಕ್ಟ್ (ದ್ವಂದ್ವ ಯೋಜನೆ) ಇಲ್ಲ. ಏನಾಗಿದೆ ಅಂತ ಸರಿಯಾಗಿ ಪರೀಕ್ಷೆ ಮಾಡಿ ಡಾಕ್ಟ್ರೆ" ಎಂದ. ಎಲಾ ಇವನ! ಇಷ್ಟೊಂದೆಲ್ಲ ತಿಳಿದುಕೊಂಡುಬಿಟ್ಟಿದ್ದಾನೆ. ಎಲ್ಲಾ ಅಪ್ಪನ ಶಿಕ್ಷಣ. ಇನ್ನು ಮೇಲೆ ಇವನ ಹತ್ತಿರ ಎಚ್ಚರಿಕೆಯಿಂದ ಬುರುಡೆ ಬಿಡಬೇಕು ಎಂದುಕೊಂಡೆ. "ಮನಶಾಸ್ತ್ರಜ್ಞರಿಗೆ ಹೇಳಿ ಪರೀಕ್ಷೆ ಮಾಡಿಸ್ತೀನಿ" ಎಂದು ಅವನನ್ನು ಸಾಗ ಹಾಕಿದೆ.

ರಾತ್ರಿ ಎಂಟರ ಹೊತ್ತಿಗೆ ಅವರ ಮನೆಗೆ ಹೋದಾಗ ರಮೇಶನ ತಾಯಿ ನನ್ನನ್ನು ಸ್ವಾಗತಿಸಿದರು. ಏನು ಮಾಡುತ್ತಿದ್ದಾನೆ ಮಗರಾಯ ?-ರಮೇಶನನ್ನು ಕಾಣದೆ ಪ್ರಶ್ನಿಸಿದೆ. "ಮಹಡಿ ಮೇಲೆ ಓದಿಕೊಳ್ತಿದಾನೆ ಡಾಕ್ಟ್ರೆ. ಅಪರೂಪಕ್ಕೆ ಬಂದಿದ್ದೀರಿ. ಅವರು ಇನ್ನೇನು ಬರುವ ಸಮಯ" ಎಂದು ಉಪಚರಿಸಿದರು. "ಈ ದಿನ ಬೆಳಿಗ್ಗೆ ಜ್ಞಾಪಕಶಕ್ತಿಯ ಬಗ್ಗೆ ನನಗೆ ಟೀಚ್ ಮಾಡೋದಿಕ್ಕೆ ರಮೇಶ ಬಂದಿದ್ದನಮ್ಮ" ಎಂದು ನಕ್ಕೆ. "ಏನೂ, ನಿಮಗೇ.... ನೀವು ಹೇಳಿದ್ದು ಅರ್ಥವಾಯಿತು. ನನ್ನ ಹತ್ತಿರವೂ ಕಂಪ್ಲೇಂಟ್

ಮಾಡಿದ್ದಾನೆ ಡಾಕ್ಟ್ರೆ. ಅವನಿಗೆ ಜ್ಞಾಪಕ ಶಕ್ತಿ ಕಡಿಮೆ ಆಗಿರೋದು ನಿಜವೇ?" ಅವರ ಧ್ವನಿಯಲ್ಲಿ ಕಳವಳ ಕಾಣಿಸಿಕೊಂಡಿತು. "ಬನ್ನಿ, ಅವನು ಹೇಗೆ ಓದ್ತಿದ್ದಾನೋ ನೋಡೋಣ" ಎಂದು ಅವನ ರೂಮಿನತ್ತ ಹೆಜ್ಜೆ ಹಾಕಿದೆ. ಮೆಟ್ಟಿಲು ಮೇಲೇರುತ್ತಿದ್ದಂತೆಯೇ, ಅವನ ರೂಮಿನಿಂದ ಸಿನಿಮಾ ಹಾಡು ಗಟ್ಟಿಯಾಗಿಯೇ ಕೇಳಿಬಂತು. "ಏನು, ಓದ್ತಿದಾನೆ ಅಂದಿರಿ. ರೇಡಿಯೋ ಕೇಳ್ತಿದಾನೆ" ಎಂದೆ. "ಅಯ್ಯೋ ಡಾಕ್ಟ್ರೆ, ರೇಡಿಯೋ ಹಾಕ್ಕೊಂಡೇ ಅವನು ಓದೋದು. ರೇಡಿಯೋ ಹಾಕೊಳ್ಳದಿದ್ರೆ ಕಾನ್ಸೆಂಟ್ರೇಶನ್ ಬರೋದಿಲ್ಲ ಅಂತಾನೆ". "ಹೌದೇ, ಕಾನ್ಸೆಂಟ್ರೇಶನ್ ಬರೋದಿಕ್ಕೆ ರೇಡಿಯೋ ಹಾಕಬೇಕು ಅಂತ ಯಾವ ಮನಶಾಸ್ತ್ರದ ಪುಸ್ತಕವಲ್ಲೂ ಬರೆದಿಲ್ಲವಲ್ಲಮ್ಮ" "ಹೋಗಿ ಡಾಕ್ಟ್ರೆ ನಿಮಗೆ ತಮಾಷೆ...ರಮೇಶ ಯಾರು ಬಂದಿದಾರೆ ನೋಡು" ಎಂದರು ರಮೇಶನ ತಾಯಿ.

"ಓ ಬನ್ನಿ ಡಾಕ್ಟ್ರೇ....ಬನ್ನಿ ಕುಳಿತುಕೊಳ್ಳಿ" ಎಂದು ರಮೇಶ ಉಪಚಾರ ಮಾಡಿದ. ಕುಳಿತು ಸುತ್ತಲೂ ಕಣ್ಣಾಡಿಸಿದೆ. ಏನೇನೋ ಅನೆ....ಎಂದು ಕಿರಿಚುವ ರೇಡಿಯೋ, ಅದರ ಪಕ್ಕದಲ್ಲಿ ಸ್ಟೀರಿಯೋ ರೆಕಾರ್ಡ್ ಪ್ಲೇಯರ್, ಮೇಜಿನ ಪಕ್ಕದ ಟ್ರೇನಲ್ಲಿ ವಿಜಯಚಿತ್ರ, ರೂಪತಾರ, ಫಿಲ್ಮ್‌ಫೇರ್‌ನ ತೆರೆದ ಪತ್ರಿಕೆಗಳು, ಮೇಜಿನ ಮೇಲೆ ಸಾಸರ್‌ನಲ್ಲಿ ಕರಿದ ಕಡಲೇ ಬೀಜ. ಅಸ್ತವ್ಯಸ್ತ ಪುಸ್ತಕಗಳು....

"ನೀವು ಬರ್ತೀರಿ ಅಂತ ಗೊತ್ತಿದ್ರೆ ರೂಮ್‌ನ ನೀಟಾಗಿ ಇಡ್ತಿದ್ದೆ. ಈಗ ಗಜಿಬಿಜಿಯಾಗಿದೆ". ರಮೇಶ ಸಂಕೋಚದಿಂದ ನುಡಿದ. "ಇಲ್ಲಯ್ಯಾ ಈ ರೀತಿ ನ್ಯಾಚುರಲ್ ಸ್ಥಿತಿಯಲ್ಲಿ ನೋಡುವುದೇ ಚೆಂದ" ಎಂದು ಹೇಳಿ ಅವನ ಸಂಕೋಚವನ್ನು ನಿವಾರಿಸಲು ಯತ್ನಿಸಿದೆ. "ಅಂದ ಹಾಗೇ ಈ ದಿನ ಜಯಮಾಲ ಕಾರ್ಯಕ್ರಮವನ್ನು ಯಾರು ನಡೆಸಿಕೊಟ್ಟರು. ಯಾವ ಯಾವ ಹಾಡು ಹಾಕಿದ್ದರು? " ಎಂದೆ. "ಹಜರತ್ ಜೈಪುರಿ.... ಪ್ರೋಗ್ರಾಂ ತುಂಬಾ ಚೆನ್ನಾಗಿತ್ತು ಡಾಕ್ಟ್ರೆ" ಎಂದ. "ಹಜರತ್ ಯಾರಪ್ಪಾ?" ಎಂದೆ. "ಅಯ್ಯೋ ಅಷ್ಟು ಗೊತ್ತಿಲ್ಲವೇ ನಿಮಗೆ. ಹಿಂದಿ ಚಿತ್ರಗೀತೆಗಳನ್ನು ಬರೆಯೋ ಕವಿ" ನನ್ನ ಬಗ್ಗೆ ಕನಿಕರ ಪಟ್ಟ. (ನನಗೆ ನಿಜವಾಗ಼್ೂ ಹಜರತ್ ಜೈಪುರಿ ಯಾರು ಅಂತ ಗೊತ್ತಿರಲಿಲ್ಲ). ಆತ ಹಾಕಿದ ಹಾಡಿನ ಮೊದಲ ಸಾಲು, ಚಿತ್ರದ ಹೆಸರು ಎಲ್ಲ ಹೇಳಿದ. "ಇದೇನಿದು. ಸಿನೇಮಾ ಪತ್ರಿಕೆಗಳನ್ನು ತೆರೆದಿಟ್ಟಿದ್ದೀ" ಎಂದೆ. "ಓದಿ ಬೇಜಾರಾದಾಗ, ಹಾಗೇ ನೋಡೋದಿಕ್ಕೆ ಡಾಕ್ಟ್ರೆ" ಎಂದ. ಅವನು ಏಳು ಘಂಟೆಯಿಂದ ಓದ್ತಾ ಇದ್ದಾನೆ ಅಂತ ತಿಳಿದು ಇದುವರೆಗೆ ಏನು ಓದಿದ ಎಂದು ವಿಚಾರಿಸಿದೆ. "ಉತ್ತರ ಅಮೆರಿಕಾ ಬಗ್ಗೆ ಓದ್ತಿದೇನೆ. ಆದರೆ ಏನೂ ಜ್ಞಾಪಕವಿಲ್ಲ. ಅದಕ್ಕೇ ನಿಮಗೆ ತೋರಿಸೋಣ ಅಂತ ಬಂದಿದ್ದು" ಅಂದ. "ಅಲ್ಲಯ್ಯಾ ಬುದ್ಧಿವಂತ. ಅದೇ ಏಳು ಘಂಟೆಯಿಂದ ಜಯಮಾಲ ಕಾರ್ಯಕ್ರಮದಲ್ಲಿ ಬಂದ ಹಾಡುಗಳ ಸಾಲುಗಳೆಲ್ಲಾ ಜ್ಞಾಪಕವಿದೆ. ಆದರೆ ಅದೇ ಅವಧಿಯಲ್ಲಿ ಓದಿದ

ಉತ್ತರ ಅಮೇರಿಕಾದ ಬಗ್ಗೆ ಸ್ವಲ್ಪವೂ ಜ್ಞಾಪಕವಿಲ್ಲ ಎನ್ನುತ್ತೀಯೆ. ಇದು ಹೇಗೆ ಸಾಧ್ಯ...? ಬೆಳಗಿನ ನಿನ್ನ ಪ್ರಶ್ನೆಗೆ ಉತ್ತರ ಇದು. ಅರ್ಥವಾಯಿತೇ" ಎಂದೆ. ರಮೇಶ ನಾಚಿ, "ಅರ್ಥವಾಯಿತು ಡಾಕ್ಟ್ರೆ....ನನ್ನ ಸಮಸ್ಯೆಗೆ ಉತ್ತರ....ಆಸಕ್ತಿ. ಆಸಕ್ತಿ ಇದ್ದುದ್ದರಿಂದ ಸಿನೇಮಾ ಹಾಡುಗಳೆಲ್ಲಾ ಜ್ಞಾಪಕದಲ್ಲಿವೆ. ಆಸಕ್ತಿ ಇಲ್ಲದ್ದರಿಂದ ಪಾಠ ಜ್ಞಾಪಕದಲ್ಲಿ ಉಳಿಯಲಿಲ್ಲ..." "ಭೇಷ್ ಸರಿಯಾಗಿ ಅರ್ಥ ಮಾಡಿಕೊಂಡೆ. ಇನ್ನು ಮುಂದೆ ಓದುವಾಗ ನಿನ್ನ ಟೇಬಲ್ ಮೇಲೆ ಈ ರೇಡಿಯೋ, ಸಿನಿಮಾ ಪತ್ರಿಕೆಗಳು ಯಾವುವೂ ಇರಬಾರದು. ನೀನು ಓದುವ ಪುಸ್ತಕ ಬಿಟ್ಟರೆ, ಇನ್ನೇನೂ ಇರಬಾರದು ತಿಳಿಯಿತೆ" ಎಂದೆ. ನಂತರ ರಮೇಶ ಜ್ಞಾಪಕ ಶಕ್ತಿ ಕಡಿಮೆ ಎಂದು ನನ್ನ ಬಳಿ ಬರಲಿಲ್ಲ.

ಅಧ್ಯಯನದಲ್ಲಿ ಮೂರು ಹಂತಗಳಿವೆ. ಓದುವುದು,ಓದಿದ್ದರ ಅರ್ಥ ಗ್ರಹಿಸುವುದು ಮತ್ತು ಬೇಕಾದಾಗ ಜ್ಞಾಪಕಕ್ಕೆ ತಂದುಕೊಂಡು ಪುನರುಚ್ಛರಿಸುವುದು. ಎಲ್ಲಾ ವಿದ್ಯಾರ್ಥಿಗಳೂ ಓದುತ್ತಾರೆ; ಹಲವರು ತಾವು ಓದಿದ್ದರ ಅರ್ಥ ಗ್ರಹಿಸುತ್ತಾರೆ; ಬುದ್ಧಿವಂತರಾದ ಕೆಲವರು ಮಾತ್ರ ಪ್ರತಿ ಸಾರಿ ಅಧ್ಯಯನ ಮಾಡುವಾಗಲೂ ಮೂರೂ ಹಂತಗಳನ್ನು ಮುಗಿಸುತ್ತಾರೆ. ಆದ್ದರಿಂದ ಅಧ್ಯಯನ ಮಾಡುವಾಗ ಸುಮಾರು ಮೂವತ್ತು ನಿಮಿಷಗಳ ಕಾಲ ಓದಬೇಕು. ಇತರ ಆಕರ್ಷಣೆಗಳಿಗೆ ಮನಸ್ಸು ಹರಿಸದೆ, ಏಕಾಗ್ರತೆಯಿಂದ ಓದಿ ಅರ್ಥ ಗ್ರಹಿಸಬೇಕು. ನಂತರ ಓದು ನಿಲ್ಲಿಸಿ, ತಾನು ಓದಿದ್ದರ ಸಾರಾಂಶವನ್ನು ಮನನ ಮಾಡಿ ಕಾಗದದ ಮೇಲೆ ಬರೆಯುವುದರ ಮೂಲಕ, ಸಹಪಾಠಿಯೊಡನೆ ಚರ್ಚಿಸುವುದರ ಮೂಲಕ ಪುನರುಚ್ಛರಿಸಬೇಕು. ಹೀಗೆ ಅಧ್ಯಯನ ಮಾಡಿದರೆ ಬೇಗ ಮರೆಯುವುದಿಲ್ಲ. ಹೀಗೆ ಮಾಡದೆ ಗಂಟೆಗಟ್ಟಲೆ, ಚಂಚಲಚಿತ್ತರಾಗಿ ಓದಿದರೆ ವ್ಯರ್ಥ ಶ್ರಮವೇ ಹೊರತು ಪ್ರಯೋಜನವೇನಿಲ್ಲ. ಕ್ರಮವಾಗಿ ನಿಯಮಿತ ಅವಧಿಗಳಲ್ಲಿ ಅಧ್ಯಯನ, ಮನರಂಜನೆ ಕ್ರೀಡೆಗಳಲ್ಲಿ ತೊಡಗುವುದರಿಂದ ಮೈ ಮನಸ್ಸುಗಳು ಹದವಾಗಿ ಬೆಳೆಯುತ್ತವೆ, ಆರೋಗ್ಯವಾಗಿರುತ್ತವೆ.

ಲೈಂಗಿಕ ತೊಂದರೆಗಳು

ವೀರೇಂದ್ರನ ವೀಕ್ನೆಸ್ಸು

"ಸಾರ್ ತುಂಬಾ ವೀಕ್ನೆಸ್ಸು. ಒಂದು ಫರ್ಲಾಂಗ್ ನಡೆಯೋಕೂ ಆಗೊಲ್ಲ ಸಾರ್. ಮೈ ಕೈ ನೋವು. ಆಗಾಗ್ಯೆ ತಲೆದಿವ್ ಅಂತ ಹಿಡಿದುಕೊಂಡು ಬಿಡುತ್ತೆ. ನರಗಳನ್ನು ಟೆಸ್ಟ್ ಮಾಡಿ ಒಳ್ಳೆಯ ಔಷಧ ಬರ್ಕೊಡಿ ಸಾರ್" ಎಂದು ಹದಿನಾರು ವರ್ಷದ ವೀರೇಂದ್ರ ವೈದ್ಯರ ಮುಂದೆ ಗೋಗರೆದ. "ನಿನ್ನ ಜೊತೆ ಕುಸ್ತಿ ಆಡಿದರೆ ನಾನು ಸೋಲೋದು ಖಂಡಿತ. ನಿನಗೆಂಥಾ ವೀಕ್‌ನೆಸ್ಸೂ. ಎಲ್ಲಾ ನಿನ್ನ ಭ್ರಮೆ ಅಂತ ಹೇಳ್ತೀನಿ ಡಾಕ್ಟ್ರೇ. ಇವನು ತನ್ನ ಹಳೇ ರಾಗ ಬಿಡೋದಿಲ್ಲ" ವೀರೇಂದ್ರನ ತಂದೆ ಹೇಳಿದರು. ವಯಸ್ಸಿಗೆ ತುಸು ಹೆಚ್ಚು ಎನ್ನುವ ಬೆಳವಣಿಗೆ. ಪುಷ್ಟಿಯಾದ ಶರೀರ. ಆದರೆ ಮುಖದಲ್ಲಿ ಆತಂಕದ ಗೆರೆಗಳು. ಕುಣಿದು ಕುಪ್ಪಳಿಸಬೇಕಾದ ವಯಸ್ಸಿನಲ್ಲಿ ಇವನಿಗೇನು ದಾಡಿ ಎಂದಿತು ವೈದ್ಯರ ಮನಸ್ಸು. "ಇವನ ಅವಾಂತರಕ್ಕೆ ಮೂರು ನಾಲ್ಕು ಡಾಕ್ಟರುಗಳಿಗೆ ತೋರಿಸಿದೆ. ರಕ್ತ, ಮಲ, ಮೂತ್ರ ಎಲ್ಲ ಪರೀಕ್ಷೆ ಮಾಡಿ ಇವನಿಗೇನೂ ತೊಂದರೆಯಿಲ್ಲ. ಯಾಕೆ ಕರ್ಕೊಂಡು ಬಂದಿರಿ ಅಂದರು" ಮತ್ತೆ ತಂದೆ ಬಾಯಿ ಹಾಕಿದಾಗ, ಅವರನ್ನು ಹೊರಕ್ಕೆ ಕಳುಹಿಸಿದರು. ವೀರೇಂದ್ರನೊಂದಿಗೆ ಮಾತು ಶುರು ಹಚ್ಚಿದರು. "ಯಾವ ಸಿನಿಮಾ ನೋಡಿದೆಯಯ್ಯಾ. ಯಾರು ನಿನ್ನ ಫೇವರಿಟ್ ಹೀರೋಯಿನ್ನು....ಆಕೆ ನಿನ್ನ ಕನಸಿನಲ್ಲಿ ಬರ್ತಾಳೇನಯ್ಯಾ....ಆಗ ಏನಾಗುತ್ತೆ....ಹೇಳು ಪರವಾಗಿಲ್ಲ. ನಿಕ್ಕರ್ ಒದ್ದೆಯಾಗುತ್ತೆ....ಎಂದಾಗ ವೀರೇಂದ್ರ ಬಾಯಿ ಬಿಟ್ಟ. "ಹೌದು ಡಾಕ್ಟ್ರೆ. ವಾರಕ್ಕೆರಡು ಸಾರಿ ಹೋಗಿ ಬಿಡುತ್ತೆ. ಅದು ಹೋದರೆ ಶಕ್ತೀನೇ ಹೊರಟು ಹೋಗುತ್ತಂತೆ. ಕೊನೆಗೆ ತಿಖಂಡಿ ಆಗಿ ಬಿಡುತ್ತಾರಂತೆ. ನಿಜಾನೇ ಡಾಕ್ಟ್ರೇ. ನನಗೆ ಭಯ ಆಗಿಬಿಟ್ಟಿದೆ. ಯಾರೊಂದಿಗೂ ಹೇಳಿಕೊಂಡಿಲ್ಲ." ಭಯ, ಉದ್ವೇಗದ ಕಾರಣವನ್ನು ನೇರವಾಗಿ ಹೇಳೋದಿಕ್ಕೆ ನಾಚಿಕೆ ಪಟ್ಟುಕೊಂಡ ಅವನ ಮನಸ್ಸು, ಅದನ್ನು ಪರೋಕ್ಷವಾಗಿ 'ತನಗೆ ಸುಸ್ತು' ಎಂಬುದರ ಮೂಲಕ ತಿಳಿಸಿತ್ತು.

“ನೋಡಪ್ಪಾ, ನಮ್ಮ ದೇಹದಲ್ಲಿ ಉಚ್ಚೆ ಚೀಲ ಇದೆ. ಅದರಲ್ಲಿ ಉಚ್ಚೆ ಭರ್ತಿಯಾದಾಗ ಏನು ಮಾಡುತ್ತೀವೆ?....ಬಚ್ಚಲು ಮನೆಗೆ ಅಥವಾ ಬಯಲಿಗೆ ಹೋಗಿ ಉಚ್ಚೆ ಹೊಯ್ದು ಖಾಲಿ ಮಾಡ್ತೀವೆ. ಹಾಗೇ ನಿನ್ನ ವಯಸ್ಸಿಗೆ ವೀರ್ಯ ಗ್ರಂಥಿಗಳು ವೀರ್ಯವನ್ನು ಉತ್ಪತ್ತಿ ಮಾಡೋದಿಕ್ಕೆ ಪ್ರಾರಂಭಿಸುತ್ತವೆ. ಹೀಗೆ ಉತ್ಪತ್ತಿಯಾದ ವೀರ್ಯ, ವೀರ್ಯ ಚೀಲದಲ್ಲಿ ಶೇಖರವಾಗುತ್ತದೆ. ಹಾಗೆ ಶೇಖರವಾದದ್ದು ಒಂದು ದಿನ ಎಚ್ಚರವಾಗಿದ್ದಾಗಲೋ, ನಿದ್ರೆಯಲ್ಲೋ ಹೊರಕ್ಕೆ ಬರುತ್ತೆ. ಇದು ಸಹಜವಾದ, ಸ್ವಾಭಾವಿಕವಾದ ಕ್ರಿಯೆ. ನಿನಗೆ, ನನಗೆ ಎಲ್ಲರಿಗೆ ಆಗುವಂತಾದ್ದು. ಅದರಿಂದ ಯಾವ ಕೆಡಕೂ ಇಲ್ಲ. ಅಂತ ವಿವರವಾಗಿ ಜನನೇಂದ್ರಿಯಗಳು, ಅವು ಕೆಲಸ ಮಾಡೋ ರೀತಿ ಎಲ್ಲವನ್ನೂ ವೈದ್ಯರು ವಿವರಿಸಿದರು. “ಹೌದಾ ಡಾಕ್ಟ್ರೇ. ಇದುವರೆಗೆ ನನಗೆ ಇದನ್ನೆಲ್ಲಾ ಯಾರೂ ವಿವರಿಸಿರಲಿಲ್ಲ. ಇನ್ನು ನನಗೆ ಯಾವ ಭಯವೂ ಇಲ್ಲ. ತುಂಬಾ ಥ್ಯಾಂಕ್ಸ್ ಸಾರ್” ಎಂದ. ಆ ಹೊತ್ತೇ ಆಯಿತು ನಂತರ ವೀರೇಂದ್ರನನ್ನು ವೀಕ್ನೆಸ್ ಪುನಃ ಬಾಧಿಸಲಿಲ್ಲ.

ಸೀನನಿಗೆ ಹೊಡೆದ ಲಕ್ವ :

“ಸೀನಣ್ಣಂಗೆ ಬಲಗೈ ಬಿದ್ಹೋಗದೆ. ಡಾಕ್ಟರ್ ಮಾವನ್ನ ಕರ್ಕೊಂಡು ಬಾ ಅಂದ್ರು. ಈಗಲೇ ಬರಬೇಕಂತೆ” ಎನ್ನುತ್ತಿದ್ದ ಲಲಿತಳ ಧ್ವನಿ ಬಚ್ಚಲು ಮನೆಯಲ್ಲಿದ್ದ ನನಗೆ ಕೇಳಿಸಿತು. ನನ್ನ ತಂದೆಗೂ ಸೀನ, ಲಲಿತರ ತಂದೆಗೂ ಗಳಸ್ಯ ಕಂಠಸ್ಯ. ಸೀನ ಆರೋಗ್ಯವಂತನಾದ ಹುಡುಗ. ಹದಿನೈದರ ಪ್ರಾಯ. ಎಸ್ಸೆಲ್ಸಿಯಲ್ಲಿ ಓದ್ತಿದ್ದಾನೆ. ಜಾಣ ಅವನಿಗೆ ಈ ವಯಸ್ಸಿನಲ್ಲಿ ಲಕ್ವವೇ? ಮುಂದಿನ ಹತ್ತು ನಿಮಿಷಗಳಲ್ಲಿ ಅವರ ಮನೆಯಲ್ಲಿದ್ದೆ. ಮನೆಯವರೆಲ್ಲಾ ಸೀನನ ಸುತ್ತ ಜಮಾಯಿಸಿಬಿಟ್ಟಿದ್ದರು. ಅವನ ಅಜ್ಜಿ ಅವನ ಬಲ ತೋಳಿಗೆ ತಿಕ್ಕಿದ್ದ ನೀಲಗಿರಿ ತೈಲದ ವಾಸನೆ ರೂಮಿನ ತುಂಬಾ ಹರಡಿತ್ತು. ಶ್ರೀನಿವಾಸ ಹಾಸಿಗೆಯ ಮೇಲೆ ಕುಳಿತಿದ್ದ. ಅವನ ಬಲ ತೋಳು ದೇಹಕ್ಕೆ ಅಂಟಿಸಿದ ಹಾಗೆ ನಿಶ್ಚಲವಾಗಿದೆ. ಪರೀಕ್ಷಿಸಿದೆ ರಿಫ್ಲೆಕ್ಸಸ್ ಎಲ್ಲ ಸರಿಯಾಗಿತ್ತು. ಬೆರಳುಗಳು ಸರಾಗವಾಗಿ ಆಡುತ್ತಿದ್ದುವು (ಇದು ಲಕ್ವದಲ್ಲಿ ಸಾಧ್ಯವಿಲ್ಲ ಅಂತ, ಪಾಪ ಸೀನನಿಗೇನು ಗೊತ್ತು!) ಇದು ಉನ್ಮಾದದ ಲಕ್ವ (ಹಿಸ್ಟೀರಿಕಲ್ ಪೆರಾಲಿಸಿಸ್) ಎಂದು ಗೊತ್ತಾಯಿತು. “ಇದೇನು ದೊಡ್ಡ ಖಾಯಿಲೆ ಅಲ್ಲಯ್ಯ. ನೋಡು ಈಗ ನಿನಗೆ ಒಳ್ಳೆಯ ಸ್ಟ್ರಾಂಗ್ ಇನ್‌ಜೆಕ್ಷನ್ನನ್ನು ಈ ತೋಳಿಗೇ ಕೊಡ್ತೇನೆ. ಔಷಧಿ ಎಷ್ಟು ಪವರ್‌ಫುಲ್ ಗೊತ್ತಾ? ಒಳಗಡೆ ಹೋಗ್ತಿದ್ದ ಹಾಗೇ ನಿನ್ನ ಕೈ ಆಡೋದಿಕ್ಕೆ ಶುರುವಾಗುತ್ತೆ. ತಿಳೀತಾ” ಎಂದು ಅವನ ಖಾಯಿಲೆಯನ್ನು ಮಾನ್ಯತೆ ಮಾಡಿ ಅವನ ಮನಸ್ಸಿಗೆ ಬಲವಾದ ಸಲಹೆ ಕೊಟ್ಟು ಒಂದು ಮಿ.ಲೀ. ‘ಡಿಸ್ಟಿಲ್ಡ್ ವಾಟರ್’ನ್ನು ಚುಚ್ಚಿದೆ. ಪವಾಡವೆಂಬಂತೆ ಅವನ ಬಲ ತೋಳು ಆಡಲು ಶುರುವಾಯಿತು. “ಡಾಕ್ಟರೆ, ನೀವು ಮ್ಯಾಜಿಕ್ ಮಾಡಿಬಿಟ್ರಿ. ನೋಡಿ ಈಗ ಆಡಿಸೋದಿಕ್ಕೆ ಆಗ್ತಾ ಇದೆ” ಎಂದು ಸಂಭ್ರಮ ಪಟ್ಟ. “ನಾನಲ್ಲಪ್ಪಾ

ಮ್ಯಾಜಿಕ್ ಮಾಡಿದ್ದು ನಿನ್ನ ಮನಸ್ಸಿನ ಮ್ಯಾಜಿಕ್ ಇದು" ಎಂದು ನನ್ನ ಮನಸ್ಸಿನಲ್ಲೇ ಅಂದುಕೊಂಡು "ಸಾಯಂಕಾಲ ನಮ್ಮ ಮನೆ ಹತ್ತಿರ ಬಾ. ನಿನ್ನ ಜೊತೆ ಸ್ವಲ್ಪ ಮಾತ ನಾಡಬೇಕು" ಎಂದು ಹೇಳಿ ಆಸ್ಪತ್ರೆಗೆ ಹೋದೆ.

ಅವನು ಸಂಜೆ ಬಂದಾಗ, ಅವನ ಓದು, ಗೆಳೆಯರು, ಶಾಲೆ, ಉಪಾಧ್ಯಾಯರು ಮನೆಯಲ್ಲಿ ಆತನ ಪ್ರಕಾರ, ಅವನನ್ನು ಹೇಗೆ ನೋಡಿಕೊಳ್ಳುತ್ತಾರೆ ಎಲ್ಲಾ ವಿಚಾರಿ ಸಿದೆ. ಎಲ್ಲೂ ಕಷ್ಟ ಸಮಸ್ಯೆಯ ಸುಳಿವಿರಲಿಲ್ಲ. "ಏನಯ್ಯಾ ರಾತ್ರಿ ಕನಸಿನಲ್ಲಿ ಮೋಹಿನೀ ಏನಾದ್ರೂ ಕಾಡ್ತಾಳೇನಯ್ಯಾ" ಎಂದೆ. ಶ್ರೀನಿವಾಸ ನಾಚಿ ತಲೆ ತಗ್ಗಿಸಿದ. "ಮೋಹಿನಿ ಮಾಯೆಯ ಬಲೆ ಬೀಸಿದಾಗ ಕೆಲವರು ಕೈಹಾಕಿ ವೀರ್ಯ ತೆಕ್ಕೊಳ್ತಾರೆ. ನಿನಗೂ ಹಾಗೇನಾದ್ರೂ ಆಗುತ್ಯೆ?" ಎಂದೆ. ಹೌದು ಎಂಬಂತೆ ಗೋಣು ಹಾಕಿದ. ತಗ್ಗಿಸಿದ ತಲೆ ಎತ್ತಲಿಲ್ಲ. "ಅರೆ ಇದಕ್ಯಾಕೆ ಅಷ್ಟು ಸಂಕೋಚ. ನಿನ್ನ ವಯಸ್ಸಿನಲ್ಲಿ ಇದೆಲ್ಲಾ ಮಾಮೂಲು" ಎಂದೆ. "ಡಾಕ್ಟ್ರೆ ಕೈಹಾಕಿ ತೆಕ್ಕೊಳ್ಳೋದು ಕೆಟ್ಟದ್ದಂತೆ. ಖಾಯಿಲೆ ಬರ್ತದಂತೆ" ಅವನ ಧ್ವನಿ ನಡುಗಿತ್ತು. ಅವನ ಖಾಯಿಲೆ ಗುಟ್ಟು ರಟ್ಟಾಗಿತ್ತು 'ಹಾಗಂತ ಯಾರು ಹೇಳಿದರು ನಿನಗೆ' ಎಂದು ವಿಚಾರಿಸಿದೆ. "ಒಂದು ವಾರಪತ್ರಿಕೆಯಲ್ಲಿ ನಿನ್ನೆ ಓದಿದೆ ಡಾಕ್ಟ್ರೆ, ಭಯ ಆಗೋಯ್ತು. ನಾನು ಎಷ್ಟೋಂದು ದಿವಸ ಈ ಕೆಲಸ ಮಾಡಿದ್ದೀನಿ. ಏನೂ ತೊಂದರೆ ಆಗೋಲ್ಲ ಅಲ್ಲವೇ ಡಾಕ್ಟ್ರೆ" ಆತಂಕದಿಂದ ಪ್ರಶ್ನಿ ಸಿದ. "ನೋಡಯ್ಯಾ ಕಾಗದದ ಮೇಲೆ ಅಚ್ಚಾಗಿ ಬಂದದ್ದೆಲ್ಲಾ ಸತ್ಯವಲ್ಲ. ಕೆಲವ್ ಸಾರಿ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದ ಕೆಲವರು ತಪ್ಪು ತಪ್ಪಾಗಿ ಬರೀತಾರೆ. ಈ ವಿಷಯದಲ್ಲಿ ದೊಡ್ಡ ಡಾಕ್ಟರುಗಳು, ವಿಜ್ಞಾನಿಗಳು ಏನೇಳ್ತಾರೆ ಗೊತ್ತೆ? ನಿಯ ಮಿತವಾಗಿ ಹಸ್ತ ಮೈಥುನ ಮಾಡಿಕೊಳ್ಳೋದು ಮನುಷ್ಯನಿಗೆ ಸಹಜವಾದದ್ದು. ಅದ ರಿಂದ ಅಪಾಯವಿಲ್ಲ. ಮಿತಿ ಇಲ್ಲದೇ ಹೋದರೆ, ಹಸ್ತಮೈಥುನವಿರಲಿ, ಬೇರೆ ಪ್ರತಿ ಯೊಂದು ವಿಷಯವೂ ನಮಗೆ ಕೆಡುಕು ಮಾಡುತ್ತೆ. ಅತಿಯಾದರೆ ಅಮೃತವೂ ವಿಷ ವಾಗುತ್ತೆ ಎನ್ನೋ ಗಾದೆ ಕೇಳಿಲ್ಲವೇ ನೀನು. ನಾನು ಮಾಡ್ತಿರೋದು ತಪ್ಪು ಕೆಟ್ಟದ್ದು ಅಂತ ಆತಂಕ ಪಟ್ಟರೆ, ಖಾಯಿಲೆ ಬರುತ್ತೆ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡ್ಬೇಡ. ತಿಳೀತಾ" ಎಂದು ಅವನಿಗೆ ಸಮಾಧಾನ ಮಾಡಿ ಲೈಂಗಿಕ ಚಟುವಟಿಕೆಯ ಬಗ್ಗೆ ವಿವರಣೆ ಕೊಟ್ಟೆ. "ಡಾಕ್ಟ್ರೆ ನನಗೆ ಇದನ್ನೆಲ್ಲಾ ತಿಳಿಕೋಬೇಕು ಅಂತ ಬಹಳ ದಿವಸದಿಂದ ಆಸೆ ಇತ್ತು. ಆದರೆ ಯಾರನ್ನು ಕೇಳೋದು, ಹೇಗೆ ಕೇಳೋದು ಅಂತ ಗೊತ್ತಾಗಲಿಲ್ಲ. ನಿಮಗೆ ತುಂಬಾ ಥ್ಯಾಂಕ್ಸ್ ಡಾಕ್ಟ್ರೇ" ಎಂದು ಹೋದವನಿಗೆ ಮತ್ತೆ ಪೆರಾಲಿಸಿಸ್ ಬಡಿಯಲಿಲ್ಲ.

ಹಸ್ತಮೈಥುನ ಮಾಡಿಕೊಳ್ಳುವ ಅದಮ್ಯ ಆಸೆ. ಅದು ನೀಡುವ ಸುಖ ಅವನಿಗೆ ಬೇಕು. ಆದರೆ ಓದಿದ ಲೇಖನ ಅದು ಕೆಟ್ಟದ್ದು, ಮಾಡಿದರೆ ಕೂದಲು ನರೆಯುತ್ತೆ, ಶಕ್ತಿ ಉಡುಗುತ್ತೆ, ಪುರುಷತ್ವ ಕಡಿಮೆ ಆಗುತ್ತೆ, ಸುಸ್ತು, ನರದೌರ್ಬಲ್ಯ ಬರುತ್ತೆ

ಎಂದು ಹೇಳಿ ಅವನನ್ನು ಭಯಪಡಿಸುತ್ತಿತ್ತು. ನೋಡಲಾರ, ನೋಡದಿರಲಾರ. ಈ ದ್ವಂದ್ವದಲ್ಲಿ ಮನಸ್ಸು ಘಾಸಿಗೊಂಡಿತು. ಆಸೆಯೇ ಗೆಲ್ಲುವ ಸ್ಥಿತಿ ಬಂದಾಗ ಈ ಇಕ್ಕಟ್ಟಿನಿಂದ ಪಾರಾಗಲು ಒಳ ಮನಸ್ಸು ಉಪಾಯ ಮಾಡಿತು. ಬಲ ತೋಳಿನ ಮಾಂಸಖಂಡಗಳನ್ನು ನಿಯಂತ್ರಿಸುವ ನರತಂತುಗಳನ್ನು ನಿಷ್ಕ್ರಿಯಗೊಳಿಸಿತು. ಕೈ ಆಡುವುದಿಲ್ಲ. ಇನ್ನೆಲ್ಲಿಯ ಹಸ್ತಮೈಥುನ? ಇದೇ ಉನ್ಮಾದ ಪರಿವರ್ತನಾ ಪ್ರತಿಕ್ರಿಯೆ.

ಗರಬಡಿದ ದೇವರಾಜ

ಇಬ್ಬರ ಸಹಾಯದಿಂದ ನಡೆದು ಬಂದ ಎನ್ನುವುದಕ್ಕಿಂತ, ಎತ್ತಿಸಿಕೊಂಡು ಬಂದ ಹುಡುಗನನ್ನು ನೋಡಿದೆ. ದೆವ್ವವನ್ನು ಕಂಡಂತೆ ಬಿಳಿಚಿಕೊಂಡ ಮುಖ, ಶೂನ್ಯದಲ್ಲಿ ನೆಟ್ಟಿರುವ ಕಣ್ಣುಗಳು, ವೇಗದ ಉಸಿರಾಟ. ಹಣೆಯ ಮೇಲೆ ಬೆವರಿನ ಸಾಲು. ಕುರ್ಚಿಯ ಮೇಲೆ ಕುಳಿತಿದ್ದರೂ ನಡುಗುತ್ತಿರುವ ಕಾಲುಗಳು. ಆತ ತೀವ್ರತರವಾದ ಆತಂಕದಿಂದ ಬಳಲುತ್ತಿದ್ದಾನೆ ಎಂಬುದನ್ನು ಸಾರಿ ಹೇಳುತ್ತಿದ್ದವು. "ಈತ ನಮ್ಮ ರೂಮ್ ಮೇಟ್ ಸಾರ್. ನಾವು ಬೆಳಿಗ್ಗೆ ಎದ್ದಾಗ, ಹಾಸಿಗೆ ಮೇಲೆ ಹೀಗೇ ಕುಳಿತಿದ್ದ. ಮಾತಾಡಿಸಿದರೆ ಬರೀ ಆಂ ಊಂ ಎನ್ನುತ್ತಾನೆ. ಮಾತಿಲ್ಲ. ಕಥೆಯಿಲ್ಲ. ಅಯ್ಯೋ ಇನ್ನೇನು ಗತಿ ಅಂತ ಒಂದೆರಡು ಸಾರಿ ಅವನಷ್ಟಕ್ಕೆ ಅವನೇ ಅಂದುಕೊಂಡದ್ದನ್ನು ಕೇಳಿದೆವು" ಎಂದು ರೋಗಿಯ (ದೇವರಾಜ) ಜೊತೆಯಲ್ಲಿ ಬಂದಿದ್ದವರಲ್ಲಿ ಒಬ್ಬ ನುಡಿದ. ದೇವರಾಜ ಪಿ.ಯು.ಸಿ ಮೊದಲನೇ ವರ್ಷದಲ್ಲಿದ್ದ. ತಂದೆ ತಾಯಿ ದೂರದ ಊರಿನಲ್ಲಿ ಇದ್ದದ್ದರಿಂದ, ತಮ್ಮ ಜನಾಂಗದ ಹಾಸ್ಟೆಲ್‌ನಲ್ಲಿ ಬಿಡಾರ ಮಾಡಿದ್ದ. ಎಸ್ಸೆಲ್ಸಿ ತನಕ ತಂದೆ ತಾಯಿಗಳ ಜೊತೆಯಲ್ಲೇ ಇದ್ದವನು, ಈಗ ಬೆಂಗಳೂರಿನಲ್ಲಿ ಅವರಿಂದ ದೂರವಿರಬೇಕಾದ ಸ್ಥಿತಿಗೆ ಕ್ರಮೇಣ ಹೊಂದಿಕೊಂಡಿದ್ದ. ಓದುವುದರಲ್ಲೂ ಬುದ್ಧಿವಂತ. ಇದುವರೆಗೂ ಯಾವ ಖಾಯಿಲೆಯಿಂದ ನರಳಿದವನಲ್ಲ. ಅವನ ರೂಮಿನಲ್ಲಿ ಅವನಲ್ಲದೆ ಇನ್ನಿಬ್ಬರು ಇದ್ದರು. ರಾಜ ಬಿ.ಎಸ್ಸಿ ಫೈನಲ್‌ನಲ್ಲಿದ್ದರೆ, ವೆಂಕಟೇಶ ದೇವರಾಜನ ಕ್ಲಾಸ್ ಮೇಟ್. ದೇವರಾಜನನ್ನು ಮಾತಾಡಿಸುವುದು ಪ್ರಯೋಜನವಿಲ್ಲವೆಂದು ಅರಿತು ಅವನ ದೇಹದ ಪರೀಕ್ಷೆ ಮಾಡಿದೆ. ನಾಡಿಯ ಬಡಿತ ನಿಮಿಷಕ್ಕೆ ನೂರರ ಗಡಿ ದಾಟಿತ್ತು. ಎದೆ ಬಡಿತ ತಮಟೆ ಹೊಡೆದಂತಿತ್ತು. ಬೆವರಿನಿಂದ ಕೈ ಕಾಲುಗಳು ಒದ್ದೆಯಾಗಿ, ತಣ್ಣಗಿದ್ದವು. ಶರೀರದಲ್ಲಿ ರೋಗ ಸೂಚಕ ನ್ಯೂನತೆಗಳೇನೂ ಇಲ್ಲದ್ದರಿಂದ, ತತ್‌ಕ್ಷಣ ಅವನಿಗೆ ಉದ್ವೇಗ ನಿವಾರಕ ಸೂಜಿಮದ್ದನ್ನು ಕೊಟ್ಟೆ. ಕೆಲ ನಿಮಿಷಗಳ ನಂತರ ನಿದ್ರೆ ಅವನನ್ನು ಆವರಿಸಿತು. ವಾರ್ಡ್‌ನಲ್ಲಿ ಸೇರಿಸಲಾಯಿತು. ರಾಜ, ವೆಂಕಟೇಶರನ್ನು ಮತ್ತಷ್ಟು ಪ್ರಶ್ನಿಸಿದೆ. ದೇವರಾಜ ಅಷ್ಟು ಸೋಷಿಯಲ್ ಅಲ್ಲವೆಂದೂ, ಸಂಕೋಚದ ಸ್ವಭಾವದವನೆಂದೂ ತಿಳಿಯಿತು. ತಿಂಗಳಿಗೆ ಒಂದೆರಡು ಸಿನೇಮಾ ನೋಡುವುದು ಬಿಟ್ಟರೆ, ಇನ್ಯಾವ ಹೊರ ಚಟುವಟಿಕೆಯೂ ಇರಲಿಲ್ಲ. ಯಾವ ದುರಭ್ಯಾಸವೂ ಇರಲಿಲ್ಲ. ಹಿಂದಿನ ದಿನ ತಡವಾಗಿ

ಆಂವರೆ ಹನ್ನೊಂದು ಗಂಟೆಗೆ ಬಂದಿದ್ದ. ರಾಜ, ವೆಂಕಟೇಶ ಮಲಗಿದ್ದರಿಂದ ಎಲ್ಲಿಗೆ ಹೋಗಿದ್ದನೆಂದು ವಿಚಾರಿಸಿರಲಿಲ್ಲ. ದೇವರಾಜನ ಆತಂಕಕ್ಕೆ ಕಾರಣದ ಸುಳಿವು ನನಗೆ ಸಿಗಲಿಲ್ಲ. "ನಿಮಗೇನಾದರೂ ಹೊಸ ಸಂಗತಿ ತಿಳಿದರೆ ಬಂದು ಹೇಳಿ" ಎಂದೆ.

ಆ ದಿನವೆಲ್ಲಾ ದೇವರಾಜ ನಿದ್ರೆಯಲ್ಲೇ ಕಳೆದ. ಮಾರನೆಯ ದಿನ ರಾಜ, ವೆಂಕಟೇಶ ಹೊಸ ಸಂಗತಿಯನ್ನು ತಂದರು. ಅವರು ರೂಮಿಗೆ ಹೋಗಿ, ದೇವರಾಜನ ಗಾಬರಿಗೆ ಕಾರಣವಾಗಬಹುದಾದ ಪತ್ರ ಇತ್ಯಾದಿ ಹುಡುಕುತ್ತಿರಲು ಅವನ ಮೇಜಿನ ಡ್ರಾಯರ್‌ನಲ್ಲಿ ಹೆಣ್ಣಿನ ನಗ್ನ ಚಿತ್ರಗಳ ಪುಸ್ತಕವನ್ನು ಕಂಡು ಆಶ್ಚರ್ಯ ಪಟ್ಟರು. ಪುಸ್ತಕದ ಒಳ ರಟ್ಟಿನ ಮೇಲೆ ಪ್ರೇಂಕುಮಾರ್‌ನ ಹೆಸರನ್ನು ಕಂಡು, ಪುಸ್ತಕ ಅವನದೆಂದು ಊಹಿಸಲು ಕಷ್ಟವಾಗಲಿಲ್ಲ. ಹಾಸ್ಟೆಲಿನ ರಸಿಕ ಶಿಖಾಮಣಿ, ಕಾಮಣ್ಣ ಎಂದು ಪ್ರಸಿದ್ಧನಾಗಿದ್ದ ಅವನನ್ನು ಕಂಡು ಪುಸಲಾಯಿಸಿದಾಗ, ನಿಜ ಸಂಗತಿ ಹೊರಬಿದ್ದಿತ್ತು. ಪ್ರೇಂಕುಮಾರ್ ದೇವರಾಜ ಒಂದೇ ಊರಿನವರು. ಪ್ರೇಂಕುಮಾರ್‌ನಿಗೆ ಎಷ್ಟು ಹಣವಿದ್ದರೂ ಸಾಲುತ್ತಿರಲಿಲ್ಲ. ಅವನು ಬೆಂಗಳೂರಿಗೆ ಓದಲು ಬಂದದ್ದು, ಯಾವನಿರ್ಬಂಧವೂ ಇಲ್ಲದೆ ಮಜಾ ಮಾಡಬಹುದು ಎಂಬ ಏಕೈಕ ಉದ್ದೇಶದಿಂದ. ಅವನ ಪೆದ್ದ ತಂದೆಗೆ, ಮಗ ದೊಡ್ಡ ಪಟ್ಟಣದಲ್ಲಿ, ದೊಡ್ಡ ಕಾಲೇಜಿನಲ್ಲಿ ಓದ್ತಿದಾನೆ ಅಂತ, ಹಿಡಿ, ಹಿಡಿ ಹಣ ಕಳುಹಿಸುತ್ತಿದ್ದರೂ, ಮದ್ಯ, ಮದಿರೆಯರ ಹಿಂದೆ ಬಿದ್ದ ಪ್ರೇಂಕುಮಾರನಿಗೆ ಅದು ಜುಜುಬಿ. ಸಾಧ್ಯವಾದಾಗಲೆಲ್ಲಾ ಬೇರೆಯವರನ್ನು ಬೋಳಿಸುತ್ತಿದ್ದ. ಅವನ ಬಲೆಗೆ ಬಿದ್ದ ಇತ್ತೀಚಿನ ಬಕರಾ ದೇವರಾಜ. ತುಟಿಯ ಮೇಲೆ ಎಳೆ ಮೀಸೆ ಮೂಡುತ್ತಿದ್ದ ಅವನಿಗೆ ಹುಡುಗಿಯರ ಬಗ್ಗೆ ಬಾಯಲ್ಲಿ ನೀರೂರುವ ವರ್ಣನೆ ಮಾಡಿ, ಬೆತ್ತಲೆ ಎದೆಯ ಚಿತ್ರಗಳನ್ನು ತೋರಿಸಿ ದುಡ್ಡು ಕಿತ್ತಿದ್ದಲ್ಲದೆ, ಹಿಂದಿನ ದಿನ ಅವನಿಂದ ಇನ್ನೂರು ರೂಪಾಯಿ ಪಡೆದು ವೇಶ್ಯೆಯೊಬ್ಬಳ ಮನೆಗೆ ಕರೆದೊಯ್ದಿದ್ದ. "ಅವಳು ಹತ್ತಿರಕ್ಕೆ ಕರೆದರೆ, ಮಾಡೋಕ್ಕಾಗದೆ
ಓಡಿ ಬಂದುಬಿಟ್ಟವನೆ ಎಳೆ ನಿಂಬೆಕಾಯಿ!" ಎಂದು ನಗಾಡಿದ್ದ.

ವಯಸ್ಸಿಗೆ ಸಹಜವಾದ ಲೈಂಗಿಕ ಆಕರ್ಷಣೆಗೊಳಗಾಗಿದ್ದ ದೇವರಾಜ, ಈ ವಿಚಾರದಲ್ಲಿ ಸರಿಯಾದ ತಿಳುವಳಿಕೆ ಇಲ್ಲದೆ, ಪ್ರೇಂಕುಮಾರನ ಕುತಂತ್ರದಿಂದ ಹಳ್ಳಕ್ಕೆ ಬಿದ್ದಿದ್ದ. ಏನೂ ಮಾಡಲು ತೋಚದೆ ಪೆಕರನಂತೆ ಆಡಿದಾಗ, ಕಸುಬಿನ ಹೆಣ್ಣು ತಮಾಷೆ ಮಾಡಿ ಬಲಿತ ಮೇಲೆ ಬಾ ಎಂದು ಓಡಿಸಿದ್ದಳು. ನಿರಾಶೆ, ಅವಮಾನ, ಯಾರಿಗಾದರೂ ತಿಳಿದರೆ ಏನು ಗತಿ ಎಂಬ ಭಯದ ಬ್ರಹ್ಮರಾಕ್ಷಸ ಅವನನ್ನು ಹಿಡಿದುಕೊಂಡಿತು, ರಾತ್ರಿಯನ್ನು ನಿದ್ದೆಯಿಲ್ಲದೆ ಕಳೆದ ಅವನು ತೋಳಗಳ ನಡುವೆ ಸಿಕ್ಕ ಹುಲ್ಲೆಯಂತಾಗಿದ್ದ. ಮಾತನಾಡಲೂ ಆಗದಷ್ಟು ದಿಙ್ಮೂಢನಾಗಿದ್ದ.

ಪ್ರಜ್ಞೆ ತಪ್ಪುವ ಪಂಕಜ

"ಡಾಕ್ಟರೇ, ದೇವರು ನಮ್ಮ ಮಗಳಿಗೆ ಒಳ್ಳೆ ರೂಪ ಕೊಟ್ಟಿದ್ದಾನೆ. ಒಳ್ಳೇ ಬುದ್ಧಿ, ಗುಣ ಕೊಟ್ಟಿದ್ದಾನೆ. ಆದರೆ ಈಗ ಕೆಟ್ಟ ಖಾಯಿಲೆಯನ್ನೂ ಕೊಟ್ಟಿದ್ದಾನೆ. ಈ ಕಳಂಕ

ದಿಂದ ತಾವು ಅವಳನ್ನು ಮುಕ್ತಳನ್ನಾಗಿ ಮಾಡಬೇಕು.” ಎಂದು ಸ್ವಲ್ಪ ನಾಟಕೀಯವಾಗಿ ಹೇಳಿದರೂ ರಾಮಾಶಾಸ್ತ್ರಿಗಳ ಆತಂಕ, ಆಸ್ತೆ ಅರ್ಥವಾಗಿತ್ತು. ಎಷ್ಟಾದರೂ ಅವರು ಶಾಸ್ತ್ರಿಗಳಲ್ಲವೇ. ವ್ಯಾಕರಣ ಬದ್ಧವಾಗಿ, ರಾಗವಾಗಿ ಮಾತಾಡಿಯೇ ರೂಢಿ. ಅವರ ಮಗಳು ಪಂಕಜಳಿಗೆ ಈಗ ಹದಿನಾಲ್ಕು ವರ್ಷ ವಯಸ್ಸು. ಹೈಸ್ಕೂಲು ಎಂಟನೇ ತರಗತಿಯಲ್ಲಿದ್ದಾಳೆ. ಏಳನೇ ತರಗತಿಗೆ ಜಿಲ್ಲೆಗೇ ಫಸ್ಟ್ ಬಂದ ಖ್ಯಾತಿ ಅವಳದು. ಒಂದು ವರ್ಷದ ಹಿಂದೆಯೇ ಋತುಮತಿಯಾಗಿದ್ದಳು. ಅದರ ಹಿಂದೆಯೇ ಈ ಖಾಯಿಲೆ ಅವಳನ್ನು ಅಂಟಿಕೊಂಡಿತ್ತು. ಋತುಸ್ರಾವ ಶುರುವಾಗಲು ಒಂದು ವಾರ ಇದೆ ಎನ್ನುವಂತೆ, ದಿನಕ್ಕೆ ಎರಡು ಮೂರು ಬಾರಿ ಪ್ರಜ್ಞೆತಪ್ಪಿ ಬೀಳುತ್ತಾಳೆ. ಋತುಸ್ರಾವ ನಿಂತ ಒಂದೆರಡು ದಿನದ ನಂತರ ಅದೂ ನಿಲ್ಲುತ್ತದೆ. “ನನಗೆ ಎಂಗೆಂಗೋ ಆಗ್ತಿದೆ” ಎಂದು ಕೂಗಿ, ಕುಳಿತು ನೆಲಕ್ಕೆ ಉರುಳುತ್ತಾಳೆ. ಹತ್ತು ನಿಮಿಷ ಪ್ರಜ್ಞೆ ಇರುವುದಿಲ್ಲ. ಆದರೆ ಕೈ ಕಾಲು ಅದುರುವುದು, ಬಾಯಲ್ಲಿ ನೊರೆ, ಮೂತ್ರ ವಿಸರ್ಜನೆ ಇತ್ಯಾದಿ ಅಪಸ್ಮಾರದ ಚಿಹ್ನೆಗಳೇನೂ ಇರುತ್ತಿರಲಿಲ್ಲ. ಅದೂ ಇದೂ ಮಾತನಾಡಿ, ಪಂಕಜಳಿಗೆ ಇದಲ್ಲದೆ ಇನ್ಯಾವ ತೊಂದರೆಯೂ ಇಲ್ಲ, ಕಷ್ಟಗಳೂ ಇಲ್ಲ ಎಂದು ತಿಳಿದುಕೊಂಡೆ. ರಾಮಾಶಾಸ್ತ್ರಿಗಳಿಗೆ ಪಂಕಜ ಮೂರನೇ ಮಗಳು. ಮೊದಲ ಇಬ್ಬರು ಹೆಣ್ಣು ಮಕ್ಕಳಿಗೆ ಇನ್ನೂ ಮದುವೆಯಾಗಬೇಕಾಗಿದೆ. ಶಾಸ್ತ್ರಿಗಳು ಶ್ರೀಮಂತರಲ್ಲದಿದ್ದರೂ ಊಟ ಬಟ್ಟೆಗೆ ಕೊರತೆ ಇರಲಿಲ್ಲ. ಋತುಸ್ರಾವದ ಅವಧಿಯಲ್ಲೇ ಪ್ರಜ್ಞೆ ತಪ್ಪುತ್ತದೆ ಎಂಬುದು ಅವೆರಡಕ್ಕೂ ಏನೋ ಸಂಬಂಧವಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತಿತ್ತು.

“ಮೊದಲ ಸಾರಿ ಋತುಮತಿಯಾದಾಗ ನಿನಗೇನು ಅನಿಸಿತಮ್ಮ? ಕೆಲವರು ಸಂತೋಷ ಪಡುತ್ತಾರೆ, ಕೆಲವರು ಭಯ ಪಡುತ್ತಾರೆ, ಕೆಲವರು ತೀರ ನಾಚಿಕೆ ಪಡುತ್ತಾರೆ. ನಿನಗೆ....”ವೈದ್ಯರು ಅವಳನ್ನು ವಿಚಾರಿಸಿದರು. “ನನಗೆ ಭಯ, ಬೇಸರ ಆಯ್ತು ಡಾಕ್ಟ್ರೆ. ನನ್ನ ದೇಹದೊಳಗೆ ಏನೋ ಆಗ್ತಾ ಇದೆ ಅಂತ ಹೆದರಿಕೆ ಆಯ್ತು. ಅಡುಗೆ ಮನೆಯಲ್ಲಿ ಅಮ್ಮ ಆಗ ಪೂಜೆ ಮಾಡ್ತಾ ಇದ್ದರು ನನಗೆ ಹೀಗಾಯ್ತು ಅಂತ ಹೇಳಿದೆ. ಥೂ ನಡಿಯೇ ಹೊರಗೆ. ಎಲ್ಲಾ ಮುಟ್ಟಿಕೊಂಡು ಮೈಲಿಗೆ ಮಾಡಿ ಬಿಟ್ಟೆಯಾ. ನನ್ನ ಗ್ರಹಚಾರ. ಆ ಮೂಲೇಲಿ ಕುಕ್ಕರ ಬಡಿ. ಕಲಿಂದಿಳಿ ನೀರು ಹಾಕೋತನಕ ಅಲ್ಲೇ ಕೂತಿರು ಎಂದು ಕಜ್ಜಿನಾಯನ್ನು ಅಟ್ಟೋ ಹಾಗೆ ನನ್ನ ಅಡುಗೆ ಮನೆಯಿಂದ ಅಟ್ಟಿದರು. ನನಗೆ ಅಳು ಬಂದುಬಿಟ್ಟಿತು ಡಾಕ್ಟ್ರೆ ಅತ್ತು ಬಿಟ್ಟೆ. ನೀರು ಹಾಕೋವಾಗಲೂ ಅಮ್ಮ ವಟಗುಟ್ಟುತ್ತಲೇ ಇದ್ದರು. ಏನು ಅವಸರವಾಗಿತ್ತೇ ನಿನಗೆ. ಇಷ್ಟು ಬೇಗ ನೆರೆಯೋದಿಕ್ಕೆ. ಎಲ್ಲಾ ನನ್ನ ಖರ್ಮ ಅಂತ ಏನೇನೋ ಅಂದರು. ಆಮೇಲೆ ನನಗೆ ತುಂಬಾ ಹೊಟ್ಟೆ ನೋವು, ಸೊಂಟ ನೋವು, ತಲೆ ತಿರುಗು ಎಲ್ಲಾ ಬಂದು ಬಿಟ್ಟಿತು. ಅಮ್ಮನಿಗೆ ಹೇಳಿದೆ. ಅದೇನೂ ಮಾಡೊಲ್ಲ. ಎರಡು ದಿನ ತಡಕೊಳ್ಳೇ. ನಿಂತು ಹೋಗುತ್ತೆ ಅಂದರು. ಆ ನಾಲ್ಕು ದಿವಸ ಸ್ನಾನವಿಲ್ಲ. ಬಟ್ಟೆ ಹೋಗೋದು ಅಸಹ್ಯವೆನಿಸಿಬಿಟ್ಟಿತು

ಡಾಕ್ಟ್ರೇ. ಇನ್ನು ತಿಂಗಳು ತಿಂಗಳು ಈ ನರಕ ಅನುಭವಿಸಬೇಕಲ್ಲಪ್ಪಾ ಅಂತ ನೆನಸಿಕೊಂಡು ನಡುಗಿಬಿಟ್ಟೆ" ಎಂದಳು.

ಬೆಳೆದು ನಿಂತ ಇಬ್ಬರು ಹೆಣ್ಣು ಮಕ್ಕಳಿಗೆ ಇನ್ನೂ ಮದುವೆಯಾಗದೇ ಉಳಿದಿದ್ದ ಸಂಕಟ, ಪಂಕಜಳ ತಾಯಿ ಆ ರೀತಿ ಮಾತನಾಡಲು ಪ್ರಚೋದಿಸಿದ್ದುವು. ಅವರ ಅಸಮಾಧಾನದ ಮಾತು 'ಹೆದರಿದವನ ಮೇಲೆ ಹಾವೆಸದಂತೆ' ಪಂಕಜಳನ್ನು ತಲ್ಲಣಿಸಿದ್ದುವು. ಮುಂದಿನ ಋತುಸ್ರಾವದ ದಿನ ಬರುತ್ತಿದ್ದಂತೆ ಅವಳ ಮನಸ್ಸು ಅತಿ ಆತಂಕ ಭಯಕ್ಕೆ ತುತ್ತಾಗಿ ಪ್ರಜ್ಞೆ ಕಳೆದುಕೊಳ್ಳುತ್ತಿತ್ತು.

ವೈದ್ಯರು ಪಂಕಜಳಿಗೆ ಹೆಣ್ಣಿನ ದೇಹರಚನೆ, ಋತುಸ್ರಾವ ಹೇಗಾಗುತ್ತೆ, ಅದರ ಮಹತ್ವ, ಆಗ ದೇಹದಲ್ಲಿ ಆಸುವ ಚೋದನಿಕಗಳ ಬದಲಾವಣೆಯಿಂದ ಬರುವ ಕೆಲವು ದೈಹಿಕ ತೊಂದರೆಗಳು ಎಲ್ಲವನ್ನೂ ವಿವರಿಸಿ ಹೇಳಿದರು. ಹೆಣ್ಣಿಗೆ ಪ್ರಕೃತಿದತ್ತವಾದ ಈ ಸ್ಥಿತಿ ಸಹಜವಾದದ್ದು ಎಂದು ಅರಿತ ಅವಳಿಗೆ ಮತ್ತೆ ಪ್ರಜ್ಞೆ ತಪ್ಪಲಿಲ್ಲ. ಅವಳ ತಾಯಿಗೂ ವೈದ್ಯರು ಬುದ್ಧಿ ಹೇಳಿದರು.

ಅಳುವ ಅರುಂಧತಿ

ಕಳೆದ ಒಂದು ವಾರದಿಂದ ಅರುಂಧತಿಗೆ ಅಳುವುದೇ ಕೆಲಸವಾಗಿದೆ. ಶಾಲೆಗೆ ಹೋಗಿಲ್ಲ. ಊಟತಿಂಡಿ ಮಾಡಿಲ್ಲ. ನಿದ್ರೆ ಹೋಗಿಲ್ಲ. ಮಂಕು ಬಡಿದಂತೆ ಕುಳಿತಿರುತ್ತಾಳೆ. ಮಧ್ಯೆ ಮಧ್ಯೆ ಬಿಕ್ಕಳಿಸಿಕೊಂಡು ಅಳುತ್ತಾಳೆ. ಅವಳ ದುಃಖಕ್ಕೆ ಕಾರಣವನ್ನು ಪತ್ತೆಹಚ್ಚಲು ಅವಳ ತಂದೆತಾಯಿ ತಮ್ಮ ಕಲಿತ ಬುದ್ಧಿಯನ್ನೆಲ್ಲ ವ್ಯಯಿಸಿದರು. ಬಲವಂತ ಮಾಡಿದರೆ "ನನಗೆ ಸ್ವಲ್ಪ ವಿಷ ತಂದುಕೊಟ್ಟುಬಿಡಿ. ನಾನು ಸಾಯಬೇಕು" ಎನ್ನುತ್ತಾಳೆ. ಏನು ಮಾಡಿಕೊಂಡು ಬಿಡುತ್ತಾಳೋ ಎಂದು ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಅವಳನ್ನು ಕಾದಿದ್ದಾರೆ. ಪೂಜೆ, ಯಂತ್ರ, ಮಂತ್ರ ಎಲ್ಲ ನಡೆದು ಪ್ರಯೋಜನ ಕಾಣಬರಲು, ಮಾನಸಿಕ ಆಸ್ಪತ್ರೆಗೆ ಕರೆತಂದರು. ನೇರವಾಗಿ ಅವಳಿಂದ ಯಾವ ವಿಚಾರ ಹೊರಬರದಿರಲು ಮತ್ತು ಬರುವ ಔಷಧ ಕೊಟ್ಟು ಅವಳ ಮನಸ್ಸಿನಾಳದಲ್ಲಿರುವ ವಿಷಯಗಳನ್ನು ವೈದ್ಯರು ಅರಿಯಲು ಯತ್ನಿಸಿದರು.

ಇನ್ನೂ ಋತುಮತಿಯಾಗದ ಹದಿನಾಲ್ಕರ ಕಿಶೋರಿ ಅರುಂಧತಿ. ಒಂದು ದಿನ ಶಾಲೆಯ ಆವರಣದಲ್ಲಿ ಮರದ ಕೆಳಗೆ ಕುಳಿತು ಓದುತ್ತಿದ್ದಳು. ಸಹಪಾಠಿ ಶಂಕರ ಹತ್ತಿರ ಬಂದು ಕುಳಿತು ಹರಟೆಗೆ ಸುರು ಹಚ್ಚಿದ. ಚಿಗುರು ಮೀಸೆಯ ಲಕ್ಷಣವಾದ ಹುಡುಗ. ಆಟ ಪಾಠ ಎರಡರಲ್ಲೂ ಜಾಣ. ನಗು ಮುಖಿ. ಅರುಂಧತಿಗೇನು, ಹಲವು ಹುಡುಗಿಯರಿಗೆ ಅವನು 'ಹೀರೋ' ಮಾತನಾಡುತ್ತಿದ್ದವನು, ಅತ್ತ ಇತ್ತ ನೋಡಿ ಬಾಗಿ ಅರುಂಧತಿಯ ತುಟಿಗಳಿಗೆ ಮುತ್ತಿಟ್ಟು 'ನೀನೆಷ್ಟು ಚೆನ್ನಾಗಿ ಕಾಣುತ್ತೀ ಗೊತ್ತೆ' ಎಂದಾಗ ಆಕಾಶ ಅವಳ ತಲೆಯ ಮೇಲೆ ಕಳಚಿ ಬಿದ್ದಿತ್ತು. ದಿಗ್ಭ್ರಮೆಗೊಂಡು ಅಳು

ತೊಡಗಿದಳು. "ನನ್ನದು ತಪ್ಪಾಯಿತೇ. ನಿನ್ನ ಸಮ್ಮತಿಯ್ಯ ಅಕಬೇಡವೇ. ಇನ್ನೊಂದು ಸಾರಿ ಹೀಗೆ ಮಾಡಲ್ಲ. ನನ್ನನ್ನು ಕ್ಷಮಿಸೇ" ಎಂದು ಶಂಕರ ಗೋಗರೆದ. ಅರುಂಧತಿ ಸಾವರಿಸಿಕೊಂಡಳು. ಅಂದು ಸಂಜೆ ಮನೆಯಲ್ಲಿ ಕುಳಿತು ನಡೆದ ಘಟನೆಯನ್ನು ಯೋಚಿಸುತ್ತಿದ್ದಾಗ, ಥಟ್ಟೆಂದು ಜ್ಞಾಪಕಕ್ಕೆ ಬಂದು ತರಗೆಲೆಯಂತೆ ನಡುಗಿದಳು. ಸ್ವಲ್ಪ ದಿವಸಗಳ ಹಿಂದೆ, ಅವಳ ಸ್ನೇಹಿತೆ ಇಂದು, 'ಹುಡುಗ ಹುಡುಗಿಗೆ ಮುತ್ತು ಕೊಟ್ಟರೆ, ಮಗು ಆಗುತ್ತಂತೆ ಕಣೆ' ಎಂದು ಹೇಳಿದ್ದಳು. ಶಂಕರ ತನಗೆ ಮುತ್ತಿಟ್ಟಿದ್ದಾನೆ....ಅಂದರೆ ತನಗೆ ಮಗುವಾಗುತ್ತದೆ. ಮದುವೆಯಾಗದೇ ಮಗು. ಛೀ, ಭಯವಾಯಿತು. ಅಳತೊಡಗಿದಳು. ಯಾರೊಂದಿಗೆ ಹೇಳಲೂ ನಾಚಿಕೆ, ಹೆದರಿಕೆ. ಸಾಯೋಣವೆಂದುಕೊಂಡಳು. ನೇಣುಹಾಕಿಕೊಳ್ಳಲು, ನೀರಿಗೆ ಬೀಳಲು ಭಯ. ವಿಷ ಕುಡಿದರೆ ಪರವಾಗಿಲ್ಲ. ಆದರೆ ವಿಷ ಎಲ್ಲಿ ಸಿಗುತ್ತದೆ ಅವಳಿಗೆ ತಿಳಿಯದು. ತನ್ನ ಅಸಹಾಯಕತೆಯನ್ನು ನೆನೆಸಿಕೊಂಡು ಅಳುತ್ತಲೇ ಇದ್ದಳು.

ವೈದ್ಯರು ಅವಳಿಗೆ ಗರ್ಭಧಾರಣೆ, ಮಗು ಹುಟ್ಟುವುದು ಎಲ್ಲವನ್ನೂ ವಿವರವಾಗಿ ಹೇಳಿ ಅವಳ ಆತಂಕವನ್ನು ನಿವಾರಿಸಿದರು.

*   *   *

ಪ್ರಾಣಿಗಳಲ್ಲಿ ಹುಟ್ಟು ಸಾವು, ಊಟ ಕೂಟ ಎಲ್ಲವೂ ಬಟ್ಟ ಬಯಲೇ ಯಾವ ಮುಚ್ಚು ಮರೆಯೂ ಇರುವುದಿಲ್ಲ. ಮರಿಗಳು ಜೀವನದ ಎಲ್ಲ ಬೇಕು ಬೇಡಗಳನ್ನು ದೊಡ್ಡವರನ್ನು ನೋಡಿಯೇ ಕಲಿಯುತ್ತವೆ. ಆದರೆ ಮನುಷ್ಯ ಪ್ರಾರಂಭದಲ್ಲಿ ಪ್ರಾಣಿಗಳಂತೆ ಇದ್ದರೂ, ನಾಗರೀಕತೆ ಬೆಳೆದಂತೆ, ಮುಖ್ಯವಾಗಿ ಲೈಂಗಿಕ ಚಟುವಟಿಕೆಗಳನ್ನು ಮರೆಯಲ್ಲಿ ನಡೆಸತೊಡಗಿದ. ಯಾವುದನ್ನು ನಾವು ಮುಚ್ಚಿಡುತ್ತೇವೆಯೋ, ಸಹಜವಾಗಿ ಅದರ ಬಗ್ಗೆ ನಮ್ಮ ಕುತೂಹಲ ಜಾಸ್ತಿ. ಹೀಗಿರಬಹುದು, ಹಾಗಿರಬಹುದು ಎಂದು ಕಲ್ಪನೆಯ ಗರಿ ಬಿಚ್ಚುತ್ತೇವೆ. ಏನಾದರೂ ಮಾಡಿ ಮುಚ್ಚಿಟ್ಟದ್ದನ್ನು ಕಾಣುವ ತವಕ ಪಡುತ್ತೇವೆ. ಇದು ಹದಿವಯಸ್ಸಿನವರಲ್ಲಿ ಹೆಣ್ಣು ಗಂಡಿನ ಶರೀರದ ಬಗ್ಗೆ, ಲೈಂಗಿಕ ಚಟುವಟಿಕೆಗಳ ಬಗ್ಗೆ ಅದಮ್ಯ ಆಸಕ್ತಿ ಹುಟ್ಟಲು ಪ್ರಮುಖ ಕಾರಣ. ದುರಾದೃಷ್ಟದಿಂದ, ಯೌವನದಲ್ಲಿ ಕಾಲಿರಿಸುವ ತರುಣ ತರುಣಿಯರಿಗೆ. ಲೈಂಗಿಕ ವಿಷಯಗಳ ಬಗ್ಗೆ ವಾಸ್ತವಿಕವಾದ ಹಾಗೂ ವೈಜ್ಞಾನಿಕ ತಿಳುವಳಿಕೆ ದೊರೆಯುವುದಿಲ್ಲ. ಸಾರ್ವಜನಿಕ ಮೂತ್ರಿಗಳ ಗೋಡೆಗಳ ಮೇಲಿನ ಬರಹವೋ, ಮದನ ಮಿತ್ರ, ಕಾಮ ಬಾಣ ಇತ್ಯಾದಿ ಕೆಳದರ್ಜೆ ಪತ್ರಿಕೆಗಳೋ, ಮನ್ಮಥಲೀಲೆ, ರತಿಶಾಸ್ತ್ರ ಮುಂತಾದ ಪುಸ್ತಕಗಳೋ ಅವರ ದಾಹವನ್ನು ತಣಿಸಲು ಯತ್ನಿಸುತ್ತವೆ. ನಗರಗಳಲ್ಲಿ ದುಡ್ಡಿದ್ದರೆ ಹೆಣ್ಣಿನ ಬೆತ್ತಲೆ ಚಿತ್ರಗಳ ಆಲ್ಬಮ್ ಅಥವಾ ಲೈಂಗಿಕ ಕ್ರೀಡೆಯನ್ನು ಪ್ರಚೋದಕವಾಗಿ ತೋರಿಸುವ ಬ್ಲೂ ಫಿಲ್ಮ್‌ಗಳು ಯುವ ಜನರನ್ನು ಆಕರ್ಷಿಸುತ್ತವೆ. ಇವೆಲ್ಲವೂ ಅಸಹಜವಾದುದಲ್ಲದೆ, ಪ್ರಚೋದಕವಾಗಿರುವುದರಿಂದ, ವ್ಯಕ್ತಿಯ ದೈಹಿಕ ಬಯಕೆಯನ್ನು ಉದ್ರೇಕಿಸುತ್ತವೆ.

ನಿಜಪ್ರವೃತ್ತಿ ಬಲವಾಗುತ್ತದೆ. ಆಗ ವಿವೇಚನೆ, ವಿವೇಕಗಳು ಸೋಲುತ್ತವೆ. ಆಗ ದೇವರಾಜನಂತಾಗುತ್ತಾರೆ. ಅಥವಾ ವಿವಿಧ ತಪ್ಪು ಕಲ್ಪನೆಗಳಿಂದ, ಆತಂಕ ಮೂಡಿದರೆ ಏನಾಗುತ್ತದೆ ಎಂಬುದನ್ನು ವೀರೇಂದ್ರ, ಶ್ರೀನಿವಾಸ, ಪಂಕಜ, ಅರುಂಧತಿ ಪ್ರಕರಣಗಳಲ್ಲಿ ಕಂಡಿದ್ದೇವೆ.

ಆದ್ದರಿಂದ ಲೈಂಗಿಕ ಶಿಕ್ಷಣ ಹದಿವಯಸ್ಸಿನವರಿಗೆ ಅತ್ಯಗತ್ಯ. ತಂದೆತಾಯಿಗಳು ಉಪಾಧ್ಯಾಯರು, ವೈದ್ಯರು ಈ ಕಾರ್ಯವನ್ನು ಶ್ರದ್ಧೆಯಿಂದ ಮಾಡಬೇಕಾಗಿದೆ.

ಮದ್ದು-ಮದ್ಯ ವ್ಯಸನ

ಬದರಿಯ ಭ್ರಮೆ:

ಲೈಬ್ರರಿಯಲ್ಲಿ ಕುಳಿತು ಓದಿ ಬೇಜಾರಾಯಿತು. ಆಸ್ಪತ್ರೆಯತ್ತ ಹೆಜ್ಜೆ ಹಾಕಿದೆ. ಡ್ಯೂಟಿ ಮೇಲಿರುವ ನನ್ನ ಸಹಪಾಠಿ ಬಿಡುವಾಗಿದ್ದರೆ, ಒಂದಷ್ಟು ಹರಟೆ ಕೊಚ್ಚೋಣ ಎಂದುಕೊಂಡೆ. ಡಾ|| ಸರಿತಾ ಹೊಸರೋಗಿಯನ್ನು ಪರೀಕ್ಷಿಸಿ ಕೇಸ್ ಷೀಟ್ ಬರೆಯುತ್ತಿದ್ದಳು. 'ಏನು ಬಹಳ ಬಿಜಿಯಾಗಿರುವ ಹಾಗಿದೆ' ಎಂದು ಹೇಳುತ್ತಾ ಕುರ್ಚಿ ಎಳೆದುಕೊಂಡೆ. 'ಅಂಥಾ ಬಿಜಿ ಇಲ್ಲ. ಹೊಸಕೇಸು. ಪ್ಯಾರಾನಾಯ್ಡ್ ಸ್ಕಿಜೋಫ್ರೇನಿಯಾ ಅಂತ ಕಾಣುತ್ತೆ. ಬಿ. ಕಾಂ ಸ್ಟೂಡೆಂಟ್ ಅಂತೆ. ಹಾಸ್ಟೆಲಲ್ಲಿ ನೋಡಿಕೊಳ್ಳೋದು ಕಷ್ಟವಾಗುತ್ತೆ ಅಂತ ಅಡ್ಮಿಟ್ ಮಾಡ್ತಾ ಇದೀನಿ' ಎಂದಳು. ರೋಗಿಯನ್ನು ನೋಡಿದೆ. ಲಕ್ಷಣವಾದ ಹುಡುಗ. ಅವನ ಹೇರ್‌ಕಟ್, ಹಾಕಿಕೊಂಡಿದ್ದ ಬಟ್ಟೆ ಅವನು ಫ್ಯಾಷನ್‌ಪ್ರಿಯನೆಂದು ಸಾರುತ್ತಿದ್ದುವು. ಆದರೆ ಮುಖ ಗಾಬರಿಗೊಂಡಲ ಭಯಗಳ ಆಗರವಾಗಿತ್ತು. ಕಣ್ಣುಗಳು ಸಂಶಯಪೀಡಿತವಾಗಿದ್ದುವು. 'ಸರಿತಾ, ಹದಿನೇಳು ವರ್ಷ ವಯಸ್ಸು ಮತ್ತು ಪ್ಯಾರಾನಾಯ್ಡ್ ಸ್ಕಿಜೋಫ್ರಿನಿಯಾ (ಭ್ರಮೆಯ ಇಚ್ಛಿತ್ತ) ಎಣ್ಣೆ-ನೀರು ಇದ್ದಂತೆ. ಹೊಂದಿಕೊಳ್ಳುವುದಿಲ್ಲವಲ್ಲ' ಎಂದೆ. 'ಅದು ನನಗೂ ಗೊತ್ತು. ಪ್ಯಾರಾನಾಯ್ಡ್ ಸ್ಕಿಜೋ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿ ಮೂವತ್ತು ವರ್ಷ ವಯಸ್ಸಿನ ನಂತರ. ಆದರೆ ಇವನಿಗೆ ಪಠ್ಯಪುಸ್ತಕದಲ್ಲಿ ವಿವರಿಸಿರುವಂತೆ ಡೆಲ್ಯೂಷನ್ (ಭ್ರಮೆ), ಹೆಲೂಸಿನೇಷನ್ (ಶೂನ್ಯದಲ್ಲಿ ಧ್ವನಿ ಕೇಳಿಸುವುದು) ಎಲ್ಲಾ ಇದೆ. ಕೇಳಿದ್ರೆ ಹೇಳ್ತಾನೆ. ಅವನ ಕಾಲೇಜಿನ ಎಲ್ಲಾ ಹುಡುಗರು ಅವನ ವಿರುದ್ಧವಾಗಿದ್ದಾರಂತೆ. ಎಲ್ಹೋದರೆ ಅಲ್ಲಿಗೆ ಹಿಂಬಾಲಿಸುತ್ತಾರಂತೆ. ನಿನ್ನ ಹಾಗೆ ಮಾಡ್ತೀವಿ ಹೀಗೆ ಮಾಡ್ತೀವಿ ಕೊಂದು ಬಿಡ್ತೀವಿ ಅಂತ ಹೇಳೋದು ಸ್ಪಷ್ಟವಾಗಿ ಕೇಳಿಸ್ತದಂತೆ. ಎಲೆಕ್ಟ್ರಾನಿಕ್ ಮೆಷಿನ್ ಸಹಾಯದಿಂದ ಅವನ

ಆಲೋಚನೆಗಳನ್ನೆಲ್ಲಾ ತಿಳಿದುಕೊಂಡು ಅವನನ್ನು ಹತೋಟಿಯಲ್ಲಿಟ್ಟು ಕೊಂಡಿದ್ದಾರಂತೆ. ಪಾಪ ಜೆವರಿದ ಹುಲ್ಲಿಯಾಗಿದ್ದಾನೆ.' ಎಂದಳು. ಲೈಬ್ರರೀಲಿ ಕುಳಿತು ನಾನು ಓದ್ತಾ ಇದ್ದದ್ದು 'ಕೆನಾಬಿಸ್ ಸೈಕೋಸಿಸ್' ಭಂಗಿ, ಗಾಂಜಾ, ಚರಸ್, ಹಶೀಷ್ ಸೇವನೆಯಿಂದ ಬರತಕ್ಕಂತ ವಿಕಲತೆಯ ಬಗ್ಗೆ. 'ಅದುಸರಿ ನನಗೇನೋ ಇದು 'ಕೆನಾಬಿಸ್ ಸೈಕೊಸಿಸ್'' ಇರಬಹುದು ಅನಿಸುತ್ತೆ. ಪೇಶಂಟ್ ಸ್ನೇಹಿತನನ್ನು ಕರೆದು ಕೇಳಬಹುದಲ್ಲ' ಎಂದೆ. ಅಂತೆಯೇ ಅವನನ್ನು ವಿಚಾರಿಸಿದಾಗ ನನ್ನ ಊಹೆ ನಿಜವಾಗಿತ್ತು. ಬದರಿ ನಾಥ್‌ಗೆ (ರೋಗಿ) ಕಳೆದ ಮೂರು ವರ್ಷದಿಂದ (ಸ್ನೇಹಿತನ ತಿಳುವಳಿಕೆಯಂತೆ ದಿನಾ ಗಾಂಜಾ ಸೇದುವ ಚಟವಿತ್ತು. ಆಗಾಗ ಹೆಚ್ಚು ದುಡ್ಡು ಸಿಕ್ಕರೆ ಎಲ್.ಎಸ್.ಡಿ. ಯನ್ನೂ ಉಪಯೋಗಿಸುತ್ತಿದ್ದ. 'ಏಯ್, ಇದು ನನಗೆ ಹೊಳೀಲೇ ಇಲ್ಲನಲ್ಲ ಏನು ! ಈ ಸಾರಿ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ನಿನಗೆ' ಎಂದಳು. 'ಹೌದು ಮತ್ತೆ' ಎಂದು ಕಾಲರನ್ನು ಸರಿಪಾಡಿಕೊಂಡು ಅವಳ ಹೊಟ್ಟೆಯ ಕಿಚ್ಚಿಗೆ ತುಪ್ಪ ಹುಯ್ದೆ. ನಾನು ಆಗ ತಾನೇ ಈ ಅಧ್ಯಾಯವನ್ನು ಓದಿದ್ದು ಅವಳಿಗೆ ಗೊತ್ತಿರಲಿಲ್ಲ ಪಾಪ.

ಭಂಗಿ, ಗಾಂಜಾ ಸೇವನೆ ಪುರಾತನ ಕಾಲದಿಂದಲೂ ನಮ್ಮ ದೇಶವಲ್ಲಿ ಉಪಯೋಗವಲ್ಲಿದೆ. ಅತೀಂದ್ರಿಯ ಅನುಭವ ಪಡೆಯಲು, ಕಷ್ಟ ಮರೆಯಲು ಇದು ಸಹಕಾರಿ ಎಂದು ಅಂದೂ, ಇಂದೂ ಕೆಲವು ಜನ ಹೇಳುತ್ತಾರೆ. ಸಾಧು ಸನ್ಯಾಸಿಗಳು, ಫಕೀರರು ಭಂಗಿ ಅಥವಾ ಗಾಂಜಾ ದಮ್ ಎಳೆಯುತ್ತಾ, ಅರೆಪ್ರಜ್ಞರಾಗಿ, ತಮ್ಮ ಇಷ್ಟದೇವತೆಯನ್ನು ಕಂಡೆವೆಂತಲೋ ಕೇಳಿದೆವೆಂತಲೋ ಭ್ರಮಿಸುವುದು ಸರ್ವೇ ಸಾಮಾನ್ಯ. ಇವರಿಂದ ಊರಿನ ಪಡ್ಡೆ ಹುಡುಗರು, ಸೋಮಾರಿ ಮಜಾನ್ವೇಶಿ ಯುವಕರು ದಮ್ ಎಳೆಯುವುದನ್ನು ಕಲಿತು ಕೆಡುವುದೂ ಅಷ್ಟೇ ಸಾಮಾನ್ಯ. ನಗರಗಳಲ್ಲಿ ವಿದ್ಯಾರ್ಥಿಗಳು, ನಿರುದ್ಯೋಗಿ ಯುವಕರು ಈ ಚಟಕ್ಕೆ ಬೀಳುತ್ತಾರೆ. ಉತ್ತರ ಭಾರತದಲ್ಲಿ ಇದರ ಸೇವನೆ ವ್ಯಾಪಕವಾಗಿದ್ದು ಹಬ್ಬ ಹರಿದಿನಗಳಲ್ಲಿ ಸಿಹಿತಿಂಡಿಗೆ ಅಥವಾ ಪಾನೀಯಕ್ಕೆ ಅಥವಾ ಎಲೆ ಅಡಿಕೆಗೆ ಗಾಂಜಾ ಬೆರೆಸಿ ಸೇವಿಸಿ ಎಲ್ಲರೂ 'ಸ್ವರ್ಗ ಸುಖ' ಕಾಣುತ್ತಾರೆ.

ಕೆನಾಬಿಸ್ ಸಟೈವ ಎಂದು ಕರೆಸಿಕೊಳ್ಳುವ ಗಾಂಜಾ ಗಿಡ ಬೆಳೆದಾಗ, ಅದರ ಹೂ ಎಲೆಗಳ ಮೇಲೆ, ಹೊಂಬಣ್ಣದ ಅಂಟು ಅಂಟಾದ ಸುವಾಸನಾಯುಕ್ತ ವಸ್ತು ಶೇಖರಗೊಳ್ಳುತ್ತದೆ. ಈ ಅಂಟೇ ಮಾದಕ ವಸ್ತು. ಭಂಗಿಗೆ ದುಡ್ಡು ಕಡಿಮೆ ಅಂತೆಯೇ ಸ್ಟ್ರಾಂಗ್ ಅಲ್ಲ. ಗಾಗಿಜವನ್ನು ಆರಿಸಿದ ಎಲೆ ಹೂ ಗಳಿಂದ ತಯಾರಿಸುತ್ತಾರೆ. ಇದು ಭಂಗಿಗಿಂತ ಹೆಚ್ಚು ಮಾದಕ. ಅಂಟು ವಸ್ತುವಿನಿಂದಲೇ ತಯಾರಿಸುವ ಚರಸ್, ಹಶೀಷ್ ಅತಿ ಮಾದಕ.

ಈ ವಸ್ತುಗಳನ್ನು ಸೇದುವುದರಿಂದ, ಮನಸ್ಸಿನ ಮೇಲೆ ಪರಿಣಾಮ ಎರಡರಿಂದ ನಾಲ್ಕು ಘಂಟೆಗಳಿದ್ದರೆ, ಹೊಟ್ಟೆಗೆ ಸೇವಿಸುವುದರಿಂದ ಅದು ಐದರಿಂದ ಹನ್ನೆರಡು ಘಂಟೆ

ಇರುತ್ತದೆ. ಕೆನಾಬಿಸ್ ಸೇವನೆಯಿಂದ ವ್ಯಕ್ತಿಗೆ ಇಡೀ ಪರಿಸರ ರಂಗು ರಂಗಾಗುತ್ತದೆ. ಕಾಲದ ಪರಿವೆ ಇಲ್ಲ. ತನ್ನ ದೇಹದಲ್ಲಿ, ಪರಿಸರದಲ್ಲಿ ಬದಲಾವಣೆ ಹೊಸತನದ ಭ್ರಮೆ. ಸಿನಿಮಾದಲ್ಲಿ ಡಬಲ್ ಆಕ್ಟಿಂಗ್ ಮಾಡಿದಂತೆ, ತನ್ನ ಪ್ರತಿಬಿಂಬವನ್ನು ವಿವಿಧ ಭಂಗಿ, ಚಟುವಟಿಕೆಗಳಲ್ಲಿ ಕಾಣುವುದು, ಅಥವಾ ಅತಿ ಆತಂಕ, ಭಯದಂತಹ ವಿಚಿತ್ರ ಅನುಭವಗಳು ಆಗುತ್ತವಂತೆ. ಕೆನಾಬಿಸ್‌ಗೆ ವ್ಯಕ್ತಿ ಮಾನಸಿಕವಾಗಿ ದಾಸನಾಗುತ್ತಾನೆಯೇ ಹೊರತು ದೈಹಿಕವಾಗಿ ಆಗುವುದಿಲ್ಲ. ಅಂದರೆ ಅದನ್ನು ಸೇವಿಸದಿದ್ದರೆ 'ಹಿಂತೆಗೆತದ ಚಿಹ್ನೆಗಳು' ಕಾಣಿಸಿಕೊಳ್ಳುವುದಿಲ್ಲ.

ಅತಿ ಸೇವನೆಯಿಂದ ಸಂಜುವಿಕಲತೆ (Toxic Psychosis) ಉಂಟಾಗುತ್ತದೆ. ಆಗ ಅರಿಪ್ರಜ್ಞೆ, ತೀವ್ರ ಚಡಪಡಿಕೆ, ಕಾಲ, ಸ್ಥಳ, ವ್ಯಕ್ತಿಗಳನ್ನು ಗುರುತಿಸಲಾಗದ ಗೊಂದಲ, ಭಯ, ಭ್ರಮೆ, ಶೂನ್ಯದಲ್ಲಿ ಧ್ವನಿಕೇಳುವುದು ಅಥವಾ ಆಕಾರ ಕಾಣುವುದೂ ಆಗುತ್ತದೆ.

ದೀರ್ಘಕಾಲದ ಕೆನಾಬಿಸ್ ಸೇವನೆ, ಕೆನಾಬಿಸ್ ಚಿತ್ತವಿಕಲತೆ (ಬದಲಿಸಾಧನಿಗಾದಂತೆ) ಯನ್ನು ತರಬಲ್ಲುದು. ಅಥವಾ ಇಚ್ಛಿತ್ತ ವಿಕಲತೆ ಬರುವ ಸಾಧ್ಯತೆ ಇರುವ ವ್ಯಕ್ತಿಯಲ್ಲಿ ಇಚ್ಛಿತ್ತ ವಿಕಲತೆಯನ್ನು ಉಂಟುಮಾಡಬಲ್ಲುದು.

ಹರೀಶನ ಹುಚ್ಚು

ಅಂದು ಹಾಸ್ಟೆಲ್‌ನಲ್ಲಿ ಗುಲ್ಲೋಗುಲ್ಲು. ಹರೀಶನಿಗೆ ಹುಚ್ಚು ಹಿಡಿದಿದೆ ಎಂದು. ನಾನು ಎಂ.ಬಿ.ಬಿ.ಎಸ್ ಎರಡನೇ ವರ್ಷದಲ್ಲಿದ್ದೆ. ಹುಚ್ಚರನ್ನು ಹತ್ತಿರದಿಂದ ಯಾವೊತ್ತೂ ನೋಡಿರಲಿಲ್ಲ. ನನಗೋ ಒಂದೆಡೆ ಕುತೂಹಲ, ಇನ್ನೊಂದೆಡೆ ಭಯ. ಹರೀಶನ ರೂಮಿನ ಹತ್ತಿರ ಹೋದೆ. ಹುಡುಗರು ಗಿಜಿಗಿಜಿ ಎಂದು ಸೇರಿರುತ್ತಿದ್ದರು. ಹರೀಶ ಎರಡನೇ ಬಾರಿಗೆ ಅನಾಟಮಿ ಪರೀಕ್ಷೆಗೆ ಕೂತಿದ್ದ. ಒಳ್ಳೇ ಆಟಗಾರ. ಆ ಟೂರ್ನಮೆಂಟ್ ಈ ಟೂರ್ನಮೆಂಟ್ ಅಂತ ಕಾಲೇಜಿಗೆ ಕೂಡ ಸರಿಯಾಗಿ ಬರುತ್ತಿರಲಿಲ್ಲ. ಹಾಗಾಗಿ ಮೊದಲ ಸಾರಿ ಫೇಲಾದ. ಈ ಸಾರಿ ಪಾಸ್‌ಮಾಡಿ ಬಿಡಬೇಕು ಎಂದು ಎರಡು ವಾರದಿಂದ ಪಟ್ಟಾಗಿ ಕುಳಿತು ಓದುತ್ತಿದ್ದ. ಈಗ ತಲೆ ಕೆಟ್ಟೋಗಿದೆ. ಪಾಪ ಈ ಬಾರಿಯೂ ಹೋಯಿತು ಎಂದುಕೊಂಡೆ ನಾಲ್ಕು ಜನ ಸೀನಿಯರ್ ಹುಡುಗರು ಹರೀಶನನ್ನು ಹಿಡಿದು ಕೂರಿಸಲು ವಿಫಲ ಪ್ರಯತ್ನ ನಡೆಸಿದ್ದರು. ಹರೀಶ ಅವರನ್ನು ಬಾಯಿಗೆ ಬಂದಂತೆ ಬಯ್ಯುತ್ತಿದ್ದ. ಅವರನ್ನು ಒದೆಯಲು ಕಚ್ಚಲು ಪ್ರಯತ್ನಿಸುತ್ತಿದ್ದ. 'ನನ್ನ ಮಾತೊ ಕೇಳಿ, ಆ ಬೀರೂನಲ್ಲಿ ರಾಕ್ಷಸ ಸೇರಿಕೊಂಡಿದ್ದಾನೆ, ಅವನನ್ನು ಹಿಡೀರೀ' ಎಂದು ಚೀರ್ಟಿ ಹಾಕುತ್ತಿದ್ದ, ಕಡೆಗೆ ಅವನನ್ನು ಹಿಡಿದು ಕೈಕಾಲು ಕಟ್ಟಿ, ಮೆಂಟಲ್ ಆಸ್ಪತ್ರೆಗೆ ಸಾಗಿಸಿದರು. ಅವನ ರೂಮಿನೊಳಕ್ಕೆ ಹೋಗಿ ನೋಡಿದೆ. ಗೂಳಿ ನುಗ್ಗಿದ ಗಾಜಿನ ಅಂಗಡಿಯಂತಿತ್ತು. ಆಮೇಲೆ ತಿಳಿಯಿತು ಹರೀಶನ ಈ ಹುಚ್ಚಿಗೆ ಕಾರಣ. ರಾತ್ರಿಯೆಲ್ಲಾ ಓದಬೇಕು ಅಂತ, ಎರಡು ವಾರದಿಂದಲೂ ಪ್ರತಿ ರಾತ್ರಿಯೂ

ಐದು ಆರು ಡೆಕ್ಸಿಡಿನ್ ಮಾತ್ರೆ ನುಂಗುತ್ತಿದ್ದನಂತೆ. ಆಸ್ಪತ್ರೆಯಲ್ಲಿ ಒಂದು ತಿಂಗಳ ಚಿಕಿತ್ಸೆಯ ನಂತರ ಹುಶಾರಾಗಿ ಬಂದ. ಆಮೇಲೆ ಸ್ವಲ್ಪ ದಿವಸ ಅವನು ನನ್ನ ಮಾತಾಡಿಸಿದರೆ, ಮಾತಾಡೋಕೆ ನನಗೆ ಹೆದರಿಕೆ ಆಗೋದು.

ಪರೀಕ್ಷೆಗಳು ಸಮೀಪಿಸುತ್ತಿದ್ದಂತೆ, ಡ್ರಗ್ ಸ್ಟೋರ್‌ಗಳಲ್ಲಿ ಡೆಕ್ಸಿಡಿನ್ ಮಾತ್ರೆಗಳು 'ಬಿಸಿ ವಡೆ' ಯಂತೆ ಖರ್ಚಾಗುತ್ತವೆ. ವರ್ಷವೆಲ್ಲಾ ಓದದೆ ಅಲ್ಲಿ ಇಲ್ಲಿ ಅಡ್ಡಾಡಿಕೊಂಡು ಕಾಲ ಕಳೆದ ವಿದ್ಯಾರ್ಥಿಗಳು, ಪರೀಕ್ಷೆಗೆ ಹಗಲು ರಾತ್ರಿ ಓದಲು ನಿದ್ರೆ ದೂರಾಗಿಸುವ ಈ ಮಾತ್ರೆಗಳಿಗೆ ಶರಣಾಗುತ್ತಾರೆ. ಈ ಮಾತ್ರೆಯಿಂದ ನಿದ್ರೆ ಬರುವುದಿಲ್ಲ ನಿಜ. ಆದರೆ ದಣಿದ ಮಿದುಳು ಓದಿದ್ದನ್ನೆಲ್ಲಾ ಗ್ರಹಿಸಲು ವಿಫಲವಾಗಿ, ಪರೀಕ್ಷಾ ಕೊಠಡಿಯಲ್ಲಿ ಓದಿದ್ದು ಜ್ಞಾಪಕಕ್ಕೆ ಬರದೆ ಕಣ್ಣು ಬಾಯಿ ಬಿಡುವಂತಾಗುತ್ತದೆ. ಅಲ್ಲದೆ ಕೆಲವರು ಪರೀಕ್ಷೆಯ ನಂತರವೂ ಈ ಮಾತ್ರೆ ಸೇವಿಸುವ ಚಟಕ್ಕೆ ಬಲಿಯಾಗುತ್ತಾರೆ. ಒಂದು ಸಾರಿ ಚಟ ಶುರುವಾದ ಮೇಲೆ ಒಂದು ದಿನ ತೆಗೆದುಕೊಳ್ಳದಿದ್ದರೆ, ವ್ಯಕ್ತಿಗೆ ಹಿಂದೆಗೆತದ ಚಿನ್ಹೆಗಳು, ಅತಿಯಾದ ಜಡ, ಸುಸ್ತು, ಆತಂಕ, ಭಯಂಕರ ಕನಸುಗಳು, ತೀವ್ರ ಖಿನ್ನತೆ ಮತ್ತು ಆತ್ಮಹತ್ಯೆಯ ಯೋಚನೆಗಳು ಬರುತ್ತವೆ. ಇಂತಹ ವ್ಯಕ್ತಿ ಅಲ್ಪ ಕಾರಣಕ್ಕೆ ರೇಗುವುದು, ಹಠ ಮಾಡುವುದು, ಕೆಲವು ಸಾರಿ ಹಿಂಸಾಚಾರಕ್ಕೂ ಇಳಿಯಬಹುದು. ತಲೆನೋವು, ಧಾರಾಕಾರ ಬೆವರು, ಮಾಂಸಖಂಡಗಳ ಸೆಳೆತ, ತೀವ್ರ ಹೊಟ್ಟೆಕಚ್ಚು, ಕಾಣಿಸಿಕೊಳ್ಳುತ್ತವೆ. ಅತಿಯಾದ ಸೇವನೆಯಿಂದ ಜ್ವರ, ಹೃದಯ ಬೇನೆ, ಅಧಿಕ ರಕ್ತಒತ್ತಡ, ರಕ್ತಸ್ರಾವ, ಫಿಟ್ಸ್, ಅರೆಪ್ರಜ್ಞೆ ಅಥವಾ ಪ್ರಜ್ಞಾಹೀನತೆ ಕೊನೆಗೆ ಸಾವು ಸಂಭವಿಸಬಹುದು. ದೀರ್ಘಕಾಲದ ಸೇವನೆಯಿಂದ ಇಚ್ಛಿತ್ತ ವಿಕಲತೆಯನ್ನು ಹೋಲುವ ಮನೋರೋಗವು ಬರುತ್ತದೆ. ಇದನ್ನು ಆಂಫಿಟಮಿನ್ ವಿಕಲತೆ ಎನ್ನುತ್ತಾರೆ.

ಆದ್ದರಿಂದ ಎಲ್ಲಾ ರೀತಿಯಿಂದಲೂ ಅಪಾಯಕಾರಿಯಾದ ಇಂತಹ ಔಷಧಗಳಿಂದ ಹರೆಯದವರು ದೂರವಿದ್ದಷ್ಟು ಕ್ಷೇಮ.

ಸನ್ನಿ ಹಿಡಿದ ಫಿಲಿಪ್

ಅಪಘಾತ ತುರ್ತುಚಿಕಿತ್ಸೆ ವಿಭಾಗದಲ್ಲಿ ಆ ದಿನ ಕೆಲಸಮಾಡುತ್ತಿದ್ದೆ. ಕೈಕಾಲುಗಳನ್ನು ಕಟ್ಟಿದ್ದರೂ, ಸಾಕಷ್ಟು ಬೊಬ್ಬೆ ಹೊಡೆಯುತ್ತಿದ್ದ ಯುವಕನನ್ನು ಅಂಬ್ಯುಲೆನ್ಸ್ ವ್ಯಾನ್‌ನಿಂದ ಪರೀಕ್ಷಾ ಕೊಠಡಿಗೆ ಸಾಗಿಸುವ ಹೊತ್ತಿಗೆ ಎಲ್ಲರಿಗೂ ಸುಸ್ತಾಗಿಬಿಟ್ಟಿತ್ತು. "ಅಯ್ಯೋ ನನ್ನನ್ನು ಬಿಡಿ, ಬಿಟ್ಟು ಬಿಡ್ರೋ, ಅಯ್ಯಯ್ಯೋ ಅವರು ಬಂದೇ ಬಿಟ್ಟರು. ನನ್ನ ಕತ್ತು ಕುಯ್ದು ಹಾಕಿಬಿಡ್ತಾರೆ. ಅವರನ್ನು ಕಟ್ಟಿಹಾಕಿ. ಕರೀ ಮೀಸೆ, ಹೊಳೆಯೋ ಕತ್ತಿ ಅಯ್ಯಯ್ಯೋ" ಎಂದು ಕೂಗಾಡುತ್ತಿದ್ದ ಅವನ ದೃಷ್ಟಿ ಎಲ್ಲೋ ಇತ್ತು. ಸುತ್ತಲಿನ ಪರಿವೆ ಇಲ್ಲ. ನಾಲಿಗೆ ತುಟಿಗಳು ಒಣಗಿ ವಾಟೆಯಾಗಿವೆ. ಮೈ ಸುಡುತ್ತಾ ಜ್ವರ ಬಂದಂತೆ ಇದೆ. ತನ್ನದೇ ಆದ ಭಯ ಗಾಬರಿ ತುಂಬಿದ

ಪ್ರಪಂಚದಲ್ಲಿದ್ದ ಅವನು ಮಾತಾಡುವುದಿರಲಿ "ನಾಲಿಗೆ ತೋರಿಸು, ಇಲ್ಲಿ ನನ್ನ ಕಡೆ
ನೋಡು" ಎಂಬ ನನ್ನ ಆಜ್ಞೆಗೆ ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ. ಯಾರಾ
ದರೂ ಹತ್ತಿರ ಹೋದರೆ ಮತ್ತಷ್ಟು ಗಾಬರಿಯಿಂದ ಕಿರಿಚುತ್ತಿದ್ದ. ತತ್‌ಕ್ಷಣ
ಉದ್ವೇಗ ನಿವಾರಕ ಔಷಧವನ್ನು ರಕ್ತನಾಳದೊಳಕ್ಕೇ ಕೊಡಲಾಯಿತು. ಕೆಲವು
ನಿಮಿಷಗಳ ನಂತರ ಅವನ ಒದ್ದಾಟ ಕಡಿಮೆಯಾಗಿ ಮಂಪರು ಅವನನ್ನು ಆವರಿಸಿತು.

ಫಿಲಿಪ್ ಜಾನ್ ಸಿರಿವಂತ ತಂದೆತಾಯಿಗಳ ಕೊನೇ ಮಗ. ಮುದ್ದಾಗಿದ್ದ
ಅವನನ್ನು ಅತಿಮುದ್ದು ಮಾಡಿಯೇ ಬೆಳೆಸಿದರು. ಅವನು ಹೇಳಿದ್ದೇ ವೇದವಾಕ್ಯ
ವಾಯಿತು. ಒಡಹುಟ್ಟಿದವರನ್ನು ನೆರೆಹೊರೆಯವರನ್ನು ಜೊತೆಗಾರರನ್ನು ಗೋಳು
ಹೊಯ್ದುಕೊಳ್ಳುತ್ತಲೇ ಬೆಳೆದ. ತಾನು ಸಂತೋಷವಾಗಿದ್ದರೆ ಸಾಕು. ಬೇರೆಯ
ವರು ಹೇಗಿದ್ದರೆ ತನಗೇನು ಎಂಬಂತೆ ನಡೆದುಕೊಳ್ಳುತ್ತಿದ್ದ. ಜೊತೆಗೆ ದೇವರು
ಸಾಕಷ್ಟು ಬುದ್ಧಿಯನ್ನು ಕೊಟ್ಟಿದ್ದರಿಂದ, ಶಾಲೆಯಲ್ಲಿ ಜಾಣನೆನಿಸಿಕೊಂಡ. ಬುದ್ಧಿ,
ಹಣ, ಮೋಜುಮಾಡುವ ಮನಸ್ಸು ಇದ್ದಾಗ ಸ್ನೇಹಿತರಿಗೆ ಕೊರತೆಯೇ. ಅವನ
ಗುಂಪಿನವರ ಪಾಲಿಗೆ ಅವನು ದಿಲ್‌ದಾರ ಹೀರೋ. ಹೈಸ್ಕೂಲಿನಲ್ಲಿದ್ದಂತೆಯೇ
ಆಲ್ಕೋಹಾಲಿನ ಪರಿಚಯವಾಯಿತು. ತಂದೆ ತಾಯಿ ಇದನ್ನು ವಿರೋಧಿಸುತ್ತಾರೆ
ಎಂದು ಗೊತ್ತಿದ್ದ 'ನೋಡಿ ಡ್ಯಾಡಿ, ನಿಮಗೇನೋ ಆದರ್ಶ. ಕಂಪನಿಯಲ್ಲಿ ತೆಗೆದು
ಕೊಳ್ಳದಿದ್ದರೆ ಗೂಷ್ಲ ಅಂತಾರೆ. ಅಕೇಷನಲ್ ಆಗಿ ತೆಗೆದುಕೊಳ್ಳೋದಿಕ್ಕೆ ನೀವು
ಪರ್ಮಿಷನ್ ಕೊಡಲೇಬೇಕು' ಎಂದಾಗ ಅವನ ತಂದೆ ಹೂಂ ಎನ್ನಲೇಬೇಕಾಯಿತು.
ಆದರೆ ಕ್ರಮೇಣ ಈ ಅಕೇಶನಲ್‌ಗಳು ದಿನವೂ ಬರತೊಡಗಿದಾಗ ತಂದೆತಾಯಿಗೆ ಚಿಂತೆ
ಯಾಯಿತು. 'ಈ ಹೊತ್ತು ಪಾರ್ಟಿಯಿತ್ತು ಮಮ್ಮಿ, ಫ್ರೆಂಡ್ಸ್ ಬಲವಂತ ಮಾಡಿ
ಕುಡಿಸಿಬಿಟ್ಟರು.ನಾನೇನ್ಮಾಡಲಿ ನೀನೇ ಹೇಳು' ಎಂದು ರಾತ್ರಿ ಹೊತ್ತಾಗಿ ಬಂದಾಗ
ಬಾಗಿಲು ತೆಗೆಯಲು ಬಂದ ತಾಯಿಯ ಬಾಯಿಕಟ್ಟಿಸುತ್ತಿದ್ದ. ಒಮ್ಮೆ ಯಾವುದೋ
ಪುಸ್ತಕವನ್ನು ಹುಡುಕಲು ಹೋದ ಅವನ ತಂದೆ ಅವನ ಕಪಾಟಿನಲ್ಲಿ ಅಡಗಿಸಿಟ್ಟಿದ್ದ
ವಿಸ್ಕಿ ಬಾಟಲುಗಳನ್ನು ಕಂಡಾಗ ಹೌಹಾರಿದರು. ಕೋಪದಿಂದ ರೂಲರ್ ತೆಗೆದು
ಕೊಂಡು ಜಾನ್‌ನಿಗೆ ಬಾರಿಸಿದರು. ತಾಯಿ ಅಡ್ಡಬರದಿದ್ದರೆ ಅವನ ಮೂಳೆ ಮುರಿ
ಯುತ್ತಿದ್ದರು. 'ನಾನು ಅವನಿಗೆ ಬುದ್ಧಿ ಹೇಳ್ತೀನಿ ಅಂದ್ರೆ. ನಿಮ್ಮ ದಮ್ಮಯ್ಯ. ಅವ
ನನ್ನು ಸಾಯಿಸಿಬಿಡಬೇಡಿ' ಎಂದು ಆಕೆ ಗೋಗರೆದಾಗ; 'ಆಯಿತು. ಅವನು ಇನ್ನೊಂದು
ಸಾರಿ ಡ್ರಿಂಕ್ ಮಾಡಿದ್ದನ್ನ ನಾನು ನೋಡಿದರೆ ಅಲ್ಲಿಗೆ ಮುಗೀತು ನನ್ನ ಅವನ ಸಂಬಂಧ'
ಎಂದು ಗುಡುಗಿದರು. ತಂದೆಯ ನರಸಿಂಹಾವತಾರವನ್ನು ಮೊದಲಬಾರಿಗೆ ಕಂಡ ಫಿಲಿಪ್
ಥರಗುಟ್ಟಿದ. ಇನ್ನು ಡ್ರಿಂಕ್ಸ್ ಮುಟ್ಟುವುದಿಲ್ಲ ಮಮ್ಮಿ ಎಂದು ಪ್ರಮಾಣ ಮಾಡಿದ.
ಆದರೆ ಮಾರನೆ ದಿನ ಕುಡಿಯದೇ ಮನೆಯಲ್ಲಿದ್ದಾಗ ಅವನ ಸ್ಥಿತಿ ನಾಯಿಪಾಡಾಯಿತು.
ತಲೆ ಸಿಡಿತ, ಕೈಕಾಲು ಅದುರುವುದು, ಚಡಪಡಿಕೆ, ನಿಂತಲ್ಲಿ ನಿಲ್ಲಲಾರ, ಕುಳಿತುಕೊಳ್ಳ

ಲಾರ. ಮಲಗಿ ನಿದ್ರೆ ಮಾಡೋಣವೆಂದರೆ ನಿದ್ದೆ ಬಾರದು. ಫಿಲಿಪ್ ಆಲ್ಕೋಹಾಲ್ ಹಿಂದೆಗೆತದ ಚಿನ್ಹೆಗಳಿಂದ ಬಳಲುತ್ತಿದ್ದ. "ಮಮ್ಮಿ, ನಾನಿದನ್ನು ತಡೆಯಲಾರೆ ಮಮ್ಮಿ. ಒಂದು ಗ್ಲಾಸ್ ಬ್ರಾಂದಿ ತರಿಸ್ಕೊಡು. ನಿನ್ನ ಕಾಲಿಗೆ ಬೀಳ್ತೀನಿ" ಎಂದು ಗೋಗರೆದ. ಅವನ ಸ್ಥಿತಿಯನ್ನು ನೋಡಲಾರದೆ ತಾಯಿ ಗಂಡನಿಗೆ ತಿಳಿಯದಂತೆ ಹಾಗೇ ಮಾಡಿದಳು. ಈ ಕಣ್ಣು ಮುಚ್ಚಾಲೆಯಾಟ ಸ್ವಲ್ಪ ದಿನ ನಡೆಯಿತು. ಒಂದು ದಿನ ಅಳುತ್ತಾ ಗಂಡನಿಗೆ ಹೇಳಿದಳು ಮನೋವೈದ್ಯರ ಹತ್ತಿರ ಚಿಕಿತ್ಸೆ ಮಾಡಿಸಲು ಫಿಲಿಪ್ ತಂದೆ ಸೂಚಿಸಿದಾಗ ತಾಯಿ ಪ್ರತಿಭಟಿಸಿದಳು. 'ನನ್ನ ಮಗ ಹುಚ್ಚ ಅಲ್ಲ ಅವನನ್ನು ಏಕೆ ಮೆಂಟಲ್ ಆಸ್ಪತ್ರೆಗೆ ಕರ್ಕೊಂಡು ಹೋಗ್ಬೇಕು. ನಮ್ಮ ಮನೆತನದ ಮರ್ಯಾದೆ ಏನಾಗುತ್ತೆ' ಎಂದಳು. ಕಡೆಗೆ ಖಾಸಗಿ ಮನೋವೈದ್ಯರಿಂದ ಚಿಕಿತ್ಸೆ ನಡೆಸಿದರು. ಸ್ವಲ್ಪ ದಿವಸ ಚೆನ್ನಾಗಿದ್ದ ನಂತರ ಕುಡಿತ ಮತ್ತೆ ಶುರುವಾಯಿತು. ತಂದೆ ತಾಯಿ ಅವನ ಆಸೆ ಬಿಟ್ಟರು. ರೂಮಿನಲ್ಲಿ ಕುಳಿತು ಬೆಳಿಗ್ಗೆಯಿಂದ ಸಂಜೆಯವರೆಗೆ ಕುಡಿಯುವುದೇ ಕೆಲಸವಾಯಿತು. ಕುಡಿಯಲು ಕೊಡದಿದ್ದರೆ ಮತಿಭ್ರಮೆಗೊಳಗಾಗಿ ಹುಚ್ಚಾಪಟ್ಟೆ ಆಡುತ್ತಾನೆ. ಹೊತ್ತು ಹೊತ್ತಿಗೆ ಆಹಾರವಿಲ್ಲದೆ ದೇಹ ಸೊರಗಿ ಕೊನೆಗೆ ಫಿಲಿಪ್ 'ನಡುಕ-ಸನ್ನಿ' (Delirium Tremens) ಗೊಳಗಾದಾಗ ಮಾನಸಿಕ ಆಸ್ಪತ್ರೆಗೆ ಕರೆತಂದರು.

'ನಡುಕಸನ್ನಿ' ವೈದ್ಯಕೀಯದ 'ತುರ್ತು ಪರಿಸ್ಥಿತಿ'. ತತ್‌ಕ್ಷಣದ ಸೂಕ್ತ ಚಿಕಿತ್ಸೆ ದೊರೆಯದಿದ್ದಲ್ಲಿ ಅಪಾಯಕಾರಿ. ಮುಖ್ಯವಾಗಿ ವಿಟಮಿನ್ ಬಿ 1ರ ಕೊರತೆಯಿಂದ ಮಿದುಳಿಗೆ ತೀವ್ರ ಘಾಸಿಯಾಗುವುದಲ್ಲದೆ, ವ್ಯಕ್ತಿ ಮತಿಗೆಟ್ಟು ಹಿಂಸಾಚಾರದಿಂದ ತನಗೂ, ಸುತ್ತಮುತ್ತಲಿನವರಿಗೂ ಪ್ರಾಣಾಪಾಯ ತರಬಲ್ಲ. ಬಳಿಕ ಕಾರ್ಸಕಾಫ್ ವಿಕಲತೆಗೊಳಗಾಗಿ ತೀವ್ರ ಮರೆವು, ಭ್ರಮೆ, ಕೈಕಾಲುಗಳ ನರಬೇನೆ, ನಿದ್ರಾವಿಹೀನತೆಗೆ ಸಿಲುಕುತ್ತಾನೆ. ಕ್ರಮೇಣ ಮಿದುಳು ನಶಿಸಿ, ಗೆದ್ದಲು ಹಿಡಿದ ಮರದ ಕೊರಡಾಗಿ, ಕೊನೆಯುಸಿರೆಳೆಯುತ್ತಾನೆ

ಹೀಗೆ ಮೋಜಿಗಾಗಿ, ಕಂಪನಿಗಾಗಿ, ಹೇಗಿರುತ್ತೋ ನೋಡುವ ಎಂಬ ಕುತೂಹಲಕ್ಕಾಗಿ ಅಥವಾ ಆರೋಗ್ಯ ವೃದ್ಧಿಗಾಗಿ ಎಂದು ಮದ್ಯ ಸೇವನೆ ಹದಿವಯಸ್ಸಿನಲ್ಲಿ ಪ್ರಾರಂಭವಾಗಿ, ವ್ಯಕ್ತಿತ್ವ ಪರಿಸರ-ಮಾನಸಿಕ ವಿವಿಧ ಕಾರಣಗಳಿಂದ ಚಟವಾಗಿ, ನಿಧಾನ ವಿಷವಾಗಿ ವ್ಯಕ್ತಿಯನ್ನು ಹಿಂಡಿ ಹಿಪ್ಪೇಕಾಯಿ ಮಾಡಿ ಕೊನೆಗೆ ಬಲಿ ತೆಗೆದುಕೊಳ್ಳುತ್ತದೆ.

ವಿಸ್ಕಿ, ರಮ್, ಜಿನ್ ಕೊಳ್ಳಲು ಆಗದ ಮಧ್ಯಮ ಹಾಗೂ ಬಡವರ್ಗದ ಯುವಜನ ಅರಾಕ್, ಸಾರಾಯಿ, ಕಳ್ಳು, ಫ್ರೆಂಚ್ ಪಾಲಿಶ್ ಹೀಗೆ ಸಿಕ್ಕಿದ್ದನ್ನು ಕುಡಿದು, ಬೇಗ ಅನಾರೋಗ್ಯವನ್ನು ಅಥವಾ ಆತಂಕವನ್ನು ಕರೆದುಕೊಳ್ಳುತ್ತಾರೆ.

ಆಲ್ಕೋಹಾಲ್‌ನಿಂದ ಆರೋಗ್ಯ ವೃದ್ಧಿಸುತ್ತದೆಯೇ?

ಆಲ್ಕೋಹಾಲ್ ಸೇವಿಸಿದರೆ, ಹಸಿವು ಚೆನ್ನಾಗಾಗುತ್ತದೆ. ತಿಂದದ್ದು ಜೀರ್ಣವಾಗು

ತ್ತದೆ. ಲವಲವಿಕೆ ಮೂಡುತ್ತದೆ. ಸ್ಫೂರ್ತಿ ಸ್ಫುರಿಸುತ್ತದೆ. ಲೈಂಗಿಕ ಸಾಮರ್ಥ್ಯ ಹೆಚ್ಚುತ್ತದೆ. ಕಷ್ಟ ನಷ್ಟ ಮರೆತು, ಸುಖ ಸಿಕ್ಕುತ್ತದೆ. ಆರೋಗ್ಯ ವೃದ್ಧಿಸುತ್ತದೆ ಎಂಬ ನಂಬಿಕೆ ಜನರಲ್ಲಿದೆ. ವಿಜ್ಞಾನವೂ ಹೀಗೆ ಹೇಳುತ್ತದೆ. ಆದರೆ ಇದು ಆಲ್ಕೋಹಾಲನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸಿದರೆ ಮಾತ್ರ ನಿಜ ಎನ್ನುವುದನ್ನು ಬಹಳ ಜನ ಮರೆಯುತ್ತಾರೆ.

ಒಂದೆರಡು ಪೆಗ್ ಹಾಕಿದ ಸಂಗೀತಗಾರ, ನಟ, ಹರಿಕಥೆದಾಸ, ಸರ್ಕಸ್ ಕಲಾವಿದ, ದೊಂಬರುಗಳು ತಮ್ಮ ಸಾಮರ್ಥ್ಯ, ಕುಶಲತೆಗಳಿಗೆ ವಾರೆವ್ಹಾ! ಭಲೆ! ಒನ್ಸ್ ಮೋರ್! ಎನಿಸಿಕೊಂಡರೆ; ಮಿತಿ ಮೀರಿ ಕುಡಿದಾಗ ಅಪಸ್ವರ ಬಂದೋ, ಕಥೆಯ ಜಾಡು ತಪ್ಪಿಯೋ, ಮಾತು ತೊದಲಿ ಅಧ್ವಾನವಾದಾಗ ಛೀ! ಥೂ! ಎನಿಸಿಕೊಳ್ಳುತ್ತಾರೆ.

ಆಲ್ಕೋಹಾಲ್ ಆಯಸ್ಕಾಂತನಂತಿರುವ ವಿಷಕನ್ಯೆ. ಆಕರ್ಷಿಸಿ ಹತ್ತಿರ ಬಂದಾಗ ಬರಸೆಳೆದಪ್ಪಿ, ಆರೋಗ್ಯ ಮತ್ತು ಪ್ರಾಣವನ್ನು ಹೀರುವ ಪೂತನಿ. ಆದ್ದರಿಂದ ಅದರಿಂದ ಆದಷ್ಟು ದೂರವಿರುವುದೇ ಕ್ಷೇಮ.

ಹದಿವಯಸ್ಸಿನವರನ್ನು ಆಕರ್ಷಿಸುವ ಇತರ ಮಾದಕ ವಸ್ತುಗಳಲ್ಲಿ ಮುಖ್ಯವಾದುವು ಅಫೀಮು, ಮಾರ್ಫಿನ್ ಮತ್ತು ಪೆಥಿಡಿನ್ ಇಂಜೆಕ್ಷನ್‌ಗಳು, ಬಾರ್ಬಿಚುರೇಟ್ ನಂತಹ ನಿದ್ರಾ ಗುಳಿಗೆಗಳು, ಉದ್ವೇಗನಿವಾರಕ ಮಾತ್ರೆಗಳು, ಭ್ರಮೆ ಬರಿಸುವ ಎಲ್.ಎಸ್.ಡಿ. ಈ ವಸ್ತುಗಳನ್ನು ಪ್ರಾರಂಭದಲ್ಲಿ ಕುತೂಹಲ, ವಿಶಿಷ್ಟ ಅನುಭವ ಹೊಂದುವ ಆಸೆ ಅಥವಾ ಜೊತೆಗಾರರ ಬಲವಂತದಿಂದ ಬಳಸಲು ಪ್ರಾರಂಭಿಸಿ, ನಂತರ ಅವಕ್ಕೆ ದಾಸರಾಗುತ್ತಾರೆ. ಈ ಎಲ್ಲದರಲ್ಲಿ ಮಾನಸಿಕ ಹಾಗೂ ದೈಹಿಕ ಅವಲಂಬನೆ ತೀವ್ರವಾಗಿ ಒಂದು ದಿನ ಮಾದಕ ವಸ್ತು ಸೇವಿಸದಿದ್ದರೆ, 'ಹಿಂತೆಗೆತದ ಚಿಹ್ನೆ' ಗಳಿಂದ ವ್ಯಕ್ತಿ ನರಳುತ್ತಾನೆ. ಹೀಗಾಗಿ ಕಾಡಿಯೋ, ಬೇಡಿಯೋ, ಕಳ್ಳತನ ಮಾಡಿಯೋ ಕೊನೆಗೆ ಕೊಲೆ ಮಾಡಿಯಾದರೂ ಮಾದಕವಸ್ತುವನ್ನು ಹೊಂದಲು ಪ್ರಯತ್ನಿಸುತ್ತಾನೆ. ಹೇಗಾದರೂ ಮಾಡಿ, ಯಾವುದಾದರೊಂದು ಮಾರ್ಗದಲ್ಲಿ ಮಾದಕ ವಸ್ತು ಸಂಪಾದನೆ ಅವನ ಜೀವನದ ಗುರಿಯಾಗುತ್ತದೆ. ಮಾದಕ ವಸ್ತುವಿಗಾಗಿ ಇಡೀ ಆಸ್ತಿಯನ್ನು ಮಾರಲು, ಕಡೆಗೆ ಹೆಂಡತಿ ಮಕ್ಕಳನ್ನೂ ಬಿಡಲು ಸಿದ್ಧರಾಗುತ್ತಾರೆ. ಹೀಗೆ ಚಟಕ್ಕೆ ಬಲಿಯಾದವರು ಅತ್ಯಂತ ಅಪಾಯಕಾರಿ ವ್ಯಕ್ತಿಗಳಾಗುತ್ತಾರೆ.

ಗಾಂಜಾ ಭಕ್ತ ಬದ್ರಿ, ಡೆಕ್ಸೆಡ್ರಿನ್ ದಾಸ ಹರೀಶ, ಆಲ್ಕೋಹಾಲ್ ಪ್ರಿಯ ಫಿಲಿಪ್ ಇವರೆಲ್ಲ ಮದ್ದು ಮದ್ಯ ವ್ಯಸನಿಗಳು. ತಾವು ತೊಂದರೆ ಪಟ್ಟುದಲ್ಲದೆ ತಮ್ಮ ಮನೆಯವರನ್ನು ನರಳಿಸಿದವರು. ಇವರು ಹೀಗಾಗಲು ಕಾರಣವೇನು? ಕೆಲವರು 'ವಂಶಿಕ ಗುಣ' ಗಳಿಂದ ದುರ್ಬಲ ಮನಸ್ಕರಾಗಿ ಮಾದಕ ವಸ್ತುಗಳ ದಾಸರಾಗುತ್ತಾರೆ. ಕೆಲವರು ಬಾಲ್ಯದಲ್ಲಿ ಪ್ರೀತಿ ಮಮತೆಗಳ ಕೊರತೆಯಿಂದ ಅಥವಾ ಅತಿ ಶಿಸ್ತು-ಶಿಕ್ಷೆ, ಅತಿ

ಪ್ರೀತಿಯಿಂದ ಅಡ್ಡದಾರಿ ಹಿಡಿಯುತ್ತಾರೆ ಇನ್ನು ಕೆಲವರು ಸಮಾಜ ವಿರೋಧಿ, ಅತಿ ಸ್ವಾರ್ಥದ ವ್ಯಕ್ತಿತ್ವ ದೋಷದಿಂದ ವ್ಯಸನಿಗಳಾಗುತ್ತಾರೆ. ಮತ್ತೆ ಕೆಲವರು ಸಂಘ ದೋಷ ಹಾಗೂ ಮಾನಸಿಕ ಅಸ್ವಸ್ಥತೆಯಿಂದ ಮಾದಕ ವಸ್ತುಗಳಿಗೆ ಬಲಿಯಾಗುತ್ತಾರೆ. ಮಾದಕ ವಸ್ತುಗಳ ಚಕ್ರವ್ಯೂಹದೊಳಕ್ಕೆ ಹೋಗುವುದು ಸುಲಭ. ಅವುಗಳ ಹಿಡಿತ ಅಕ್ಟೋಪಸ್ ಹಿಡಿತದಂತೆ. ಮತ್ತೆ ವಾಪಸ್ ಹೊರ ಬರುವುದು ಬಲು ಕಠಿಣ.

ಮದ್ದು ಮದ್ಯ ವ್ಯಸನಕ್ಕೆ ಔಷಧ ಚಿಕಿತ್ಸೆ, ನಡೆವಳಿಕೆ ಚಿಕಿತ್ಸೆ, ಮನೋ ಚಿಕಿತ್ಸೆ' ಸಮೂಹ ಚಿಕಿತ್ಸೆ ಇತ್ಯಾದಿಗಳಿದ್ದರೂ ವ್ಯಕ್ತಿಗೆ, 'ನಾನು ಈ ಚಟವನ್ನು ಬಿಡಬೇಕು' ಎಂಬ ಪ್ರಾಮಾಣಿಕ ಆಸೆ–ಪ್ರಯತ್ನವಿಲ್ಲದಿದ್ದರೆ ಎಲ್ಲವೂ ವ್ಯರ್ಥ. ಕುದುರೆಯನ್ನು ನೀರಿನ ಹತ್ತಿರಕ್ಕೆ ಕಷ್ಟಪಟ್ಟು ಕರೆದೊಯ್ಯಬಹುದು, ಆದರೆ ನೀರನ್ನು ಕುಡಿಯುವುದು, ಬಿಡುವುದು ಅದರ ಇಷ್ಟಕ್ಕೆ ಬಿಟ್ಟದ್ದು ಅಲ್ಲವೇ !

ಹರೆಯದ ಅಪರಾಧ ಪ್ರವೃತ್ತಿ

ಕಳ್ಳ ಕೃಷ್ಣ

'ಹುಚ್ಚಾಸ್ಪತ್ರೆಗೆ ಯಾಕ್ರೀ ನನ್ನ ಕರಕೊಂಡು ಬಂದ್ರೀ, ಜೈಲಿಗೆ ಕರಕೋಂಡು ಹೋಗುವುದು ಬಿಟ್ಟು.... ನಿಮ್ಮ ತಲೆ ಸರಿಯಾಗಿದೆಯಾ....'

'ಬಾಯ್ಮುಚ್ಕೋ.... ನನ್ ಮಗನೇ. ಕೋರ್ಟ್‌ನಲ್ಲಿ ಜಡ್ಜಿ ಹೇಳಿದ್ದು ಕೇಳಿಸ ಲಿಲ್ಲವಾ? ಹಾಕ್‌ತಿನ್ ನೋಡು.... ಜೋ....' ನನ್ನನ್ನು ಕಂಡು ಕ್ರನಿಷ್ಠಬಿಗಿ ಸೆಲ್ಯೂಟ್ ಹೊಡೆದು, ಕೋರ್ಟ್ ನಿರೂಪವನ್ನು ಕೊಟ್ಟ. ಸುಮಾರು ಹದಿನೈದು ವರ್ಷದ ಕೃಷ್ಣ ನನ್ನು ಹತ್ತು ದಿವಸ ಆಸ್ಪತ್ರೆಯಲ್ಲಿಟ್ಟುಕೊಂಡು, ಪರೀಕ್ಷಿಸಿ, ವರದಿ ಸಲ್ಲಿಸಲು ನ್ಯಾಯಾ ಧೀಶರು ಆಜ್ಞೆ ಮಾಡಿದ್ದರು. "ಏಕೆ ನಿನ್ನ ಪೋಲೀಸಿನವರು ಆರೆಸ್ಟ್ ಮಾಡಿದರು" ಎಂದು ವಿಚಾರಿಸಿದೆ. "ಗೊತ್ತಿಲ್ಲ ಡಾಕ್ಟ್ರೆ, ಸುಮ್ಮ ಸುಮ್ನೆ ಸ್ಟೇಷನ್ನಿಗೆ ಎಳಕೊಂಡು ಹೋದ್ರು. ಅಲ್ಲಿಂದ ಕೋರ್ಟಿಗೆ. ನಂತರ ಇಲ್ಲಿಗೆ. ಇಲ್ಲಿ ನಾನಿರಲ್ಲ. ಈಗಲೇ ಪರೀಕ್ಷೆ ಮಾಡಿ ನನ್ನ ಕಳುಹಿಸಿ ಬಿಡಿ" ಎಂದು ಸಿಡುಕಿದ. "ಈ ರೀತಿ ಹಟ ಮಾಡಬಾರದು. ಇಲ್ಲಿ ಹತ್ತು ದಿವಸ ಇದ್ದು ಸರಿಯಾಗಿ ನಡಕೊಂಡರೆ ನಿನ್ನ ಬಗ್ಗೆ ಒಳ್ಳೆ ವರದಿ ಹೋಗಿ ಆಮೇಲೆ ಕೋರ್ಟಿನವರು ನಿನ್ನ ಮನೆಗೆ ಕಳಿಸುತ್ತಾರೆ ತಿಳೀತಾ" ಎಂದೆ. "ಬೇಡ ಡಾಕ್ಟ್ರೆ ಮನೇಗೆ ಮಾತ್ರ ಕಳಿಸಬೇಡಿ. ಮನೆ ಅಲ್ಲ. ಅದು, ನರಕ. ನೀವು ಹೇಳಿದ ಹಾಗೆ ಕೇಳ್ತೀನೆ. ಇಲ್ಲೇ ಇರಿಸಿಕೊಂಡು ಬಿಡಿ, ಇಲ್ಲ ಜೈಲಿಗೆ ಕಳಿಸಿಬಿಡಿ" ಎಂದ.

ಕೋರ್ಟಿನಿಂದ ವಿವರಗಳನ್ನು ಪಡೆದಾಗ ತಿಳಿದು ಬಂದದ್ದು ಇಷ್ಟು. ಕಳೆದವಾರ ಡಿಪಾರ್ಟ್‌ಮೆಂಟಲ್ ಸ್ಟೋರ್‌ನಲ್ಲಿ ಕದಿಯುತ್ತಿದ್ದಾಗ ಮಾಲು ಸಮೇತ ಕೃಷ್ಣ ಹಿಡಿಯ ಲ್ಪಟ್ಟ. ನಂತರ ಅವನ ತಂದೆ 'ಕೃಷ್ಣ ನನ್ನ ಮಗನಾದರೂ ಅವನು ನಮ್ಮ ಕೈ ಮೀರಿ ಹೋಗಿದ್ದಾನೆ. ಅವನನ್ನು ಹದ್ದುಬಸ್ತಿನಲ್ಲಿಡಲು ನಮ್ಮಿಂದ ಸಾಧ್ಯವಿಲ್ಲದಾ

ಗಿದೆ. ಅವನ ತಲೆ ಸರಿಯಾಗಿಲ್ಲವೆಂದು ತೋರುತ್ತದೆ. ಆದ್ದರಿಂದ ಅವನನ್ನು ಜೈಲಿಗೋ ಹುಚ್ಚಾಸ್ಪತ್ರೆಗೋ ಸೇರಿಸಿದರೆ ನಮಗೆ ನೆಮ್ಮದಿ' ಎಂದು ಹೇಳಿಕೆ ಕೊಟ್ಟಿದ್ದ. ಮನೋವೈದ್ಯರ ಅಭಿಪ್ರಾಯ ಪಡೆಯಲು ಕೋರ್ಟ್ ತೀರ್ಮಾನಿಸಿತ್ತು.

ಕೃಷ್ಣ ವಾಚಾಳಿ. ಕೇಳುವವರ ಆಸಕ್ತಿ ಕೆಡದಂತೆ ಅರಳುರಿದಂತೆ ಮಾತಾಡಬಲ್ಲ. ಅವನು ಹೇಳುವ ಪ್ರಕಾರ ತಂದೆತಾಯಿಗಳ ಎಂಟನೇ ಮಗ. ಅದಕ್ಕೆ ಕೃಷ್ಣನೆಂದು ಹೆಸರು. ಅಪ್ಪ ಮಿಲ್‌ನಲ್ಲಿ ನೌಕರ. ಸಾಕಷ್ಟು ಸಂಪಾದಿಸಿದರೂ ಎರಡು ಸಂಸಾರ ಕಟ್ಟಿಕೊಂಡದ್ದರಿಂದ ಬಡತನದ ಬಾಳು, ಜೊತೆಗೆ ಕುಡಿಯುವ ಚಟ. ಕೃಷ್ಣನ ತಾಯಿ ಹಟಮಾರಿ, ಮೂರ್ಖ ಹೆಂಗಸು. ಕುಡಿದು ಬರುವ ಗಂಡನನ್ನು ವಾಚಾಮ ಗೋಚರ ಬೈಯುತ್ತಾಳೆ. ಬೈದು ಒದೆ ತಿನ್ನುತ್ತಾಳೆ. ದನಿ ಎತ್ತರಿಸಿ ಅಳುತ್ತಾಳೆ. ಇಬ್ಬರೇ ಗಂಡು ಮಕ್ಕಳು. ಮೊದಲನೆಯವ ಮನೆಬಿಟ್ಟು ಓಡಿಹೋಗಿ ಐದಾರು ವರ್ಷಗಳಾಗಿವೆ. ಕೃಷ್ಣನನ್ನು ಅತಿಯಾಗಿ ಪ್ರೀತಿಸುತ್ತಾಳೆ. ಶಾಲೆಗೆ ಹೋಗದಿದ್ದರೆ, ಹೇಳಿದ ಮಾತು ಕೇಳದಿದ್ದರೆ ದಂಡಿಸುವುದಿಲ್ಲ. ಅವನು ಕೇಳಿದಾಗ ಇದ್ದಬದ್ದ ದುಡ್ಡನ್ನು ಕೊಡುತ್ತಾಳೆ. ಸೀನಾದರೂ ನನ್ನ ಕೈ ಬಿಡಬೇಡ ಎಂದು ಅಳುತ್ತಾಳೆ. ತಂದೆಯನ್ನು ಕಂಡರೆ ಕೃಷ್ಣ ಹೆದರುತ್ತಾನೆ. ಕೋಪದಲ್ಲಿ ದನ ಬಡಿಯುವಂತೆ ಬಡಿವಳೆ ಯಾರಿಗೆ ಭಯ ಹುಟ್ಟುವುದಿಲ್ಲ! ಕೃಷ್ಣ ಅಂತ ಬುದ್ಧಿವಂತನಲ್ಲ. ಓದು ತಲೆಗತ್ತಲಿಲ್ಲ. ದಡ್ಡ ಹುಡುಗರಿಗೆ ಚೆನ್ನಾಗಿ ಹೇಳಿಕೊಡುವ ಬದಲು, ಕುರ್ಚಿ ಕೂರಿಸಿ, ಕಿವಿ ಹಿಂಡಿ, ಹೊಡೆಯುವ ಶಾಲೆಯೂ ಅವನ ಪಾಲಿಗೆ ನರಕವಾಯಿತು. ಬೀದಿ ಹುಡುಗರ ಜೊತೆ ಅವನಿಗೆ ಪ್ರಿಯವಾಯಿತು. ಮನೆಯಲ್ಲೋ, ಹೊರಗೋ ಕಳ್ಳತನ ಮಾಡಿ ಬಂದ ಹಣವನ್ನು ಹೋಟೆಲ್, ಸಿನಿಮಾಗಳಿಗೆ ಹೋಗಿ ಉಡಾಯಿಸುತ್ತಿದ್ದ. ಯಾವ ನಿರ್ಬಂಧವೂ ಇಲ್ಲ ಮಜವಾಗಿದ್ದ ಕೃಷ್ಣ ಬೆಂಗಳೂರಿನವನೇ ಆಗಿದ್ದರಿಂದ, ಆಸ್ಪತ್ರೆಯ ಸಮಾಜ ಕಾರ್ಯ ಕರ್ತರು ಆತನ ಮನೆಗೆ ಹೋಗಿ ಬಂದರು. ಕೃಷ್ಣ ಹೇಳಿದ್ದೆಲ್ಲಾ ನಿಜವಾಗಿತ್ತು. ಕೃಷ್ಣನಿಗೆ ಯಾವ ಮಾನಸಿಕ ಖಾಯಿಲೆಯೂ ಇರಲಿಲ್ಲ. ಅನಾರೋಗ್ಯಕರ ಪರಿಸರ, ಕ್ರಮ ತಪ್ಪಿದ ಶಿಸ್ತು, ಶಿಕ್ಷೆ, ಪ್ರೀತಿ, ಮಮತೆಗಳು ಅವನನ್ನು ಅಡ್ಡದಾರಿಗೆಳೆದಿದ್ದವು. ಅಪಕ್ವ ವ್ಯಕ್ತಿತ್ವದಿಂದ ಬೆಳಲುತ್ತಿದ್ದ.

ಮನುಷ್ಯನ ನಡೆನುಡಿ, ವ್ಯಕ್ತಿತ್ವ, ಗುಣಾವಗುಣಗಳಲ್ಲಿ ಅನುವಂಶಿಕ (ವಂಶಪಾರಂಪರ್ಯವಾಗಿ, ರಕ್ತಗತವಾಗಿ ಮಗುವಿಗೆ ಬರುವ ಅಂಶಗಳು) ಕೊಡುಗೆಯ ಪ್ರಭಾವವೆಷ್ಟು, ಸುತ್ತಮುತ್ತಲಿನ ಪರಿಸರದ ಪ್ರಭಾವವೆಷ್ಟು ಎಂಬುದನ್ನು ನಿಖರವಾಗಿ ಹೇಳಲ ಸಾಧ್ಯವಿಲ್ಲ. ಒಳ್ಳೆಯ ಮನೆತನದಲ್ಲಿ ಪಟಿಂಗರು ಹುಟ್ಟುವುದನ್ನು, ಕೆಟ್ಟಮನೆತನದಲ್ಲಿ ಕೆಸರಿನ ಕಮಲದಂತೆ ಒಳ್ಳೆಯ ವ್ಯಕ್ತಿ ಜನಿಸುವುದನ್ನು ನೋಡುತ್ತೇವೆ. ಆದರೆ ಇವು ಅಪವಾದ. ಸಾಮಾನ್ಯವಾಗಿ ವ್ಯಕ್ತಿಯ ವ್ಯಕ್ತಿತ್ವದ ವಿಕಾಸದಲ್ಲಿ ಅನುವಂಶೀಕತೆಗಿಂತ ಪರಿಸರದ ಪ್ರಭಾವ ಹೆಚ್ಚು ಎಂದು ನಡವಳಿಕೆ ತಜ್ಞರು ಅಭಿಪ್ರಾಯ ಪಡುತ್ತಾರೆ.

ಖ್ಯಾತ ನಡವಳಿಕೆ ತಜ್ಞ ಜೇಮ್ಸ್ ವ್ಯಾಟ್ಸನ್ "ನನಗೆ ಆಗ ತಾನೇ ಹುಟ್ಟಿದ ಯಾವುದೇ ಶಿಶುವನ್ನು ಕೊಡಿ. ಆತನನ್ನು ಏನು ಮಾಡಬೇಕೆಂದು ಹೇಳಿ. ಲಾಯರ್, ವಿಜ್ಞಾನಿ, ಪೂಜಾರಿ, ಕೊಲೆಗಡುಕ, ವಂಚಕ ಏನು ಬೇಕು ಹೇಳಿ. ನಾನು ಮಾಡಬಲ್ಲೆ" ಎಂದು ಘೋಷಿಸಿದ.

ಅನಾಥಾಶ್ರಮಗಳಲ್ಲಿ, ಸೇವಾಸಂಸ್ಥೆಗಳಲ್ಲಿ, ಹಾಸ್ಟೆಲುಗಳಲ್ಲಿ ವೈಯಕ್ತಿಕ ಪ್ರೀತಿ, ಆಸರೆ ಇಲ್ಲವೆ ಬೆಳೆದ ಮಕ್ಕಳಲ್ಲಿ, ತಂದೆತಾಯಿಗಳ ಆಸರೆಯಲ್ಲಿ ಬೆಳೆದ ಮಕ್ಕಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಮಾಜ ವಿರೋಧಿ ಕೃತ್ಯಗಳೂ, ದುಶ್ಚಟಗಳೂ, ಸ್ವಾರ್ಥ ಮನೋಭಾವವೂ, ಸಮಾಜದೊಂದಿಗೆ ಹೊಂದಿ ಬಾಳುವ ಸಾಮರ್ಥ್ಯದ ಕೊರತೆಯೂ ಕಂಡು ಬರುತ್ತದೆಂದು ಸಮಾಜ ವಿಜ್ಞಾನಿಗಳು ಸಾರಿದ್ದಾರೆ.

ಅಹಿತ ಪರಿಸರವಲ್ಲದೆ, ಅಲ್ಪ ಮತ್ತು ಸಾಧಾರಣ ಬುದ್ಧಿಮಾಂದ್ಯತೆ, ಸರಳ ಇಚ್ಛಿತ್ತ ವಿಕಲತೆ, ಪದೇ ಪದೇ ಬರುವ ಅಪಸ್ಮಾರ ಖಾಯಿಲೆಯಿಂದಾಗುವ ವ್ಯಕ್ತಿತ್ವ ದೋಷ. ಜ್ವರ, ಪೆಟ್ಟು, ರಕ್ತಸ್ರಾವ, ಸೋಂಕು, ಉರಿತದಿಂದ ಮಿದುಳಿಗಾಗುವ ಘಾಸಿಯಿಂದ ಯುಕ್ತಾಯುಕ್ತತೆಯನ್ನು ಅರಿಯುವ ಸಾಮರ್ಥ್ಯ ಕುಂದಿಹೋಗುತ್ತದೆ. ಈ ವ್ಯಕ್ತಿಗಳು ಸಮಾಜ ಘಾತುಕರ ಗುಂಪಿಗೆ ಸೇರಿಕೊಂಡರೆ, ಅಪಾಯಕಾರಿ ಅಪರಾಧಗಳನ್ನು ಮಾಡಲು ಹಿಂಜರಿಯುವುದಿಲ್ಲ.

ಶಾಲಾಕಾಲೇಜುಗಳಿಗೆ ಚಕ್ಕರ್ ಹೊಡೆಯುವುದು, ಬೀದಿ ಸುತ್ತುವುದು, ಸುಳ್ಳು, ಕಳ್ಳತನ, ಅವಿಧೇಯತೆ, ಹಿರಿಯರನ್ನು ಅವಮಾನಗೊಳಿಸುವುದು. ಗುಂಪುಕಟ್ಟಿ ಗಲಾಟೆ ಮಾಡುವುದು. ವಿಧ್ವಂಸಕ ಕೃತ್ಯಗಳು, ಲೈಂಗಿಕ ಸ್ವೇಚ್ಛಾಚಾರಗಳು ಹದಿಹರೆಯದವರಲ್ಲಿ ಕಂಡುಬರುವ ಸಾಮಾನ್ಯ ಅಪರಾಧ ಪ್ರವೃತ್ತಿಗಳು.

ಈ ಹರೆಯದ ಅಪರಾಧ ಪ್ರವೃತ್ತಿಗೆ ಕೇವಲ ಶಿಕ್ಷೆಮಾತ್ರವನ್ನಿತ್ತರೆ ಉರಿಯುವ ಬೆಂಕಿಗೆ ತುಪ್ಪ ಹುಯ್ದಂತಾಗುತ್ತದೆ. ಇವರು ಮೊಂಡರಾಗಿ ಸಮಾಜ ವ್ಯವಸ್ಥೆಯ ದ್ವೇಷಿಗಳಾಗಿ, ಕ್ರಮೇಣ ಪಕ್ಕಾ ಕೇಡಿಗಳಾಗುತ್ತಾರೆ. ಕ್ರೂರಿಗಳಾಗಿಬಿಡುತ್ತಾರೆ. ಆದ್ದರಿಂದ ಶಿಕ್ಷೆಗಿಂತ, ಇವರು ಹೀಗಾಗಲು ಕಾರಣವಾದ ಪರಿಸರವನ್ನು ಅಧ್ಯಯನ ಮಾಡಿ ಅದರ ನ್ಯೂನತೆಗಳನ್ನು ಸರಿಪಡಿಸುವುದು, ಹರೆಯದ ಅಪರಾಧಿಗಳ ಮನಸ್ಸನ್ನು ಅರ್ಥಮಾಡಿಕೊಂಡು, ಮನವೊಲಿಸುವ ಮಾರ್ಗದಿಂದ ಅವರನ್ನು ಸರಿದಾರಿಗೆ ತರಬೇಕು. ಪ್ರಾರಂಭದಲ್ಲಿ ಒಳ್ಳೆಯ ವಾತಾವರಣದಲ್ಲಿ ಅವರಿಗೆ ಒಳ್ಳೆಯ ನಡತೆಗಳ ಬಗ್ಗೆ ತರಪೇತಿ, ಪ್ರೋತ್ಸಾಹನಂತರ ಉಪಯುಕ್ತ ಕೆಲಸ ನೀಡಿಕೆ ಚಿಕಿತ್ಸೆಯ ಪ್ರಮುಖ ಅಂಶ ಇವರನ್ನು ನೋಡಿಕೊಳ್ಳಲು ಮನೆಯವರಿಗೆ ಮಾರ್ಗದರ್ಶನ ಅಗತ್ಯ.

ಮನೋದೈಹಿಕ ಖಾಯಿಲೆಗಳು

ಬಾಬೂವಿನ ಬೇಧಿ :

ಹದಿನೇಳು ವರ್ಷದ ಬಾಬೂವಿಗೆ ಕಳೆದ ಒಂದು ವರ್ಷದಿಂದಲೂ ದಿನವೂ ಮೂರು ನಾಲ್ಕು ಬಾರಿ ಬೇಧಿಯಾಗುತ್ತದೆ. ತರಾವರಿ ಮದ್ದು ಮಾತ್ರೆಗಳಾದುವು. ಮಲ ಪರೀಕ್ಷೆ, ರಕ್ತ ಪರೀಕ್ಷೆ, ದೊಡ್ಡ ಕರುಳಿನ ಜೀವುಂಡಿಗೆ ಇತ್ಯಾದಿ ಸಕಲ ಪರೀಕ್ಷೆಗಳೂ ಆದುವು. ಹಲವು ತಜ್ಞ ವೈದ್ಯರು ತಲೆತುರಿಸಿಕೊಂಡರು. ಬಾಬುವಿನ ಬೇಧಿ ನಿಲ್ಲಲಿಲ್ಲ. ಕಳೆದ ಮೂರು ತಿಂಗಳಿನಿಂದ ಆತ ಮನೆಯ ಹೊರಗೆ ಕಾಲಿಡುವುದಿಲ್ಲ. ಕಕ್ಕಸಿಗೆ ಅವಸರ ವಾಗಿಬಿಟ್ಟರೆ, ತಕ್ಷಣ ಹೋಗಿಬಿಡಬೇಕು. ಸ್ವಲ್ಪ ತಡವಾದರೂ ಬಟ್ಟೆಯಲ್ಲೇ ಆಗಿಬಿಡು ತ್ತದೆ. ಓದು ನಿಂತಿದೆ. ಅವನು ಓದದಿದ್ದರೆ ಬೇಡ ಖಾಯಿಲೆ ವಾಸಿಯಾಗಲಪ್ಪಾ ದೇವರೇ ಎಂದು ಅವನ ತಂದೆ ತಾಯಿ ಮೊರೆಯಿಡುತ್ತಾರೆ. ಕೊನೆಗೆ ಒಬ್ಬ ತಜ್ಞ ವೈದ್ಯರು, 'ನೀವು ಇದುವರೆಗೆ ಮಾಡಿಸಿರುವ ಎಲ್ಲಾ ಪರೀಕ್ಷೆಗಳು 'ನಾರ್ಮಲ್' ಆಗಿವೆ. ಶರೀರ ದಲ್ಲಿ ಯಾವ ನ್ಯೂನತೆಯೂ ಇಲ್ಲ. ಒಮ್ಮೆ ಮನೋವೈದ್ಯರಿಗೆ ತೋರಿಸಿ' ಎಂದಾಗ, ಕೊನೇ ಪ್ರಯತ್ನ ಮಾಡಿಬಿಡೋಣವೆಂದು ಮಾನಸಿಕ ಆಸ್ಪತ್ರೆಗೆ ಕರೆತಂದರು. ಸುತ್ತು ಬಳಸಿ ವಿವರಗಳನ್ನು ಸಂಗ್ರಹಿಸಿದಾಗ, ಬಾಬುವಿಗೆ ಬೇಧಿ ಶುರುವಾದದ್ದು, ಆತ ಇಂಜಿ ನಿಯರಿಂಗ್ ಕಾಲೇಜು ಸೇರಿದ ನಂತರ ಎಂದು ತಿಳಿದು ಬಂತು. ಆ ಸುಳಿವಿನ ಮೇಲೆ ಮುಂದುವರೆದಾಗ ಅವನ ಖಾಯಿಲೆಯ ಗುಟ್ಟು ಬಯಲಾಯಿತು.

ಕಂಟ್ರಾಕ್ಟರ್ ತಿಪ್ಪಣ್ಣನವರ ಏಕಮಾತ್ರ ಪುತ್ರ ಬಾಬು. ನಾಲ್ಕು ಹೆಣ್ಣುಗಳ ಹಿಂದೆ ಹುಟ್ಟಿದ ಅವನು ತಂದೆತಾಯಿಗಳ ಕಣ್ಣು ಗೊಂಬೆ. ಮಗನನ್ನು ಇಂಜಿನೀಯರ್ ಮಾಡಬೇಕೆಂದು ತಿಪ್ಪಣ್ಣನವರ ಮಹದಾಸೆ. ಆದರೆ ಬಾಬು, ಎಸ್ಸೆಲ್ಸಿ, ಪಿ.ಯು.ಸಿ. ಯಲ್ಲಿ ಮೊದಲಬಾರಿಗೆ ಪಾಸಾದರೂ, ಶತಾಂಶ ಐವತ್ತು ನಂಬರು ತೆಗೆದುಕೊಂಡಾಗ ಬೇಸರ ಪಟ್ಟರು. ಆ ನಂಬರಿಗೆ ಇಂಜಿನೀಯರಿಂಗ್ ಕಾಲೇಜಿನ ಮೆಟ್ಟಲು ಕಾಣುವುದೂ ಅಸಾಧ್ಯ

ವೆಂದು ಬಲ್ಲರು. ಕಬ್ಬಿಣದ ಪೆಟ್ಟಿಗೆಯಲ್ಲಿ ದುಡ್ಡಿತ್ತು. ಖಾಸಗಿ ಕಾಲೇಜೊಂದರಲ್ಲಿ ಬಾಬುವಿಗೆ ಸೀಟು ಖರೀದಿಸಿದರು. ಬಿ. ಇ ಡಿಗ್ರಿ ಆಗಲಿ ಆ ಹಣವನ್ನು ಬಡ್ಡಿ ಸಮೇತ ವಸೂಲಿ ಮಾಡಿಕೋಬಹುದು ಎಂದು ಲೆಕ್ಕಾಚಾರ ಹಾಕಿದರು. ಆದರೆ ಬಾಬುವಿನ ಲೆಕ್ಕಾಚಾರವೇ ಬೇರೆಯಾಗಿತ್ತು. ಅವನಿಗೆ ಓದು ಬೇಡವಾಗಿತ್ತು. ತಂದೆಯಂತೆ ಬಿಸಿನೆಸ್ ಮಾಡುವ ಆಸೆ ಅವನಿಗೆ. ವಾದಿಸಿದ, ಪ್ರತಿಭಟಿಸಿದ. ಆದರೆ ಗೆದ್ದದ್ದು ಅವನ ತಂದೆ. ಕಾಲೇಜು ಸೇರಿದ. ತಿಪ್ಪಣ್ಣ ಊರಲ್ಲೆಲ್ಲಾ ತಮ್ಮ ಮಗ ಇಂಜಿನೀಯರ್ ಆಗುವನೆಂದು ತಮಟೆ ಹೊಡೆದರು. ಬಾಬುವಿಗೆ ಓದು ಇಷ್ಟವೂ ಇಲ್ಲ; ಜೊತೆಗೆ ಇಂಜನೀರಿಂಗ್ ವಿಷಯಗಳು ಅವನಿಗೆ ಕಬ್ಬಿಣದ ಕಡಲೆಯಾದುವು ಕಾಲೇಜು ಬಿಟ್ಟುಬಿಡೋಣವೆಂದು ಯೋಚಿಸಿದ. ಬಿಟ್ಟರೆ ಅವಮಾನ. ಸಂದಿಗ್ಧಕ್ಕೆ ಸಿಲುಕಿದ ಮನಸ್ಸು, ತನ್ನ ಕಷ್ಟವನ್ನು ದೊಡ್ಡ ಕರುಳನ್ನು ನಿಯಂತ್ರಿಸುವ ನರತಂತು ಸಮೂಹಕ್ಕೆ ವರ್ಗಾಯಿಸಿತು. ಬೇಧಿ ಪ್ರಾರಂಭವಾಯಿತು. ಖಾಯಿಲೆಯ ನೆಪದಿಂದ ಕಾಲೇಜು ತಪ್ಪಿತು 'ಪಾಪ ಎಂತಹ ದುರಾದೃಷ್ಟ' ಎಂದರು ಜನಗಳು. ಬಾಬುವಿಗೆ ಬೇಕಾದ್ದು ಅದೇ. ತಂದೆ ತಾಯಿಗಳಿಗೆ ಅವನ ಸಮಸ್ಯೆಯನ್ನು ತಿಳಿಸಿ, ಅವನ ಇಚ್ಛೆಯಂತೆ ವ್ಯಾಪಾರದಲ್ಲಿ ಮುಂದುವರಿಯಲು ಅನುವು ಮಾಡಿಕೊಡಲಾಯಿತು. ಕ್ರಮೇಣ ಅವನ ಖಾಯಿಲೆಯೂ ಇಲ್ಲವಾಯಿತು. ಈಗ ತಂದೆಯಂತೆಯೇ ತನ್ನ ದಂಧೆಯಲ್ಲಿ ಯಶಸ್ವಿಯಾಗಿದ್ದಾನೆ.

ಅಶೋಕನ ಆಸ್ತಮಾ

ನನ್ನ ಸಹಪಾಠಿಯಾಗಿದ್ದವನೊಬ್ಬನ ಅನುಭವವನ್ನು ನನ್ನ ಈಗಿನ ವೈದ್ಯಕೀಯ ಜ್ಞಾನದ ಅನುಸಾರ ವಿಶ್ಲೇಷಿಸಿದರೆ, ಅವನ ಚಿಕ್ಕಂದಿನ ಅಸ್ತಮಾ ದುಃಖ–ಕೋಪದ ಪರೋಕ್ಷರೂಪ ಎನಿಸುತ್ತದೆ. ಅಶೋಕ ಹತ್ತನೇ ವಯಸ್ಸಿನಲ್ಲಿ ತನ್ನ ತಾಯಿಯನ್ನು ಕಳೆದುಕೊಂಡ. ಮರು ವರ್ಷವೇ ಅವನಿಗೆ ಚಿಕ್ಕಮ್ಮ ಬಂದಳು. ಅವನಿಗೂ ಆಕೆಗೂ ಸರಿಹೋಗಲಿಲ್ಲ. ನಾವಿಬ್ಬರೂ ಲಂಗೋಟಿ ಗೆಳೆಯರಾದ್ದರಿಂದ, ತನ್ನ ಕಷ್ಟವನ್ನು ಹೇಳಿಕೊಂಡು ಅಳುತ್ತಿದ್ದ. ಅವನಿಗೆ ಹದಿಮೂರನೇ ವಯಸ್ಸಿನಲ್ಲಿ ಆಸ್ತಮಾ ಬರಲು ಶುರುವಾಯಿತು. ಚಿಕ್ಕಮ್ಮನ ಕಾಟದ ಜೊತೆಗೆ ಆಸ್ತಮಾದ ಕಾಟವೂ ಸೇರಿದ ಅವನನ್ನು ಕಂಡರೆ ಅಯ್ಯೋ ಎನಿಸುತ್ತಿತ್ತು. ಹೇಗೋ ಕಷ್ಟಪಟ್ಟು ಎಸ್ಸೆಲ್ಸಿ ಮುಗಿಸಿ ಕೆಲಸಕ್ಕೆ ಸೇರಿಕೊಂಡು ದೂರದೂರಿಗೆ ಹೋಗಿಬಿಟ್ಟ. ಅದುವರೆಗೆ ಅವನನ್ನು ಸತಾಯಿಸುತ್ತಿದ್ದ ಅಸ್ತಮ ಪವಾಡವೆಂಬಂತೆ ನಿಂತುಹೋಗಿತ್ತು. ಕೆಲವು ವರ್ಷಗಳಾದ ನಂತರ ತನ್ನ ಊರಿಗೇ ವಾಪಸ್ ಬಂದ. ಮದುವೆಯಾಗಿ ಬೇರೆ ಮನೆ ಮಾಡಿದ. ಈಗ ಚೆನ್ನಾಗಿ ಬಾಳುತ್ತಿದ್ದಾನೆ. ತಾಯಿಯನ್ನು ಕಳೆದುಕೊಂಡ ದುಃಖವನ್ನು, ಕಿರುಕುಳ ಕೊಡುವ ಚಿಕ್ಕಮ್ಮನ ಮೇಲಿನ ಕೋಪವನ್ನು ಮಾತಿನಲ್ಲಿ, ಭಾವನೆಯಲ್ಲಿ ವ್ಯಕ್ತಪಡಿಸಲಾಗದ ಅವನ ಮನಸ್ಸಿನ ಸಂಕಟ ಶ್ವಾಸಕೋಶವನ್ನು ಹಿಂಡಿತು. ಆಸ್ತಮಾವನ್ನು ತಂದಿತು.

ಉಸಿರು ಕಟ್ಟಿಸುವ ವಾತಾವರಣದಿಂದ ದೂರವಾದಾಗ, ಈ ಸಂಕಟ ಪಿಶಾಚಿ ತೊಲಗಿ ಅವನು ಎಂದಿನಂತಾದ.

ಡಯಟ್ ಮಾಡುವ ದಮಯಂತಿ

ಏಕಮಾತ್ರ ಪುತ್ರಿ, ಕಣ್ಮಣಿ 'ಡಯಟಿಂಗ್' ಎಂದು ಗುಬ್ಬಚ್ಚಿಯಂತೆ ಎರಡು ಅಗುಳು ಅನ್ನತಿಂದು ದಿನೇ ದಿನೇ ಒಣಗುತ್ತಿರುವುದನ್ನು ಕಂಡು ಕಣ್ಣೀರು ಹಾಕುತ್ತಾರೆ ಸಾವಿತ್ರಮ್ಮ. ಆರು ತಲೆಮಾರು ಕೂತು ಉಂಡರೂ ಕರಗದ ಆಸ್ತಿ. ಬಾಯಿಬಿಡುವುದೇ ತಡ, ರುಚಿರುಚಿಯಾಗಿ ಮಾಡಿ ಒಡಿಸುವ ಮೂವರು ಅಡಿಗೆಯವರು. ಮನೆಯಲ್ಲೇ ಇರುವ ಕರೆಯುವ ಹಸುಗಳಿಂದ ಹಾಲುತುಪ್ಪದ ಹೊಳೆಯೇ ಹರಿದಿದೆ. ಏನಿದ್ದರೆ ಏನು, ತಿಂದುಂಡು ನಲಿಯಬೇಕಾದ ಈ ವಯಸ್ಸಿನಲ್ಲಿ ಇವಳಿಗೆ ದೇವರು ಈ ದುರ್ಬುದ್ಧಿ ಕೊಟ್ಟನಲ್ಲ ಎಂದು ಕಂಗೆಡುತ್ತಾರೆ. ನನಗೆ ಹಸಿವಿಲ್ಲಮ್ಮ ಎನ್ನುವ ದಮಯಂತಿಗೆ ಈ ಸಂಕ್ರಾಂತಿಗೆ ಹದಿನಾಲ್ಕು ತುಂಬುತ್ತದೆ. ಆದರೆ ನೋಡಿದವರು ಹತ್ತು ವರ್ಷವಿರಬೇಕು. ಅಷ್ಟೇ ಎನ್ನುತ್ತಾರೆ. ಗಳುವಿಗೆ ಲಂಗ ಜಾಕೆಟ್ ಹಾಕಿದರೆ ದಮಯಂತಿ ಆಗುತ್ತದೆ ಎಂದು ಗಂಡುಮಕ್ಕಳು ತಮಾಷೆ ಮಾಡುತ್ತಾರೆ. ಹನ್ನೆರಡನೇ ವಯಸ್ಸಿನವರೆಗೆ ಎಲ್ಲರಂತಿದ್ದಳು. ಆಮೇಲೆ ಏನಾಯಿತೋ ಏನೋ ತೆಳ್ಳಗಾಗುವ ವ್ರತ ತೊಟ್ಟಿದ್ದಾಳೆ. ಅಂದು ಶಾಲೆಯಲ್ಲಿ ತಲೆಸುತ್ತು ಬಂದು ಬಿದ್ದಾಗ, ಸಾವಿತ್ರಮ್ಮ ನಿಜಕ್ಕೂ ಗಾಬರಿಯಾದರು. ಡಾಕ್ಟರುಗಳು ಮನೆಗೇ ಬಂದು ಚಿಕಿತ್ಸೆ ನಡೆಸಿದರು. 'ಏನೂ ಭಯ ಪಡಬೇಡಿ. ಬೆಳಿಗ್ಗೆ ಉಪವಾಸವಿದ್ದದ್ದರಿಂದ ರಕ್ತದಲ್ಲಿ ಸಕ್ಕರೆ ಅಂಶ ಕಡಿಮೆಯಾಗಿ ತಲೆಸುತ್ತು ಬಂದಿದೆ ಸರಿ ಹೋಗುತ್ತೆ' ಎಂದು ಎರಡು ಶೀಶೆ ಗ್ಲೂಕೋಸನ್ನು ಕೊಟ್ಟರು ದಮಯಂತಿ ಚೇತರಿಸಿಕೊಂಡರೂ, ವಾಕರಿಕೆ ಅವಳನ್ನು ಕಾಡಲಾರಂಭಿಸಿತು. ಹಾಲು, ಕಾಫಿ ಬಿಟ್ಟು ಮತ್ತೆ ಏನನ್ನು ಬಾಯಿಗಿಟ್ಟರೂ 'ವ್ಯಾ' ಎನ್ನುತ್ತಾಳೆ. ಮುಖದಲ್ಲಿ ಮೂಳೆ ಬಿಟ್ಟುಕೊಂಡಿತು. ಚರ್ಮ ಒಣಗಿ ಸುಕ್ಕಾಯಿತು. ನನಗೇನಾಗಿದೆ. ಚೆನ್ನಾಗಿದ್ದೇನೆ ಎಂದು ನಗುತ್ತಾಳೆ. ಅವಳ ನಗುವನ್ನು ಕಂಡವರಿಗೆ ಅಳು ಬರುತ್ತದೆ. ಆಸ್ಪತ್ರೆಗೆ ದಾಖಲಾಗಲು ನಿರಾಕರಿಸಿದಳು. ದಿನಕ್ಕೆ ಎರಡು ಲೋಟ ಕಾಫಿ, ಹಾಲು ಬಿಟ್ಟರೆ ಇನ್ನೇನು ತೆಗೆದುಕೊಳ್ಳುವುದಿಲ್ಲ. ದಿನಪೂರ್ತಿ ಮಂಚದ ಮೇಲಿದ್ದುಕೊಂಡೇ ಕಾಲ ಕಳೆಯುತ್ತಾಳೆ, ಕೊನೆಗೆ ಮನೆ ವೈದ್ಯರು ದಮಯಂತಿಯನ್ನು ಮಾನಸಿಕ ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಿದಾಗ ಸುಮಿತ್ರಮ್ಮ ಹೌಹಾರಿದಳು. 'ಏನು ಡಾಕ್ಟ್ರೇ, ನನ್ನ ದಮ್ಮುಗೆ ಹುಚ್ಚೇ' ಎಂದು ಅಳತೊಡಗಿದರು. "ಇದು ಹುಚ್ಚಲ್ಲ ಸುಮಿತ್ರಮ್ಮನವರೇ ಒಂದು ರೀತಿಯ ಖಾಯಿಲೆ. ವೈಮನಸ್ಸನ್ನು ಕಾಡುತ್ತಿದೆ. ಮನಸ್ಸಿಗೆ ತೆಳ್ಳಗಾಗುವ ಭೂತ ಹಿಡಿದರೆ, ಮೈಕೈ ಸೊರಗಿ ಸಣಕಲಾಗುತ್ತಿದ್ದರೂ ನಿತ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಾಮರ್ಥ್ಯ ಉಳಿದಿರುತ್ತದೆ. ಕೆಲವು ಸಾರಿ ಈ ವ್ಯಕ್ತಿಗಳಿಗೆ ಬೆಳೆದು ಪ್ರೌಢರಾಗುವುದಕ್ಕೆ ಭಯದಿಂದಲೋ, ಆತಂಕದಿಂದಲೋ ಇಷ್ಟವಿರುವುದಿಲ್ಲ. ಆಹಾರ

ತಿಂದರೆ ಬೆಳೆಯುತ್ತೇವೆ. ತಿನ್ನದಿದ್ದರೆ ಬೆಳೆಯುವುದಿಲ್ಲ ಎಂದು ತರ್ಕಮಾಡಿ, ತಿನ್ನುವು ದನ್ನು ನಿಲ್ಲಿಸುತ್ತಾರೆ. ಇಂತಹವರಿಗೆ ಚಿಕಿತ್ಸೆ ನೀಡಲು ಮನೋವೈದ್ಯರು ತರಪೇತಿ ಪಡೆ ದಿರುತ್ತಾರೆ. ನೀವು ಅವರ ಸಲಹೆ ಪಡೆಯಿರಿ" ಎಂದುವೈದ್ಯರು ವಿವರಿಸಿದರು. ಅಂತೆಯೇ ದಮಯಂತಿಯನ್ನು ಮಾನಸಿಕ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ನೀಡಲಾಯಿತು. ಎರಡು ತಿಂಗಳ ಸತತ ಉಪಚಾರ ಆರೈಕೆಗಳಿಂದ ಉತ್ತಮಗೊಂಡಳು.

ಮೈಮನಸ್ಸುಗಳು ಒಂದೇ ನಾಣ್ಯದ ಎರಡುಮುಖಗಳು. ಒಂದಿಲ್ಲದೆ ಇನ್ನೊಂದಿಲ್ಲ. ಒಂದಕ್ಕೆ ಖಾಯಿಲೆ ಬಂದರೆ ಮತ್ತೊಂದೂ ಆರೋಗ್ಯ ಕಳೆದುಕೊಳ್ಳುತ್ತದೆ. ವ್ಯಕ್ತಿ ಆರೋಗ್ಯವಾಗಿ ಸಂತೋಷದಿಂದಿರಬೇಕಾದರೆ ಮೈಮನಸ್ಸುಗಳೆರಡೂ ಆರೋಗ್ಯವಾಗಿರ ಬೇಕು. ಮನುಷ್ಯನನ್ನು ವೃಕ್ಷಕ್ಕೆ ಹೋಲಿಸಬಹುದು. ದೇಹವು ವೃಕ್ಷದ ರೆಂಬೆಕೊಂಬೆ ಗಳಾದರೆ, ಮನಸ್ಸೇ ಬೇರು. ದೃಢವಾಗಿ ಆರೋಗ್ಯವಾಗಿದ್ದರೆ ಮರದರೆಂಬೆಗಳು ಹೂ ಹಣ್ಣುಗಳಿಂದ ನಳನಳಿಸುತ್ತವೆ. ಬೇರು ರೋಗಗ್ರಸ್ತವಾದರೆ, ಮರ ಒಣಗಿ ಹೋಗು ತ್ತದೆ. ಹಾಗೆಯೇ ಮನಸ್ಸು ದೃಢವಾಗಿ, ಆರೋಗ್ಯವಾಗಿದ್ದರೆ, ದೇಹ ಆರೋಗ್ಯದಿಂದ ನಲಿಯುತ್ತದೆ. ಮನಸ್ಸು ಅಸ್ವಸ್ಥತೆಯಿಂದ ಬಳಲಿದರೆ, ದೇಹವೂ ರೋಗಗ್ರಸ್ತವಾಗು ತ್ತದೆ. ಹೀಗೆ ಮನಸ್ಸಿನ ಅಸ್ವಸ್ಥತೆಯಿಂದ ಬರುವ ದೈಹಿಕ ಖಾಯಿಲೆಗಳನ್ನು ಮನೋ ದೈಹಿಕ ಖಾಯಿಲೆಗಳೆಂದು ಗುರುತಿಸಲಾಗುತ್ತದೆ. ಬಾಬುವಿಗೆ ಬೇಧಿ ಶುರುವಾದದ್ದನ್ನು, ಅಶೋಕನಿಗೆ ಅಸ್ತಮ ಆಗಿದ್ದನ್ನು, ದಮಯಂತಿ ಡಯಟ್ ಮಾಡಿ ಹಾಸಿಗೆ ಹಿಡಿದಿದ್ದನ್ನು ನೋಡಿದೆವು. ಇವರೆಲ್ಲ ಮನೋದೈಹಿಕ ಬೇನೆಗೆ ತುತ್ತಾದವರು. ವಿವಿಧ ಕಾರಣ ಗಳಿಂದ, ಹದಿವಯಸ್ಸಿನಲ್ಲಿ ಮನಸ್ಸು ಸ್ವಸ್ಥವಾಗಿರುವುದಿಲ್ಲ. ಯಾವುದಾದರೂ ಒಂದು ಆತಂಕ, ಅಸಮಾಧಾನ ಅವರನ್ನು ಕಾಡಿಸುತ್ತಲೇ ಇರುತ್ತದೆ. ಈ ಆತಂಕ ಅಸಮಾ ಧಾನ ತೀವ್ರವಾದಾಗ, ಅಥವಾ ಬಹಳ ಕಾಲ ಉಳಿದಾಗ ಅದರ ಪರಿಣಾಮ ಶರೀರದ ಮೇಲೆ ಆಗಿಯೇ ಆಗುತ್ತದೆ. ಉದಾಹರಣೆಗೆ ಪರೀಕ್ಷೆಯ ದಿನ, ಪ್ರಶ್ನೆಪತ್ರಿಕೆ ನಮ್ಮ ಕೈಗೆ ಬರುವ ಮೊದಲು ನಮ್ಮ ಸ್ಥಿತಿ ಹೇಗಿರುತ್ತದೆ, ಎಂದು ಜ್ಞಾಪಿಸಿಕೊಳ್ಳೋಣ. ಎದೆ ನಗಾರಿಯಂತೆ ಡವಗುಟ್ಟುತ್ತಿರುತ್ತದೆ. ಉಸಿರು ವೇಗವಾಗಿ ಆಡುತ್ತದೆ. ಬಾಯಿ ಒಣಗಿ ಮಾತು ತೊದಲುತ್ತದೆ. ಕೈಕಾಲು ನಡುಗುತ್ತಿರುತ್ತದೆ. ಹೊಟ್ಟೆಯಲ್ಲಿ ಏನೋ ತಳಮಳ. ಮೈಯೆಲ್ಲಾ ಬಿಸಿಯಾಗಿರುತ್ತದೆ. ಪದೇ ಪದೇ ಮೂತ್ರ ಮಾಡುವಂತಾ ಗುತ್ತದೆ. ಕುಳಿತಲ್ಲೇ ಚಡಪಡಿಸುತ್ತೇವೆ. ಇವೆಲ್ಲಾ ಪ್ರಶ್ನೆಪತ್ರಿಕೆ ನಮ್ಮ ಕೈಗೆ ಬಂದು, ಪ್ರಶ್ನೆಗಳೆಲ್ಲಾ ಸುಲಭವಾಗಿದ್ದರೆ ಮಾಯವಾಗುತ್ತದೆ. ಪರೀಕ್ಷಾ ಕೊಠಡಿಯಲ್ಲಿ ಈ ಐದು ನಿಮಿಷಗಳಲ್ಲಿ ಆದ ಈ ಶರೀರದ ಬದಲಾವಣೆಗಳು, ಎಂತಹ ಪ್ರಶ್ನೆಗಳು ಬರುತ ವೆಯೋ, ಕಷ್ಟವಾದುವು ಬಂದುಬಿಟ್ಟರೆ, ನಾನು ಫೇಲಾಗಿಬಿಡುತ್ತೇನೆ ಎಂಬ ಆತಂಕದಿಂದ ಬಂದವು. ಈ ಆತಂಕ ಐದು ನಿಮಿಷದ ಬದಲು ಐದಾರು ತಿಂಗಳು ಒಂದೇ ಸಮ ಇದ್ದರೆ, ಶರೀರದ ಗತಿ ಏನಾಗುತ್ತದೆ ಎಂಬುದನ್ನು ಯೋಚಿಸಿ. ರೋಗ ಬರಲು ಇನ್ನೇನು

ಬೇಕು. ಹದಿವಯಸ್ಸಿನವರಲ್ಲಿ ಜಠರದುರಿತ, ದೊಡ್ಡಕರುಳುರಿತ, ಆಸ್ತಮಾ, ಎಕ್ಸಿಮಾ ದಂತಹ ಚರ್ಮರೋಗ, ಹಸಿವಿನಾಶ ಚಂಚಲತೆ (ಅನೋರೆಕ್ಸಿಯಾ ನರ್ವೋಸಾ–ದನುಯಂತಿಯನ್ನು ಕಾಡಿಸಿದ್ದು) ಮುಂತಾದ ಮನೋದೈಹಿಕ ಬೇನೆಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ಔಷಧಗಳ ಜೊತೆಗೆ ಮನೋಚಿಕಿತ್ಸೆಯೂ ಅವಶ್ಯಕ.

ಬುದ್ಧಿಮಾಂದ್ಯತೆ

ಜಗತ್ತಿನಾದ್ಯಂತ ನಡೆದಿರುವ ಅಧ್ಯಯನಗಳ ಪ್ರಕಾರ ಜನಸಂಖ್ಯೆಯ ಶೇಕಡಾ ಮೂರರಷ್ಟು ಮಂದಿ ಬುದ್ಧಿಮಾಂದ್ಯತೆಯಿಂದ ಬಳಲುತ್ತಾರೆ. ಮನೆಯವರೊಂದಿಗೆ ಸಮಾಜದೊಂದಿಗೆ ಹೊಂದಿಕೊಂಡು ಬಾಳಲು ಬೇಕಾದ ಬುದ್ಧಿಚತುರತೆ ಇಲ್ಲದ, ದೈನಂದಿನ ಚಟುವಟಿಕೆಗಳಲ್ಲಿ ಸ್ವಾವಲಂಬಿಯಾಗಿ, ಅನ್ನ ಬಟ್ಟೆ ಸಂಪಾದಿಸಲು ಸಾಮರ್ಥ್ಯವಿಲ್ಲದ ಸ್ಥಿತಿಯನ್ನು ಬುದ್ಧಿಮಾಂದ್ಯತೆ ಎನ್ನುತ್ತಾರೆ. ವಿವಿಧ ಕಾರಣಗಳಿಂದ ಮಿದುಳಿಗೆ ಪೆಟ್ಟಾಗಿ ಅದು ಸರಿಯಾಗಿ ಬೆಳೆದು ವಿಕಾಸಗೊಳ್ಳದಿರುವುದೇ ಬುದ್ಧಿಮಾಂದ್ಯತೆಗೆ ಕಾರಣ.

ಗರ್ಭಿಣಿ ಹೆಂಗಸು ಪುಷ್ಟಿಕರವಾದ ಆಹಾರ ಸೇವಿಸದಿದ್ದರೆ, ಆಕೆಗೆ ಗರ್ಭಿಣಿಯ ಮೊದಲ ಮೂರು ನಾಲ್ಕು ತಿಂಗಳಲ್ಲಿ ಪರಂಗಿರೋಗ, ವೈರಸ್ ಜ್ವರ, ದಢಾರ ಬಂದರೆ, ನಂಜಾದರೆ ಗರ್ಭದಲ್ಲಿರುವ ಮಗುವಿನ ಮಿದುಳಿಗೆ ಘಾಸಿಯಾಗುತ್ತದೆ. ಹೆರಿಗೆಯಾಗುವುದು ಕಷ್ಟವಾಗಿ, ಮಗುವಿನ ತಲೆ ಜನನದ್ವಾರದಲ್ಲಿ ಸಿಕ್ಕಿಹಾಕಿಕೊಂಡರೆ, ಸಕಾಲದಲ್ಲಿ ವೈದ್ಯಕೀಯ ನೆರವು ಸಿಗದಿದ್ದರೆ, ಮಗುವಿನ ಮಿದುಳಿನ ಆಮ್ಲಜನಕದ ಕೊರತೆಯಿಂದ ಅಥವಾ ರಕ್ತನಾಳಗಳು ಒಡೆದು ರಕ್ತಸ್ರಾವದಿಂದ ಪೆಟ್ಟಾಗುತ ದೆ. ಮಗು ಹುಟ್ಟಿದ ನಂತರ ಬರುವ ಮೂರ್ಛೆರೋಗ, ಮಿದುಳುಜ್ವರ, ಕಾಮಾಲೆರೋಗಗಳಿಂದಲೂ ಮಿದುಳಿಗೆ ಗಾಯವಾಗುತ್ತದೆ. ಈ ಎಲ್ಲ ಸ್ಥಿತಿಯಲ್ಲೂ ಮಗು ಮುಂದೆ ಬೆಳೆದಂತೆ ಬುದ್ಧಿಮಂದತ್ವಕ್ಕೆ ಒಳಗಾಗುತ ದೆ.

ಆಗ ಮಗುವಿನ ಬೆಳವಣಿಗೆ ನಿಧಾನವಾಗುತ್ತದೆ. ಅದು ಕುಳಿತುಕೊಳ್ಳುವುದು, ನಡೆಯುವುದು, ಮಾತು ಕಲಿಯುವುದು ಎಲ್ಲದರಲ್ಲೂ ಹಿಂದೆಬೀಳುತ್ತದೆ.

ತೀವ್ರ ಬುದ್ಧಿಮಾಂದ್ಯತೆ ಇದ್ದರೆ, ಏಳೆಂಟುವರ್ಷವಾದರೂ, ಮಗು ಬಿದ್ದಲ್ಲೇ ಬಿದ್ದುಕೊಂಡಿರುತ್ತದೆ. ತಂದೆತಾಯಿಗಳೇ ಊಟಮಾಡಿಸಬೇಕು, ಬಟ್ಟೆಹಾಕಬೇಕು. ಹೇಲು

ಉಚ್ಚೆ ಬಳಿಯುಬೇಕು. ಮಗುವಿಗೆ ನೀರು, ಬೆಂಕಿಯಿಂದ ದೂರವಿರಬೇಕು ಎನ್ನುವ ಸಾಮಾನ್ಯ ಜ್ಞಾನವೂ ಇರುವುದಿಲ್ಲ.

ಮಧ್ಯಮ ದರ್ಜೆಯ ಬುದ್ಧಿಮಾಂದ್ಯತೆ ಇದ್ದರೆ ಮಗು ಊಟ, ಸ್ನಾನ, ಬಟ್ಟೆ ತೊಡುವುದು, ಬೆಂಕಿ ಅನಾಹುತಗಳಿಂದ ದೂರವಿರುವುದನ್ನು ಕಲಿತರೂ, ವಿದ್ಯೆ ಕಲಿಯಲು, ಕೆಲಸ ಕಲಿಯಲು ಹಿಂದೆಬೀಳುತ್ತದೆ.

ಅಲ್ಪ ಬುದ್ಧಿಮಾಂದ್ಯತೆ ಇದ್ದರೆ ಅದು ಗೊತ್ತಾಗುವುದು ಹದಿವಯಸ್ಸಿನಲ್ಲಿ ಅಲ್ಲಿಯವರೆಗೆ ಸ್ವಲ್ಪದಡ್ಡ, ಮಂಕು ಎನಿಸಿಕೊಂಡರೂ ಪರೀಕ್ಷೆಗಳಲ್ಲಿ ಮೂವತ್ತು ಮೂವತ್ತೈದು ನಂಬರು ತೆಗೆದುಕೊಂಡು ಪಾಸಾಗಿಬಿಡುತ್ತಾರೆ. ಅಥವಾ ಉಪಾಧ್ಯಾಯರೇ ಹೋಗಲಿ ಪಾಪ ಎಂದು ಮುಂದಿನ ಕ್ಲಾಸಿಗೆ ದಬ್ಬುತ್ತಾರೆ. ಏಳನೇ ಸ್ಟಾಂಡರ್ಡ್ ಜಿಲ್ಲಾ ಮಟ್ಟದ ಪರೀಕ್ಷೆ ಅಲ್ಲಿ ಇವರ ಬಣ್ಣ ಬಯಲಾಗುತ್ತದೆ. ಡುಮ್ಕಿ ಹೊಡೆಯುತ್ತಾರೆ. ಹಳ್ಳಿಗಳಲ್ಲಿ, ಪಟ್ಟಣದ ಕೆಳವರ್ಗಗಳಲ್ಲಿ ಇದು ಅಂತಹ ಕೋಲಾಹಲವನ್ನುಂಟುಮಾಡುವುದಿಲ್ಲ. ಫೇಲಾಗಿದ್ದೇ ಒಳ್ಳೇದಾಯಿತು ಎಂದು ತಂದೆತಾಯಿಗಳು ಅಂಥವರನ್ನು ಹೊಲ ಮನೆಕೆಲಸಗಳಿಗೆ, ಹೋಟೆಲ್ ಅಂಗಡಿಗಳಲ್ಲಿ ಚಾಕರಿಗೋ, ಹಾಕಿಬಿಡುತ್ತಾರೆ. ಅಲ್ಲಿ ಈ ಅಲ್ಪಬುದ್ಧಿಯವರು ದಿವಿನಾಗಿ ಹೇಳಿದಷ್ಟು ಕೆಲಸ ಮಾಡಿಕೊಂಡಿರುತ್ತಾರೆ. ಕಷ್ಟ ಬರುವುದು ಮಧ್ಯಮ ವರ್ಗ ಮತ್ತು ಉಚ್ಚವರ್ಗದವರಲ್ಲಿ. ನನ್ನ ಮಗ ಅಥವಾ ಮಗಳು ಬೀಯೇ, ಎಮ್ಮೇ ಪಾಸುಮಾಡಬೇಕು. ಇಂಜನೀಯರು, ಡಾಕ್ಟರುಗಳು ಆಗಬೇಕು ಎಂದು ಕನಸು ಕಾಣುವ ತಂದೆತಾಯಿಗಳು ತಮ್ಮ ಮಕ್ಕಳು ಹೈಸ್ಕೂಲಿನಲ್ಲೇ ಡುಮ್ಕಿ ಹೊಡೆಯುತ್ತಾ, ಮುಖ್ಯವಾಗಿ ಎಸ್ಸೆಲ್ಸಿಯಲ್ಲಿ ಘಜ್ನಿ ಮಹಮದನಂತೆ ಮಾರ್ಚ್ ಸೆಪ್ಟಂಬರ್‌ಗಳಲ್ಲಿ ದಂಡಯಾತ್ರೆ ಮಾಡಲು ಪ್ರಾರಂಭಿಸಿದಾಗ ಕಂಗಾಲಾಗುತ್ತಾರೆ. "ದಡ್ಡ ನನ್ಮಗನೆ ಮೈ ಬಗ್ಗಿಸಿ ಓದೋಕೆ ಏನೋ ಧಾಡಿ. ಹೋಗಿ ಎಮ್ಮೆ ಕಾಯಿ" ಎಂದು ಮೂತಿ ತಿವಿಯುತ್ತಾರೆ. ಪಾಪ ಮಗ ಮೈಬಗ್ಗಿಸಬಲ್ಲನೇ ಹೊರತು ಪರೀಕ್ಷೆಯಲ್ಲಿ ಪಾಸುಮಾಡ ಲಾರನೆಂದು ಅವರಿಗೆ ಅರ್ಥವಾಗುವ ಹೊತ್ತಿಗೆ ಸಾಕಷ್ಟು ನಷ್ಟವಾಗಿ ಹೋಗಿರುತ್ತದೆ. ಕಲಿಯುವ ಸಾಮರ್ಥ್ಯ ಕಡಿಮೆ ಇರುವ ಈ ಹದಿಹರೆಯದವರನ್ನು ಬೈದು ಹೊಡೆದರೆ ಅವರ ಬುದ್ಧಿ ಚಿಗುರುವ ಬದಲು ಮತ್ತಷ್ಟು ಮಂಕಾಗಿಬಿಡುತ್ತದೆ. "ನಿನ್ನ ಹಿಂದೆ ಹುಟ್ಟಿದ ನಿನ್ನ ತಮ್ಮನನ್ನು ನೋಡೋ. ನಿನ್ನ ಅರ್ಧದಷ್ಟು ವಯಸ್ಸಿನ ಗಿರಿಜಳನ್ನು ನೋಡೋ ಅವರಿಗಿರೋ ಬುದ್ಧಿ ಇಲ್ವಲ್ಲೋ ಅವರ ಕಾಲ್ದಸೀಲಿ ತೊರು. ಆಗಲಾದರೂ ಬುದ್ಧಿಬರುತ್ತೋ ನೋಡೋಣ...." "ನೋಡು ದೊಡ್ಡಮ್ಮಾ ಎಂತಾ ಮಡ್ಡಿ ಹುಟ್ಟಿಟ್ಟ ನಮ್ಮ ವಂಶದಲ್ಲಿ. ಇವನನ್ನು ಕಟ್ಕೊಂಡು ತಲೆ ಚಚ್ಚಿಕೋಬೇಕು." ಎಂದು ಹೀಯಾಳಿಸಿದರೆ ಈ ನತದೃಷ್ಟರ ಪಾಡು ನಾಯಿಪಾಡಾಗುತ್ತದೆ.

ಈ ಅಲ್ಪ ಬುದ್ಧಿಮಾಂದ್ಯತೆ ಮಕ್ಕಳಿಗೆ ಬೇಕಾದ್ದು ಸಹಾನುಭೂತಿ ಮತ್ತು ಅವರ ಬುದ್ಧಿಸಾಮರ್ಥ್ಯಕ್ಕನುಗುಣವಾಗಿ ಯಾವುದಾದರೂ ಸರಳವಾದ ಕೆಲಸದಲ್ಲಿ ತರಬೇತಿ ಮತ್ತು ಪ್ರೋತ್ಸಾಹ. ಆಗ ಅವರು ಉಪಯುಕ್ತವಾಗಿ ಜೀವಿಸುತ್ತಾರೆ.

ತಂದೆತಾಯಿಗಳು ವಿದ್ಯಾಭ್ಯಾಸದಲ್ಲಿ ಹಿಂದುಳಿದ ಈ ಮಕ್ಕಳನ್ನು ಮನೋವೈದ್ಯರಿಗೆ ಮನಃಶಾಸ್ತ್ರಜ್ಞರಿಗೆ ತೋರಿಸಿ ಅವರ ಸಲಹೆ ಪಡೆದು, ಅದರಂತೆ ನಡೆಯಬೇಕು ಮನೆತನದ ಪ್ರತಿಷ್ಠೆ, ವೈಯುಕ್ತಿಕ ಮಹತ್ವಾಕಾಂಕ್ಷೆಗಳನ್ನು ಮರೆತು ಈ ಮಕ್ಕಳನ್ನು ಅವರ ಸಾಮರ್ಥ್ಯಕ್ಕನುಗುಣವಾದ ವೃತ್ತಿಯಲ್ಲಿ ಬಿಡಬೇಕು. ಸ್ವಾವಲಂಬಿಗಳಾಗಲು ಪ್ರೋತ್ಸಾಹಿಸಬೇಕು.

ಇಚ್ಛಿತ್ತ ವಿಕಲತೆ

ರಾಹುಗ್ರಸ್ತ ಚಂದ್ರ

ಶುಕ್ಲಪಕ್ಷದ ಚಂದ್ರ ಚೇತೋಹಾರಿ. ದಿನ ದಿನ ಬೆಳೆಯುವ ಅವನನ್ನು ನೋಡುವುದೇ ಒಂದು ಸೊಗಸು. ಅಂತಹ ಚಂದ್ರ ರಾಹುಗ್ರಸ್ತನಾದರೆ ? ಎಂತಹ ಅನ್ಯಾಯವಲ್ಲವೆ ? ಹಾಗೆಯೇ ಹದಿವಯಸ್ಸಿನ ತರುಣ ತರುಣಿಯರು ಇಚ್ಛಿತ್ತ ವಿಕಲತೆಗೆ ಒಳಗಾದರೆ ಅದಕ್ಕಿಂತ ಹೆಚ್ಚಿನ ಅನ್ಯಾಯ ಬೇರೊಂದಿಲ್ಲ. ಅರಳುವ ಮೊದಲೇ, ಮೊಗ್ಗು ಬಾಡಿದ ಹಾಗೆ ವ್ಯರ್ಥ. ಈ ವಯಸ್ಸಿನಲ್ಲಿ ಮನಸ್ಸು ಪೂರ್ಣ ಬೆಳವಣಿಗೆ ಆಗದಿರುವುದರಿಂದ, ರೋಗ ಚಿನ್ಹೆಗಳು ಸ್ಪಷ್ಟವಾಗಿರುವುದಿಲ್ಲ. ಆದ್ದರಿಂದ ಹುಡುಗನಿಗೆ ಅಥವಾ ಹುಡುಗಿಗೆ ಖಾಯಿಲೆ ಬಂದಿದೆ ಎಂದು ಸಂಬಂಧಪಟ್ಟವರಿಗೆ ಮನದಟ್ಟಾಗುವ ಹೊತ್ತಿಗೆ ಖಾಯಿಲೆ ಸಾಕಷ್ಟು ಬಲಿತು ಬಿಟ್ಟಿರುತ್ತದೆ. ಸಾಕಷ್ಟು ಅನಾಹುತ ಹಾನಿಯನ್ನು ಮಾಡಿಬಿಟ್ಟಿರುತ್ತದೆ.

ಮೂಡೇವಿ ಮುರಳಿ:

ಮುರಳಿ ನನ್ನ ದೂರದ ನೆಂಟರೊಬ್ಬರ ಮಗ. ಆರು ಮಕ್ಕಳಲ್ಲಿ ನಾಲ್ಕನೇಯವನಾಗಿ ಹುಟ್ಟಿದವನು. ಎಸ್ಸೆಸ್ಸೆಲ್ಸಿವರೆಗೂ ಎಲ್ಲೂ ಫೇಲಾಗದೆ ನೂರಕ್ಕೆ ನಲವತ್ತು ನಲವತ್ತೈದು ನಂಬರು ತೆಗೆದುಕೊಂಡು ಪಾಸ್ ಮಾಡಿಕೊಂಡು ಬಂದ. ಸಂಕೋಚ ಪ್ರವೃತ್ತಿ ಸ್ವಲ್ಪ ಹೆಚ್ಚೇ ಎನ್ನಬೇಕು. ಸ್ಕೂಲಾಯಿತು, ಮನೆಯಾಯಿತು, ಹೇಳಿದ ಕೆಲಸವನ್ನು ಮಾಡುತ್ತಾ 'ಪರವಾಗಿಲ್ಲ ಒಳ್ಳೆಯ ಹುಡುಗ' ಎನ್ನಿಸಿಕೊಂಡಿದ್ದ. ಆಮೇಲೆ ಏನಾಯಿತೋ ಏನೋ ಎಸ್ಸೆಸ್ಸೆಲ್ಸಿಯಲ್ಲಿ ಘಸ್ನಿಮಹಮದನಂತೆ ದಂಡಯಾತ್ರೆಗಳನ್ನುಮಾಡಲಾರಂಭಿಸಿದ. ಮಾರ್ಚ್, ಸೆಪ್ಟಂಬರ್‌ಗಳು ಬಂದು ಹೋದುವೇ ಹೊರತು ಅವನು ಪಾಸಾಗಿ ಮುಂದೆ ಹೋಗಲಿಲ್ಲ. ಕೊನೆಗೆ ಅವನಿಗೇ ಸಾಕಾಯಿತೋ, ಅವನ ಮನೆಯವರಿಗೇ ಬೇಸರವಾಯಿತೋ ದಂಡಯಾತ್ರೆಯನ್ನು ನಿಲ್ಲಿಸಿದ. ಮುರಳಿಯ ದೊಡ್ಡಣ್ಣ, ತನ್ನ ಪರಿಚಯದ

ವರ ಪ್ರೆಸ್ಸಿಗೆ ಮುರಳಿಯನ್ನು ಸೇರಿಸಿದ. ಅಲ್ಲಿ ಏನಾದರೂ ಕೆಲಸ ಕಲಿತುಕೊಂಡು ಎಂಭತ್ತೋ ನೂರೋ ಸಂಪಾದಿಸುವಂತಾಗಲೀ ಅಂತ ಆಸೆಪಟ್ಟ. ಮುರಳಿಗೆ ಆ ಆಸೆ ಇದ್ದಂತೆ ಕಾಣಲಿಲ್ಲ. ಹುಲ್ಲು ತಿನ್ತೀಯೇನೋ ಬಸವಾ....ಊಂ....ಏರು ಉಳ್ತೀಯೇನೋ ಬಸವಾ....ಊಂ ಎನ್ನುವಂತೆ ಅವನ ಸ್ಥಿತಿ. ಹೇಳಿದ ಕೆಲಸವನ್ನು, ಮೂಗ ಬಸವಣ್ಣನಂತೆ ಮಾಡುತ್ತಿದ್ದ. ಕಲೀಬೇಕು, ಕೆಲಸ ಮಾಡಬೇಕು ಅನ್ನೋ ಉಮೇದು ಇಲ್ಲ. ಪ್ರೆಸ್ ಮಾಲೀಕರಿಗೆ 'ಇವನು ಪ್ರಯೋಜನವಿಲ್ಲ' ಎಂದು ಗೊತ್ತಾಗಲು ಬಹಳ ದಿವಸ ಬೇಕಾಗಲಿಲ್ಲ. ದಾಕ್ಷಿಣ್ಯಕ್ಕೆ ಅವನನ್ನು ಉಳಿಸಿಕೊಂಡರು. ತಿಂಗಳಿಗೆ ನಲವತ್ತು ರೂಪಾಯಿ ಕೊಡುತ್ತಿದ್ದರು. ಈ ಸಮಯದಲ್ಲಿ ಮುರಳಿಯ ಅಣ್ಣ ನಮ್ಮ ಮನೆಗೆ ಬಂದು ಮುರಳಿ ವಿಚಾರ ಹೇಳಿ, "ನೀವು ಸ್ವಲ್ಪ ನೋಡಿ, ಸ್ವಲ್ಪ ಚುರುಕಾಗುವ ಹಾಗೆ ಯಾವುದಾದರೂ ಒಳ್ಳೆಯ ಟಾನಿಕ್ ಬರೆದುಕೊಡುವಿರಂತೆ" ಎಂದು ಹೇಳಿದ. ಆಗ ನಾನು ಮನೋವೈದ್ಯಕೀಯದ ಡಿಪ್ಲೊಮಾ ಓದುತ್ತಿದ್ದೆ. ನನಗೆ ಗೊತ್ತಿದ್ದಂತೆ ಇನ್ನಷ್ಟು ವಿವರಗಳನ್ನು ಕೇಳಿದೆ. ಮುರಳಿ ಯಾರ ಜೊತೆಯೂ ಮಾತಾಡೋದಿಲ್ಲ. ಯಾವಾಗಲೂ ಅಂತರ್ಮುಖಿಯಾಗಿರುತ್ತಾನೆ. ಊಟಕ್ಕೆ ಉಪ್ಪು ಜಾಸ್ತಿ ಇರಲಿ, ಕಡಿಮೆ ಇರಲಿ ಏನೂ ಹೇಳೋಲ್ಲ. ಯಾರಾದರೂ ತಮಾಷೆಮಾಡಿ ಎಲ್ಲರೂ ನಗುತ್ತಾ ಇದ್ದರೆ ಇವನ್ನು ಮೂದೇವಿಯಂತೆ ಬಿಮ್ಮಗೆ ಇರುತ್ತಾನೆ. ಆದರೆ ತನಗೆ ತಾನೇ ಮಾತಾಡಿಕೊಳ್ಳೋದು ನಗೋದು, ಅಸಂಬದ್ಧವಾಗಿ ಮಾತಾಡೋದು ಅನುಮಾನ ಪಡೋದು ಒಂದೂ ಇರಲಿಲ್ಲ. ಆಗ ಇದ್ದ ನನ್ನ ಅಲ್ಪಜ್ಞಾನಕ್ಕೆ ಇದು ಇಚ್ಛಿತ್ತ ವಿಕಲತೆಯ ಮೊದಲ ಹಂತವೇ ಅಥವಾ ಕೇವಲ ಅಂತರ್ಮುಖಿ ವ್ಯಕ್ತಿತ್ವವೇ (ಸ್ಕಿಜಾಯ್ಡ್ ಪರ್ಸನಾಲಿಟಿ) ಎಂದು ಗಲಿಬಿಲಿಯಾಯಿತು. ಅವನ್ನು ಹೊರಗಡೆ ತೋರದೇ 'ಅಯ್ಯಪ್ಪ ನಿನ್ನ ತಮ್ಮನನ್ನು ಕರೆದುಕೊಂಡು ಬಾ ನೋಡ್ತೇನೆ' ಎಂದೆ. ಮುಂದಿನ ವಾರ ಮುರಳಿ ಅಣ್ಣನೊಂದಿಗೆ ನಮ್ಮ ಮನೆಗೆ ಬಂದ. ಹದಿನಾರು ವರ್ಷ ವಯಸ್ಸಿನವರಲ್ಲಿರಬೇಕಾದ ಚೂಟಿ, ಚುರುಕು ಲವಲೇಶವೂ ಅವನಲ್ಲಿರಲಿಲ್ಲ. ತೆಳುವಾದ ಶರೀರ, ಕಾಂತಿಹೀನ ಕಣ್ಣುಗಳು, ನಿರ್ಭಾವ ಮುಖ, ರಸತೆಗೆದ ಮೂಸಂಬಿಯಂತಿದ್ದ. ನನ್ನ ಪ್ರಶ್ನೆಗಳಿಗೆ ಊಂ, ಉಹುಂ, ಆಗಲಿ, ಗೊತ್ತಿಲ್ಲ ಎಂದಷ್ಟೇ ಉತ್ತರ ಕೊಡುತ್ತಿದ್ದ. ನನ್ನ ಮತ್ತು ಅವನ ನಡುವೆ ಅವ್ಯಕ್ತ ಗಾಜಿನ ತೆರೆ ಇರುವಂತೆ ಭಾಸವಾಯಿತು. ಇಚ್ಛಿತ್ತ ವಿಕಲತೆಯ ಪ್ರಮುಖ ಚಿನ್ಹೆಗಳು ಸ್ಪಷ್ಟವಾಗಿಲ್ಲದಿದ್ದರೂ, ಅವನ ಚಹರೆ, ನಿರ್ಭಾವತೆಗಳಿಂದ ಆತ ಸರಳ ಇಚ್ಛಿತ್ತ ವಿಕಲತೆಗೆ ಒಳಗಾಗಿದ್ದಾನೆ ಎನ್ನುವುದರಲ್ಲಿ ಸಂಶಯವಿರಲಿಲ್ಲ. ಆದರೆ ನನ್ನ ನೆಂಟನಿಗೆ 'ನಿನ್ನ ತಮ್ಮನಿಗೆ ಮನೋರೋಗ' ಎಂದು ಹೇಗೆ ಹೇಳುವುದು? ಆಮೇಲೆ ಅವನು 'ಏನೋ ನೆಂಟ. ಡಾಕ್ಟರಾಗಿದಾನೆ ಚನ್ನಾಗಿ ನೋಡಬಹುದು ಅಂತ ಹೋದರೆ ನಮ್ಮ ಮುರಳಿಗೆ ಹುಚ್ಚು ಅಂತಾನಲ್ಲಯ್ಯ. ಅವನಿಗೆ ತಲೆಸರ್ಯಾಗಿಲ್ಲ ಅಂತ ಕಾಣುತ್ತೆ' ಎಂದು ಸರೀಕರಲ್ಲಿ ನಗಾಡಿದರೆ ಏನಪ್ಪಾ ಗತಿ ಎನಿಸಿತು. ಆದರೆ ವೈದ್ಯನಾಗಿ ಸುಳ್ಳು ಹೇಳಬಾರದು. ಅಲ್ಲದೆ ಮುರಳಿಗೆ ಖಾಯಿಲೆ ಪ್ರಾರಂಭವಾಗಿ ಆಗಲೇ ನಾಲ್ಕು ವರ್ಷಗಳು ಆಗಿಬಿಟ್ಟಿವೆ. ಆದ್ದರಿಂದ

ತುಸು ಎಚ್ಚರಿಕೆಯಿಂದಲೇ 'ನೋಡಪ್ಪಾ, ನಿನ್ನ ತಮ್ಮನಿಗೆ ಒಂದು ರೀತಿ ಮಾನಸಿಕ ತೊಂದರೆ ಇದೆ ಅಂತ ಕಾಣುತ್ತೆ. ಒಂದು ಸಾರಿ ಅವನು ನಮ್ಮ ಆಸ್ಪತ್ರೆಗೆ ಬರಲಿ ದೊಡ್ಡ ಡಾಕ್ಟರಿಗೆ ತೋರಿಸಿ ಅವರ ಅಭಿಪ್ರಾಯಾನೂ ತಿಳಿದುಕೊಂಡು ಚಿಕಿತ್ಸೆ ಮಾಡಿಸೋಣ' ಎಂದೆ. ಆಗಲಿ ಅಂತ ಹೋದವನು ಮತ್ತೆ ಬರಲಿಲ್ಲ. ಅವನು ಬರುತ್ತಾನೆ ಅಂತ ನನಗೂ ನಂಬಿಕೆ ಇರಲಿಲ್ಲ.

ಒಂದು ವರ್ಷ ಆದಮೇಲೆ, ಯಾರದೋ ಮದುವೆಗೆ ಹೋಗಿದ್ದಾಗ ಮುರಳಿ ಅಣ್ಣ ನನ್ನ ಕಣ್ಣಿಗೆ ಬಿದ್ದ. ಕಣ್ಣಿಗೆ ಬಿದ್ದಮೇಲೆ ತಪ್ಪಿಸಿಕೊಳ್ಳುವ ಹಾಗಿಲ್ಲವಲ್ಲ. ಅವನಿಗೂ ಮನಸ್ಸಿನಲ್ಲಿ ಕೊರೀತಾ ಇತ್ತು ಅಂತ ಕಾಣುತ್ತೆ. "ಡಾಕ್ಟರೆ, ನೀವು ನಮ್ಮ ಮುರಳೀನ ಆಸ್ಪತ್ರೆಗೆ ಕರಕೊಂಡು ಬಾ ಅಂದಿದ್ರಿ. ನನಗೂ ನೀವು ಹೇಳಿದ್ದು ಸರಿ ಅನ್ನಿಸ್ತು ಆದರೆ ನಮ್ಮ ತಂದೆ ತಾಯಿ ಹಳೇಕಾಲದವರು. ಮುರಳೀನ ಮೆಂಟಲ್ ಆಸ್ಪತ್ರೆಗೆ ಯಾಕೆ ಕರಕೊಂಡು ಹೋಗಬೇಕು ಅವನಿಗೆ ಹುಚ್ಚಿಡಿದಿಲ್ಲ ಅಂದುಬಿಟ್ಟರು...." ಎಂದ. ನಾನು ಅಂದುಕೊಂಡಂತೇ ಆಗಿತ್ತು! "ಪರವಾಗಿಲ್ಲ, ಈಗ ಹೇಗಿದ್ದಾನೆ," ಎಂದು ವಿಚಾರಿಸಿದೆ. "ಬರ್‍ತಾ ಬರ್‍ತಾ ರಾಯರ ಸ್ಥಿತಿ ಕೆಟ್ಟೆ ಆಯ್ತುಂತೆ. ಡಾಕ್ಟರೇ ಹಾಗೇ ಆಗಿದೆ ನಮ್ಮ ಮುರುಳೀ ಸ್ಥಿತಿ. ಈಗ ವಾರಕ್ಕೆ ನಾಲ್ಕುದಿವಸ ಕೆಲಸಕ್ಕೆ ಹೋದ್ರೆ, ಇನ್ನು ಮೂರು ದಿವಸ ಮನೇಲಿ ನಿಂತೋ ಕುಳಿತೋ ಕಾಲಕಳೀತಾನೆ. ಮನಸ್ಸಿಗೆ ಬಂದಾಗ ಊಟ ಮಾಡ್ತಾನೆ" ಎಂದ. ನನಗೆ ಸ್ವಲ್ಪ ಹುರುಪು ಬಂತು. "ಹುಡುಗ ಅಸ್ಯಾಯವಾಗಿ ಹಾಳಾಗ್ತಾ ಇದ್ದಾನಲ್ಲಪ್ಪ. ಈಗಲಾದರೂ ಚಿಕಿತ್ಸೆ ಶುರುಮಾಡಿಸಿ" ಎಂದೆ. ಇನ್ನೇನು ತಾನೇ ಮಾಡಬಲ್ಲೆ.

ಮತ್ತೆ ಎರಡುವರ್ಷ ಕಳೀತು. ಒಂದು ದಿನ ಮುರಳಿ ಅಣ್ಣ ನನ್ನನ್ನು ಹುಡುಕಿಕೊಂಡು ಆಸ್ಪತ್ರೆಗೇ ಬಂದ. "ಡಾಕ್ಟರೆ ಕೊನೇಗೂ ನಮ್ಮ ತಂದೆತಾಯಿಯನ್ನು ಒಪ್ಪಿಸಿದೆ. ಮುರಳಿಯನ್ನು ಅಡ್ಮಿಟ್ ಮಾಡಿಕೊಂಡುಬಿಡಿ. ಅವನ ಖಾಯಿಲೆ ವಾಸಿಯಾಗೋತನಕ ಆಸ್ಪತ್ರೇಲಿ ಇಟ್ಟುಕೊಂಡುಬಿಡಿ", ಎಂದ. 'ಅಡ್ಮಿಷನ್ನು, ಎಷ್ಟು ದಿವಸ ಆಸ್ಪತ್ರೇಲಿರಬೇಕು ಅನ್ನೋದು, ಖಾಯಿಲೆ ಸ್ವರೂಪ, ಚಿಕಿತ್ಸಾ ವಿಧಾನದ ಮೇಲೆ ನಿರ್ಧಾರ ಮಾಡಬೇಕಾಗುತ್ತೆ. ಅದಿರಲಿ ಈಗ ಮುರಳಿ ಯಾವ ಸ್ಥಿತೀಲಿ ಇದ್ದಾನೆ?' ಎಂದೆ. 'ಅವನು ಮನೆಯಿಂದ ಹೊರಗಡೆ ಬಂದು ಆರು ತಿಂಗಳಾಯಿತು ಡಾಕ್ಟರೆ. ಮೂವೇವಿಯುಂಗೆ ರೂಂನಲ್ಲಿ ಗಂಟೆಗಟ್ಟಳೆ ಕೂತಿರ್‍ತಾನೆ, ಇಲ್ಲ ನಿಂತಿರ್‍ತಾನೆ, ಮಾತಿಲ್ಲ ಕತೆಯಿಲ್ಲ. ಯಾವಾಗಲೋ ಒಂದು ತುತ್ತು ಅನ್ನ ತಿಂತಾನೆ', ಎಂದಾಗ ಖಾಯಿಲೆ ತೀವ್ರ ಘಟ್ಟವನ್ನುಮುಟ್ಟಿರುವುದರಲ್ಲಿ ಅನುಮಾನವಿರಲಿಲ್ಲ. 'ಈ ಹಂತದಲ್ಲಿ ಚಿಕಿತ್ಸೆ ನಡೆಸಿದರೆ, ಊರು ಕೊಳ್ಳೆಯಾದ ಮೇಲೆ ದಿಡ್ಡಿಬಾಗಿಲು ಹಾಕಿದರು ಅಂತಾರಲ್ಲ|ಹಾಗಾಗುತ್ತಪ್ಪ' ಎಂದೆ. ಮುರಳಿಯನ್ನು ಆಸ್ಪತ್ರೆಗೆ ಸೇರಿಸಿದರು. ಔಷಧಗಳನ್ನು ಶುರು ಮಾಡಲಾಯಿತು. ಅವನನ್ನು ಚಟುವಟಿಕೆಯಿಂದಿರುವಂತೆ ಕಾರ್ಯಕ್ರಮ ಸಿದ್ಧಪಡಿಸಲಾಯಿತು. ಆದರೆ ಒಂದೇ ವಾರದಲ್ಲಿ

ಅವನ ತಂದೆ ತಾಯಿಗಳು ಬಂದು ಕರೆದುಕೊಂಡು ಹೋಗಿಬಿಟ್ಟರು. ಅವರ ಹಠವಾದಿ ತನದಿಂದ ಮುರಳಿ ಮೂದೇವಿಯಾಗೇ ಉಳಿದಿದ್ದಾನೆ.

ಸರಳ ಇಚ್ಛಿತ್ತ ವಿಕಲತೆ, ನಿಧಾನ ವಿಷವಂತೆ. ಸಾವಧಾನವಾಗಿ ವ್ಯಕ್ತಿಯನ್ನು ಕಬಳಿಸುತ್ತದೆ . ಇದಕ್ಕೆ ಬಲಿಯಾದವರು ಮಾನಸಿಕ ಆಸ್ಪತ್ರೆಗೆ, ಚಿಕಿತ್ಸೆಗೆ ಬರುವುದು ಅಪರೂಪ. ಸಂಘದೋಷದಿಂದ ತಪ್ಪುಕೆಲಸ ಮಾಡಿ, ಪೋಲೀಸರ ಕೈಗೆ ಸಿಕ್ಕಿ ಅವರ ಮೂಲಕ ಆಸ್ಪತ್ರೆಗೆ ಬರಬಹುದು. ಇಂತಹವರು ಸಾಮಾನ್ಯವಾಗಿ ಸಮಾಜದ ಕೆಳಗಿನ ಸ್ತರಗಳಲ್ಲಿ ವೈಗಳೆನಿಸಿಕೊಂಡೋ, ಕತ್ತೆ ಚಾಕರಿ ಮಾಡುತ್ತಲೋ, ವ್ಯಭಿಚಾರ ಮಾಡಿ ಬಾಳು ಸಾಗಿಸುತ್ತಲೋ ಇರುತ್ತಾರೆ.

ಸದ್ಯಕ್ಕೆ ಪ್ರಚಲಿತವಿರುವ ಔಷಧಗಳಾಗಲೀ, ವಿದ್ಯುತ್ ಕಂಪನ ಚಿಕಿತ್ಸೆಯಾಗಲೀ ಈ ಖಾಯಿಲೆಗೆ ಅಷ್ಟು ಪರಿಣಾಮಕಾರಿ ಅಲ್ಲ. ಇಂತಹವರನ್ನು ಆದಷ್ಟು ಕೆಲಸ ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿಸುವುದೇ ಚಿಕಿತ್ಸೆಯ ಪ್ರಮುಖ ಅಂಶ.

ಹಲ್ಲುಕಿಸಿಯುವ ಹನುಮಂತ:

ತೆಳ್ಳಗೆ ಗಳುವಿನಂತೆ ಬೆಳೆದ ಹುಡುಗನನ್ನು ಹಳ್ಳಿಯ ಪಟೇಲನಂತೆ ಕಾಣುತ್ತಿದ್ದವ ನೊಬ್ಬ ಕರೆದುಕೊಂಡು ಒಳಬಂದ. 'ನಮಸ್ಕಾರ ಬುದ್ಧಿ' ಎಂದ ಅವನಿಗೆ ಕುಳಿತುಕೊಳ್ಳಲು ಹೇಳಿದೆ. ಹುಡುಗ ಮುಂದಿನ ನಾಲ್ಕು ಉಬ್ಬು ಹಲ್ಲನ್ನು ಪ್ರದರ್ಶಿಸುತ್ತಾ ನಕ್ಕ. ಎಲಾ ಇವನ! ನನ್ನ ಮುಖ ನೋಡಿ ನಗ್ತಾ ಇಲ್ಲವಷ್ಟೆ ಎಂದುಕೊಂಡೆ. ಫೈಲ್ ನೋಡಿದೆ. ಹನುಮಂತೇಗೌಡ ಎಂದಿತ್ತು. ಇವನಿಗೆ ಈ ಹೆಸರಿಟ್ಟ ತಂದೆತಾಯಿಗಳನ್ನು ಮನಸ್ಸಿನಲ್ಲೇ ಹೊಗಳಿದೆ. 'ಏನಪ್ಪಾ, ಏನು ಕಂಡು ನಗ್ತಾ ಇದ್ದೀ? ' ಎಂದೆ. ನನ್ನ ಮುಖ ನೋಡಿ ಇನ್ನಷ್ಟು ನಕ್ಕ. ಏಕೋ ವಿಪರೀತವಾಯ್ತು ಅಂದುಕೊಂಡೆ. ಅವನ ನಗುವಿನಲ್ಲಿ ಇನ್ನೊಬ್ಬರನ್ನು ನಗಿಸುವ ಗುಣ ಇರಲಿಲ್ಲ. ಅದರ ಬದಲು 'ಅಯ್ಯೋ ಪಾಪವೇ' ಎನ್ನುವ ಭಾವನೆಯನ್ನು ಕೆರಳಿಸುತ್ತಿತ್ತು. ಅನುಭವದಿಂದ ಈತ ಹಬೆಯು ಚ್ಛಿತ್ತ ವಿಕಲತೆಗೆ (Hebe Phrenic Schrizophrenia) ಒಳಗಾಗಿದ್ದಾನೆ ಎಂದು ತಿಳಿಯಲು ಕಷ್ಟವಾಗಲಿಲ್ಲ. 'ಇಂಗೇ ಬುದ್ಧಿ ಕುಂತ್ಗಂಡು ನೆಗ್ತಾ ಇರ್ತಾನೆ ಕೈಬಾಯಿ ಆಡಿಸ್ಕೊಂಡು ಅವನಟ್ಗನ್ನೆ ಏನೇನೋ ಪಿಸ್ ಪಿಸ್ನೆ ಮಾತಾಡ್ಕತಾನೆ. ಮೈಮ್ಯಾಗೆ ಗ್ಯಾನ ಇಲ್ಲ. ಬಟ್ಟೆ ಆಕ್ಕಂಡ್ರೆ ಆಕ್ಕಂಡ; ಇಲ್ದಿದ್ರೆ ಅಂಗೇ ಬುಂಡ್ ಬೆತ್ಲೆ ಇರ್ತಾನೆ. ಎಂಗಸ್ರು, ಸರೀಕ್ರು ಅವರೆ ಅಂತ ಎಗ್ಗೇ ಇಲ್ಲ. ಎಲ್ಲಾರ ಮುಂದೆ ಗುಂಡಿ ಬಿಚ್ಚಿ ಉಚ್ಚೆ ಉಯ್ತಾನೆ. ಯಾಕ್ಲಾ ...ಇಂಗ್ಯಾಕ್ಲಾ ಮಾಡ್ತೀ ಅಂದ್ರೆ ಮಾತಿಲ್ಲ. ರಾತ್ರಿಯಾಗೇ ನಿದ್ದೆನಾಡುಗಿಲ್ಲ ಒಳ್ಳೆ ಔಸ್ದಿಕೊಟ್ಟು, ಬೇಗ ವಾಸಿ ಮಾಡ್ಕೊಡಿ ಬುದ್ಧಿ' ತಂದೆ ವೆಂಕಟೇಗೌಡ ಪ್ರಾರ್ಥಿಸಿದ. 'ಎಷ್ಟು ವರ್ಷದಿಂದ ಹೀಗಿದ್ದಾನೆ ಗೌಡ್ರೆ' ಎಂದೆ. 'ಎರಡ್ ವರ್ಷಕ್ಕೆ ಮುಂದೆ ಬಲ್ ಚುರಾಕಿದ್ದ ಬುದ್ಧಿ. ಸ್ಕೂಲ್ನಾಗೆ ಅವನೇ ಫಸ್ಟ್.

ಮೇಸ್ಟ್ರುಗೋಳೆಲ್ಲ ಗೌಡಾ ನಿನ್ನಮಗ ಬಲು ಬುದ್ಧಿವಂತ. ಓದ್ಸಿ ತಾಸಿಲ್ದಾರ್ ಮಾಡ್ಸಬಡು ಅನ್ನೋರು.ಆಮೇಕೆ ಏನಾಯ್ತೋ ಏನೋ ಮಂಕಾಗ್ಬುಟ್ಟ.ಸ್ಕೂಲ್‌ಗೋಗಾದೂ ಬುಟ್ಟ. ಬಾಯಿಗ್ ಬಂದಂಗೆ ಮಾತಾಡೂದೂ, ನಗೋದ್ ಮಾಡಾಕ್ ಸುರು ಹಚ್ಗಂಡ. ನಾವು ಇವನಿಗೆ ಮೋಹಿನಿ ಇಡ್ಕಂಬುಟ್ಟದೆ, ಜಕಣಿ ಮೆಟ್ಕಂಡದೆ ಅಂತ ಪೂಜೆ ಮಂತ್ರ ಮಾಡಿಸ್ದೊ. ಇನ್ಯಾರೋ ನಿಮ್ಮಂತೋರು 'ನಿನಗಾಗ್ದೆ ಇದ್ದೋರು ಮದ್ದು ಆಕ್ಸವ್ರೆ ಗೌಡ. ಓಗಿ ತೆಗ್ಸು ಸರಿ ಓಯ್ತಾನೆ' ಅಂದ್ರು. ಅದೂ ಮಾಡ್ದೆ. ದುಡ್ಡು ಕರ್ಚ್ ಮಾಡಿದ್ದೆ ಲಾಭ ಆಯ್ತು. ಕೊನೆಗೆ ಇವನ ಮಿದ್ಲೆ ಕೆಟ್ಟೋಗದೆ, ಬೆಂಗಳೂರು ಹುಚ್ಚಾಸ್ಪತ್ರೆಗೆ ತಗೊಂಡೋಗು. ಅಲ್ಲಿ ಕರೆಂಟ್ ಕೊಟ್ಟು ಸರಿಮಾಡ್ತಾರೆ ಅಂತ ಅಂದ್ರು. ನಮ್ಮ ವಂಸದಾಗೆ ಯಾರ್ಗೂ ಹುಚ್ಚಿಲ್ಲ ಬುದ್ದಿ. ಇವನಿಗೆ ಎಲ್ಲಿ ಕಾಯ್ಕಂಡಿತ್ತೋ ನನ್ನ ಗಂದು. ಇವನು ನನ್ಮಗ ಅಲ್ಲ....ನಿಮ್ಮಗ ಬುದ್ಧಿ. ವಾಸಿ ಮಾಡ್ಕೊಡಬೇಕು'. ಎಂದು ಮತ್ತೊಮ್ಮೆ ಕೈಮುಗಿದ. 'ನಮ್ ಕೈಲಾದ ಪ್ರಯತ್ನ ಮಾಡೋಣ ಗೌಡರೆ. ಖಾಯಿಲೆ ಈಗಾಗಲೇ ಸಾಕಷ್ಟು ಬಲಿತುಬಿಟ್ಟಿದೆ. ನೂರಕ್ಕೆ ನೂರು ಉತ್ತಮವಾಗುತ್ತೆ ಅಂತ ಆಸೆ ಇಟ್ಕೊ ಬೇಡಿ. ಔಷಧಿಗಳಿಂದ ಸಾಕಷ್ಟು ವಾಸಿ ಆಗುತ್ತದೆ', ಎಂದು ಸಮಾಧಾನ ಹೇಳಿ, ಹನುಮಂತನನ್ನು ಅಡ್ಮಿಟ್ ಮಾಡಿಕೊಳ್ಳಲಾಯಿತು. ಒಂದು ತಿಂಗಳು ಚಿಕಿತ್ಸೆ ನಡೆಸಿದ ನಂತರ ತನ್ನದೇ ಆದ ಪ್ರಪಂಚದಿಂದ ಹೊರ ಬಂದು, ತನ್ನ ಬೇಕು ಬೇಡಗಳಿಗೆ ಗಮನವೀಯತೊಡಗಿದ. ನಂತರ ಮನೆಗೆ ಕಳುಹಿಸಲಾಯಿತು. ಔಷಧೋಪಚಾರಗಳನ್ನು ಬಿಡದೆ ನಡೆಸುವಂತೆ, ಜೊತೆಗೆ ಸಣ್ಣ ಪುಟ್ಟ ಕೆಲಸ ಮಾಡಿಸುವಂತೆ ತಿಳಿಸಲಾಯಿತು. ವರ್ಷದ ನಂತರ ಅಪ್ಪನೊಂದಿಗೆ ತೋಟದಲ್ಲಿ ಹೇಳಿದ ಕೆಲಸ ಮಾಡುತ್ತಾನೆ. ತಾನೇ ಸ್ವತಃ ಯೋಚಿಸಿ ನಿರ್ಧಾರ ಮಾಡುವ ಶಕ್ತಿ ಇನ್ನೂ ಇಲ್ಲ.

ಹಠೆ–ಇಚ್ಛಿತ್ತ ವಿಕಲತೆ ಹದಿವಯಸ್ಸಿನಲ್ಲೇ ಬರುವುದು. ಅದಕ್ಕೆ ಈ ಹೆಸರು. ಮುಖ್ಯವಾಗಿ ಆಲೋಚನಾ ಶಕ್ತಿ ಭಾವನೆಗಳ ಮೇಲೆ ಗಧಾಪ್ರಹಾರ ಮಾಡಿ ವ್ಯಕ್ತಿಯನ್ನು ಕಂಗೆಡಿಸುತ್ತದೆ. ಸುತ್ತ ಯಾರಿಲ್ಲದಿದ್ದರೂ ಯಾರೋ ಮಾತಾಡಿದಂತೆ, ಯಾರೋ ಬಂದಂತೆ ಭ್ರಮೆಯಾಗುತ್ತದೆ. ಅದನ್ನು ನಿಜವೆಂದೇ ನಂಬಿ ಈ ಅದೃಶ್ಯ ವ್ಯಕ್ತಿಗಳೊಂದಿಗೆ ರೋಗಿ ಸಂಭಾಷಿಸುತ್ತಾನೆ. ಅಳು–ನಗು–ಕೋಪಗಳನ್ನು ಪ್ರಕಟಿಸುತ್ತಾನೆ. ನೋಡಿದವರಿಗೆ ಇದೆಲ್ಲವೂ ಹುಚ್ಚುಚ್ಚಾಗಿ ಕಾಣುತ್ತದೆ. ಕ್ರಮೇಣ ಈ ಭ್ರಮಾಲೋಕದಲ್ಲೇ ತನ್ಮಯವಾಗಿ, ಹೊರಜಗತ್ತನ್ನು ಸಂಪೂರ್ಣವಾಗಿ ಮರೆಯುತ್ತಾನೆ. ಕೊನೆಗೆ ತನ್ನ ದೇಹವನ್ನೇ ನಿರ್ಲಕ್ಷಿಸುತ್ತಾನೆ. ಊಟ, ತಿಂಡಿ, ಸ್ನಾನ, ನಿದ್ರೆ, ಮಾನ, ಮರ್ಯಾದೆ ಎಲ್ಲವನ್ನೂ ತೊರೆಯುತ್ತಾನೆ. ಸರಳ ಇಚ್ಛಿತ್ತ ನಿಧಾನ ವಿಷವಾದರೆ, ಇದು ಶೀಘ್ರ ವಿಷ. 2–3 ವರ್ಷಗಳಲ್ಲೇ ರೋಗಿ ಮನುಷ್ಯ ಲಕ್ಷಣವನ್ನು ಕಳೆಮಕೊಳ್ಳುತ್ತಾನೆ.

ಪ್ರಾರಂಭದಲ್ಲೇ ನೀಡುವ ಚಿಕಿತ್ಸೆ ಫಲಕಾರಿ. ನಂತರ ಕೆಲಸಕ್ಕೆ ಹಾಕಿ ಉಪಯುಕ್ತ ಸ್ಥಿತಿಗೆ ತರಬಹುದು.

ನಾಚಿಕೆಯ ನೀಲಾಂಬರಿ

ನೀಲಾಂಬರಿ ಬಿ.ಎ. ಮೊದಲ ವರ್ಷದಲ್ಲಿ ಫೇಲಾದಾಗ, ಬೇಸರ ಪಡುವ ಬದಲು ಸಮಾಧಾನಪಟ್ಟರು, ಅವಳ ತಾಯಿ ಸರೋಜಮ್ಮ. ಹದಿನಾರು ತುಂಬಿದ, ನೋಡುವವರ ಕಣ್ಣಿಗೆ ಹಬ್ಬವಾಗಿದ್ದ ಹಸಿಮೈನ ಹುಡುಗಿ ಕಾಲೇಜಿಗೆ ಹೋಗುವುದು ಅವರಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ ನೀಲಾಂಬರಿಯ ಹಟ, ಅದಕ್ಕೆ ಅವಳ ತಂದೆಯ ಕುಮ್ಮಕ್ಕು ಇವುಗಳ ಮುಂದೆ ಅವರ ಮಾತು ನಡೆದಿರಲಿಲ್ಲ. ಕಾಲೇಜು ಮೆಟ್ಟಿಲು ಹತ್ತಿದ್ದರೂ, ಬಡತನದಿಂದ ಓದು ಮುಂದುವರಿಸಲಾಗದೆ ಬ್ರಾಕೆಟ್ಟಿನೊಳಗೇ ಬಿ.ಎಸ್ಸಿ. ಎಂದು ಬರೆದು ತೃಪ್ತಿಪಟ್ಟುಕೊಂಡಿದ್ದ ಭೀಮಯ್ಯನವರಿಗೆ, ತಮ್ಮ ಮಗಳಾದರೂ ಪದವೀಧರೆಯಾಗಬೇಕೆಂಬ ಆಸೆ. ಅದಕ್ಕೆ ತಕ್ಕಂತೆ ಎಲ್ಲೂ ಫೇಲಾಗದೆ ಐವತ್ತು ಅರವತ್ತು ಮಾರ್ಕು ತೆಗೆದುಕೊಂಡು ಬಿ. ಎ ಗೆ ಸೇರುತ್ತೇನೆ ಎಂದಿದ್ದಾಗ, ಹೆಂಡತಿಯ ವಿರೋಧವನ್ನು ಕಂಡರೂ, ಊಂ ಸೇರಿಕೋ ಎಂದಿದ್ದರು. 'ಅವಳು ಬಿ.ಎ. ಓಗ್ಲಿ. ಆಮೇಲೆ ಎಂ.ಎ. ನೋ, ಎಂ.ಬಿ.ಬಿ.ಎಸ್ಸೋ ಓದಿರೋ ಗಂಡು ಬೇಕು ಅಂತಾಳೆ. ನಮ್ಮ ಜನದಲ್ಲಿ ಯಾರಿದಾರೆ ಅಂಪ್ರೆ ಅಷ್ಟು ಓದಿಕೋರು ಸುಮ್ನೆ ಒಳ್ಳೆ ಗಂಡು ನೋಡಿ ಮದುವೆ ಮಾಡಿಬಿಡೋಣ ಅಂಪ್ರೆ', ಎಂದು ಸರೋಜಮ್ಮ ಪರಿಪರಿಯಾಗಿ ಹೇಳಿದ್ದರು. ಅವರ ಮಾತು ಕೇಳದೆ ಓದು ಮುಂದುವರಿಸಿದಳು.....ಅಂದು ನೀಲಾಂಬರಿ ಊಟಮಾಡದೆ ಕಣ್ಣೀರು ಸುರಿಸಿ ಬಿಮ್ಮನೆ ಕುಳಿತಾಗ, ಸರೋಜಮ್ಮನೊಂದಿಗೆ ಭೀಮಯ್ಯನವರೂ ಆತಂಕ ಪಟ್ಟರು. 'ಇದೇನು ಮಗು ಇಷ್ಟಕ್ಕೆಲ್ಲಾ ಇಷ್ಟೊಂದು ದುಃಖ ಪಟ್ಟರೆ ಹೇಗೆ. ಒಂದ್ಸಾರಿ ಫೇಲಾಗೋದ್ರೆ ಪ್ರಪಂಚ ಮುಳುಗೋಯ್ತೆ. ಈ ಹೊತ್ತು ಬುದ್ಧಿವಂತರು, ಪ್ರೊಫೆಸರ್‌ಗಳು ಅನ್ನಿಸಿಕೊಂಡವರೂ, ತಮ್ಮ ಕೆರಿಯರ್‌ನಲ್ಲಿ ಫೇಲಾಗಿರ್ತಾರೆ. ಸೆಪ್ಟಂಬರಿಗೆ ಕಟ್ಟಿ ಪಾಸ್ ಮಾಡಿಕೊಂಡರಾಯಿತು ಏಳಮ್ಮ ಊಟಮಾಡು' ಎಂಬ ಸಮಾಧಾನದ ಮಾತುಗಳೆಲ್ಲಾ ವ್ಯರ್ಥವಾದುವು. ವಾರವಾಯಿತು, ತಿಂಗಳಾಯಿತು. ನೀಲಾಂಬರಿ ಮನೆಬಿಟ್ಟು ಹೊರ ಬರಲಿಲ್ಲ. ಬೊಂಬೆಯಂತೆ, ನಿರ್ಜೀವ ಕಣ್ಣುಗಳನ್ನು ರೆಪ್ಪೆ ಬಡಿಯದೆ ತೆರೆದಿಟ್ಟಿರುತ್ತಾಳೆ. ಆರೆ ತೆರೆದ ಬಾಯಿಂದ ಜೊಲ್ಲು ಸುರಿಯುತ್ತಿದ್ದರೂ ಅರಿವಿಲ್ಲ. ಬಲವಂತವಾಗಿ ಹಣ್ಣಿನ ಚೂರನ್ನೋ, ಬಿಸ್ಕತ್ತಿನ ಚೂರನ್ನೋ ಇಟ್ಟರೆ ನಾಲ್ಕು ಬಾರಿ ಅಗಿದು ಸುಮ್ಮನಾಗುತ್ತಾಳೆ. ಅದನ್ನು ನುಂಗುವುದಿಲ್ಲ. ಬಟ್ಟೆ ಬರೆಯ ಲಕ್ಷ್ಯವಿಲ್ಲ. ಮಗಳ ಈ ಸ್ಥಿತಿಯನ್ನು ಕಂಡು ಸರೋಜಮ್ಮ ಗೋಳೋ ಎಂದು ಅತ್ತರು. ಫೇಲಾಗಿದ್ದನ್ನೇ ಮನಸ್ಸಿಗೆ ಹಚ್ಚಿಕೊಂಡಿದ್ದಾಳೆ. ಅವಮಾನ ನಾಚಿಕೆಯಿಂದ ಹೇಗೆ ಗುಬ್ಬಚ್ಚಿಯಾಗಿದ್ದಾಳೆ ಎಂದುಕೊಂಡ ಭೀಮಯ್ಯ ಕೊನೆಗೆ ಗಾಬರಿಯಾದರು. ಮನೆ ವೈದ್ಯರನ್ನು ಕರೆತಂದು ತೋರಿಸಿದರು 'ಫೇಲಾಗಿ ಅವಳ ಮಿದುಳಿಗೆ ಶಾಕ್ ಆಗಿಬಿಟ್ಟಿದೆ. ನನಗೆ ಮಾನಸಿಕ ಆಸ್ಪತ್ರೆಯಲ್ಲಿ ಅನುಭವಸ್ಥ ವೈದ್ಯರೊಬ್ಬರು ಗೊತ್ತು. ಅವರಿಗೆ ನಾನು ಪತ್ರಬರೆದು ಕೊಡುತ್ತೇನೆ. ಹೋಗಿ ಮುತುವರ್ಜಿಯಿಂದ ಚಿಕಿತ್ಸೆ ಮಾಡುತ್ತಾರೆ' ಎಂಬ ಅವರ ಸಲಹೆಯಂತೆ ನೀಲಾಂಬರಿ

ಯನ್ನು ಮಾನಸಿಕ ಆಸ್ಪತ್ರೆಗೆ ಸೇರಿಸಲಾಯಿತು ಆಕೆ ಬಿಗುವಿಳಿತದ ಇಚ್ಛಿತ್ತ (Cata-tonic Schiz) ವಿಕಲತೆಯಿಂದ ಬಳಲುತ್ತಿದ್ದಾಳೆಂದು ಅರಿತು, ತತ್‌ಕ್ಷಣದಿಂದಲೇ ವಿದ್ಯುತ್‌ಕಂಪನ ಚಿಕಿತ್ಸೆ ಮತ್ತು ಔಷಧ ಚಿಕಿತ್ಸೆಯನ್ನು ಪ್ರಾರಂಭಿಸಲಾಯಿತು. ಎರಡು ವಾರದೊಳಗೇ ನೀಲಾಂಬರಿ ನಗುನಗುತ್ತಾ ಮಾತಾಡಿ, ಅಡುಗೆಮಾಡಲು ತಾಯಿಗೆ ಸಹಾಯ ಮಾಡುವಷ್ಟರ ಮಟ್ಟಿಗೆ ಉತ್ತಮಗೊಂಡಳು. ಬಿಗುವಿಳಿತದ ಇಚ್ಛಿತ್ತ ವಿಕಲತೆ ಯಲ್ಲಿ ಒಂದು ತುದಿಯಲ್ಲಿ ಸ್ಟೂಪರ್ ಇದ್ದರೆ, ಇನ್ನೊಂದು ತುದಿಯಲ್ಲಿ ಉದ್ರೇಕ ಸ್ಥಿತಿ (excitement) ಇರುತ್ತದೆ. ಉದ್ರೇಕ ಸ್ಥಿತಿಯಲ್ಲಿ ರೋಗಿ ತನಗೂ, ತನ್ನ ಸುತ್ತ ಮುತ್ತಲಿನವರಿಗೂ ಅಪಾಯಕಾರಿಯಾಗುತ್ತಾನೆ. ಇದ್ದಕ್ಕಿದ್ದಂತೆ, ಯಾವ ಸೂಚನೆಯೂ ಇಲ್ಲದೆ ಹಿಂಸಾಚಾರ, ವಿಧ್ವಂಸಕ ಕಾರ್ಯದಲ್ಲಿ ತೊಡಗಬಹುದು. ಹುಚ್ಚುಚ್ಚಾಗಿ ಮಾತಾಡುವುದು, ಅಳುವುದು ಅಥವಾ ಕೇಕೆಹಾಕಿ ನಗುವುದು, ಉಟ್ಟ ಬಟ್ಟೆ ಹರಿದು, ಆರೆ ಬೆತ್ತಲೆ ತಿರುಗುವುದು, ನಾಚಿಕೆ, ಹೇಸಿಕೆ ಇಲ್ಲದೆ ಕಂಡಲ್ಲಿ ಮಲಮೂತ್ರ ಮಾಡು ವುದು ಕಂಡು ಬರುತ್ತದೆ. ಸ್ಟೂಪರ್ ಆಗಲೀ ಉದ್ರೇಕ ಸ್ಥಿತಿಯಾಗಲೀ ವಿದ್ಯುತ್ ಕಂಪನ ಚಿಕಿತ್ಸೆ ಮತ್ತು ಔಷಧ ಚಿಕಿತ್ಸೆಯಿಂದ ಬಹುಬೇಗ ಹತೋಟಿಗೆ ಬಂದು ಬಿಡುತ್ತದೆ.

ಮೂದೇವಿ ಮುರಳಿಯ ಸರಳ ಇಚ್ಛಿತ್ತ, ಹಲ್ಲು ಕಿಸಿಯುವ ಹನುಮಂತನ ಹರೆಯಿ ಚ್ಛಿತ್ತ, ನಾಚಿಕೆಯ ನೀಲಾಂಬರಿಯ ಬಿಗುವಿಳಿತ ಇಚ್ಛಿತ್ತ. ಎಲ್ಲಾ ಇಚ್ಛಿತ್ತ ವಿಕಲತೆ ರೋಗದ ನಾನಾ ಮುಖಗಳು. ವಂಶಪಾರಂಪರ್ಯವಾಗಿ ಬರುವ ಕೆಲವು ನ್ಯೂನತೆಗಳಿಂದ ಮಿದುಳಿನಲ್ಲಿ ಕೆಲವು ರಾಸಾಯನಿಕ ಬದಲಾವಣೆಗಳಾಗಿ ಹದಿನಮ್ಸಿನ ಕಾಲಕ್ಕೆ ರೋಗ ಚಿಹ್ನೆಗಳು ಕಾಣಿಸಿಕೊಳ್ಳುತ್ತವೆ. ರೋಗ ಸ್ವಲ್ಪ ಸ್ವಲ್ಪವಾಗಿ ಕಾಣಿಸಿಕೊಳ್ಳಬಹುದು (ಮುರಳಿಗಾದಂತೆ) ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳಬಹುದು (ಉದಾ. ಹನುಮಂತ) ಅಥವಾ ಯಾವುದಾದರೂ ಅಹಿತ ಘಟನೆ ಜರುಗಿ ಅದರ ಫಲವೋ ಎಂಬಂತೆ ಬರಬಹುದು, (ಫೇಲಾದ ನೀಲಾಂಬರಿ). ಅದುವರೆಗೆ ಎಲ್ಲರಂತೆ ಇದ್ದ ವ್ಯಕ್ತಿ ಿಕ್ಕಲು ತಿಕ್ಕಲಾಗಿ ಆಡ ತೊಡಗಿದರೆ, ಎಲಾ ಇವನ ಇದ್ಯಾಕೆ ಹೀಗೆ ಮಾಡ್ತಾನೆ ಎನ್ನುವಂತೆ ಆದಾಗ, ಸಹಜತೆ ಮೀರಿ ಅಸಂಬದ್ಧವಾಗಿ ನಡೆದುಕೊಂಡಾಗ, ತಡಮಾಡದೆ, ಮಂತ್ರ, ತಂತ್ರ, ಪೂಜೆ ಪುನ ಸ್ಕಾರಗಳಲ್ಲಿ ಕಾಲ, ಹಣವ್ಯಯ ಮಾಡದೆ ಮನೋವೈದ್ಯರನ್ನು ಕಂಡು ಸಲಹೆ ಪಡೆಯ ಬೇಕು. ಪ್ರಾರಂಭದಲ್ಲೇ ಚಿಕಿತ್ಸೆ ನಡೆಸಿದರೆ ಹೆಚ್ಚು ಹೆಚ್ಚು ಗುಣಕಾಣಲು ಸಾಧ್ಯ ವಾಗುತ್ತದೆ.

ಮನೆಯಲ್ಲಿ ಯಾವಾಗಲೂ ಜಗಳವಾಡುವ ತಂದೆತಾಯಿಗಳು, ಎತ್ತು ಏರಿಗೆಳೆದರೆ ಎಮ್ಮೆ ನೀರಿಗೆಳೆಯಿತು ಎನ್ನುವಂತೆ ಅಪ್ಪ ಒಂದು ಹೇಳಿದರೆ ಅಮ್ಮ ಅದಕ್ಕೆ ತದ್ವಿರುದ್ಧ ಹೇಳುವುದು, ಅವರನರೇ ದೂಷಣೆ ಮಾಡಿಕೊಂಡು ಜೈಯಾಡುವುದು, ಅತಿ ಶಿಸ್ತು ಶಿಕ್ಷೆ ಅಥವಾ ಅತಿ ಮುದ್ದು ಮಾಡುವುದು, ಹೊಟ್ಟೆಕಿಚ್ಚಿನ ಒಡಹುಟ್ಟಿದವರು, ಹೀಯಾಳಿಸಿ ನಗುವ ನೆರೆ ಹೊರೆ—ಈ ರೀತಿಯ ಅಹಿತ ವಾತಾವರಣ ಅಂತರ ಗಂಗೆಯಂತೆ ಒಳಗಿರುವ

ರೋಗ ಹೊರ ಬರುವಂತೆ ಮಾಡುವುದಲ್ಲದೆ, ಬೇಗ ವಾಸಿಯಾಗುವುದಕ್ಕೆ ಅಡ್ಡಗಾಲು ಹಾಕುತ್ತದೆ.

ಆದ್ದರಿಂದ ಮನೆಯಲ್ಲಿ ಸಂತೋಷ, ಸರಸವಾದ ವಾತಾವರಣ, ಹೊಂದಿಕೊಂಡು ಹೋಗುವ ಪ್ರವೃತ್ತಿ, ಇದ್ದರೆ ಖಾಯಿಲೆ ಬೇಗ ವಾಸಿಯಾಗುತ್ತದೆ. ವೈದ್ಯರು ಸಾಕು ನಿಲ್ಲಿಸಿ ಎಂದು ಹೇಳುವವರೆಗೆ ಔಷಧೋಪಚಾರ ನಡೆಯಬೇಕು. ಜೊತೆಗೆ ರೋಗಿಯೂ ತಾನೇ ದೈನಂದಿನ ಚಟುವಟಿಕೆಗಳನ್ನು ನಡೆಸುವಂತೆ ಪ್ರೋತ್ಸಾಹ ನೀಡಬೇಕು. ಖಾಯಿಲೆ ಮನುಷ್ಯ ವಿಶ್ರಾಂತಿ ತೆಗೆದುಕೊಳ್ಳಲಿ ಎಂದು ಬಿಟ್ಟರೆ ಆತ ಸೋಮಾರಿಯಾಗಿ, ಖಾಯಿಲೆ ಉಲ್ಬಣಗೊಳ್ಳುತ್ತದೆ ಎಂಬುದನ್ನು ಮರೆಯಬಾರದು.

ಹುಚ್ಚು ಮಂಕು ಚಿತ್ತ ವಿಕಲತೆ

ಮಗನ ಉಪಟಳದಿಂದ ಬೇಸತ್ತ ತಂದೆ ತಾಯಿ :

'ನಮಗೆ ಸಾಕಾಗಿ ಹೋಗಿದೆ ಡಾಕ್ಟರೇ, ಕೊನೇ ಪ್ರಯತ್ನ ಅಂತ ಇವನನ್ನು ಮೆಂಟಲ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದೇವೆ. ಅಡ್ಮಿಟ್ ಮಾಡಿಕೊಂಡು ಬಿಡಿ. ವಾಸಿಯಾದರೆ ಕರೆದುಕೊಂಡುಹೋಗ್ತೇವೆ. ಇಲ್ಲಿದ್ದೆ ಇವನು ಇಲ್ಲೇ ಸತ್ತರೂ ನಮಗೆ ವ್ಯಸನವಿಲ್ಲ, ಹುಡುಗನ ತಂದೆ ರಾಮಯ್ಯ ನುಡಿದಾಗ, ಮಗನ ಖಾಯಿಲೆಯ ಉಪಟಳ ದಿಂದ ನೊಂದು ಈ ರೀತಿ ಮಾತಾಡುತ್ತಿದ್ದಾರೆಂದು ವೈದ್ಯರಿಗೆ ಅರ್ಥವಾಗಿತ್ತು. ಹುಡು ಗನ ತಾಯಿ ಲಲಿತಮ್ಮ ಬುಳಬುಳನೆ ಅಳುತ್ತಾ, ಕಣ್ಣು ಮೂಗು ಒರೆಸಿಕೊಂಡು 'ಏನಾ ದರೂ ಮಾಡಿ ಡಾಕ್ಟ್ರೆ. ಇಲ್ಲಿ ಎಷ್ಟೇ ದಿವಸ ಇರಬೇಕಾದ್ರೂ ಪರವಿಲ್ಲ. ನಮ್ಮ ಹುಡು ಗನ ಖಾಯಿಲೆ ವಾಸಿ ಮಾಡಿ ಕೊಡಿ' ಎಂದರು. ವೈದ್ಯರು ತಂದೆತಾಯಿಗಳಿಬ್ಬರ ಬೇಸರ, ದುಃಖಕ್ಕೆ ಕಾರಣನಾದ ಮಗನತ್ತ ನೋಡಿದಾಗ, ಆತ ನಿರ್ಲಿಪ್ತನಾಗಿ ಗಣೇಶನಂತೆ ಕೂತಿದ್ದ. ವಯಸ್ಸಿಗೆ ತಕ್ಕಂತ ಬೆಳವಣಿಗೆ. ತುಟಿಯ ಮೇಲೆ ಚಿಗುರುಮೀಸೆ. ಸಫಾರಿ ಸೂಟು. ಬಲಗೈಗೆ ಆಟೋಮೆಟಿಕ್ ವಾಚು. ನೋಡುವವರಿಗೆ ಪರವಾಗಿಲ್ಲ ಹುಡುಗ ಎನ್ನುವಂತಹ ಇವನಿಗೆ ಏನು ಗುನುಗು ಎಂದುಕೊಂಡರು. 'ನಿಮಗೆ ಅಷ್ಟೊಂದು ಬೇಜಾರು ಆಗೋ ಹಾಗೆ ಈ ಮಗರಾಮ ಏನು ಮಾಡ್ತಾನೆ' ಎಂದು ತಂದೆಯನ್ನು ಪ್ರಶ್ನಿಸಿದರು.

'ಅವನು ಮಾಡೋ ಕೆಲಸಗಳು ಒಂದೇ ಎರಡೇ. ಎಲ್ಲಾ ಬೇಡವಾದವ್ದೆ. ಬೇಡಾಂ ದರೂ ಸೈಕಲ್ ತೆಗೆದುಕೊಂಡು ಹೊರಟು ಬಿಟ್ಟ ಅಂದರೆ, ಹತ್ತು ನಿಮಿಷದಲ್ಲಿ ಊರೆಲ್ಲಾ ಒಂದು ರೌಂಡ್ ಹಾಕಿ ಬರ್ತಾನೆ. ಸುಮ್ನೆ ಸುಮ್ನೆ ಸೈಕಲ್‌ನ ಒಂದು ಭಾಗ ಕಳ ಚೋದು, ಹೊಸದು ಹಾಕ್ಸೋದು. ಅಂಗಡಿಯವನು ದುಡ್ಡು ಕೇಳಿದ್ರೆ ನಮ್ಮಪ್ಪ ಕೊಡು

ತ್ತಾನೆ ಅನ್ನೋಮ. ಅವರಿವರೊಂದಿಗೆ ವಾದ ಮಾಡೋದು, ಜಗಳ ಕಾಯೋದು, ಮನೆಯಲ್ಲಿ ನಿಂತಲ್ಲಿ ನಿಲ್ಲೋ ಹಾಗಿಲ್ಲ. ಹೇಳಿದ ಮಾತು ಕೇಳೋ ಹಾಗಿಲ್ಲ. ಹಗಲೂ ರಾತ್ರಿ ರೇಡಿಯೋ, ಟೇಪ್‌ರಿಕಾರ್ಡರನ್ನು ಕಿವಿ ಕಿತ್ತೋಗೋ ಹಾಗೆ ಜೋರಾಗಿ ಹಾಕೋದು. ಬೇಡಪ್ಪಾ, ಹೀಗೆಲ್ಲಾ ಮಾಡಬಾರದು ಅಂದರೆ, ಅಪ್ಪ ಅಮ್ಮ ಅಂತ ಸ್ವಲ್ಪ ಗೌರವವನ್ನೂ ಕೊಡದೆ ನಮ್ಮನ್ನೆಲ್ಲಾ ಬಾಯಿಗೆ ಬಂದಂತೆ ಬಯ್ಯೋದು. ದಿನಕ್ಕೆ ಎರಡು ಸಿನೇಮಾ ನೋಡಬೇಕು. ಮೊದಲು ಎರಡು ರೂಪಾಯಿ ಕೊಟ್ಟ ಕೆಳಗೆ ಹೋಗುತ್ತಿದ್ದವನು, ಈಗ ಬಾಲ್ಕನಿಗೇ ಹೋಗುತ್ತಾನೆ. ಅವನು ಕೇಳೋ ಸಾಮಾನುಗಳಿಗೆ ಮಿತಿಯೇ ಇಲ್ಲ; ಎಚ್‌ಎಂಟಿ ಗೋಲ್ಡ್‌ವಾಚ್ ಬೇಕು ಅಂತಾನೆ ಬಜಾಜ್ ಸ್ಕೂಟರ್ ಬೇಕು ಅಂತಾನೆ. ಬೇಕೆಂದರೆ ಈಗಲೇ ಮದುವೆ ಮಾಡ್ಕೊಳ್ಳೋ ದಕ್ಕೂ ತಯಾರು............'

ರಾಮಯ್ಯನವರ ವಿವರಣೆ. ಅವರ ಮಗ 'ಮೇನಿಯ' ಎಂದು ಕರೆಯಲಾಗುವ ಚಿತ್ತ ವಿಕಲತೆಯಿಂದ ಬಳಲುತ್ತಿದ್ದಾನೆಂದು ಸ್ಪಷ್ಟವಾಗಿತ್ತು. ಅತಿ ಹಾಗೂ ಅನಗತ್ಯ ಚಟು ವಟಿಕೆ, ಮಾತು,ವಿನಾಕಾರಣ ಅತಿಯಾದ ಸಂತೋಷ, ಜೇಬಲ್ಲಿ ಐದುಪೈಸೆ ಇರದಿದ್ದರೂ, ಇಡೀ ಪ್ರಪಂಚವನ್ನು ಕೊಳ್ಳುತ್ತೇನೆ ಎನ್ನುವ ಧಿಮಾಕು. ಆಕಾಶದಷ್ಟು ಎತ್ತರದ ಆಸೆ, ಕೆಲವು ಸಾರಿ ವಿಧ್ವಂಸಕ ಕೃತ್ಯ,ಹಿಂಸಾಚಾರವೂ ಕಂಡು ಬರಬಹುದು. ಈ ಖಾಯಿಲೆ ಸಾಮಾನ್ಯವಾಗಿ ಕಾಣಿಸಿಕೊಳ್ಳುವುದು ಹದಿನೆತ್ತು ವರ್ಷ ವಯಸ್ಸಿನ ನಂತರ. ಆದರೆ ಹರೆಯದವರಲ್ಲಿ ಅಪರೂಪಕ್ಕೆ ಕಾಣಿಸಿಕೊಳ್ಳುತ್ತದೆ. ಹಗಲಿನನಂತರ ರಾತ್ರಿ ಬರುವಂತೆ ಮೇನಿಯಾ ನಂತರ ಖಿನ್ನತೆಯೂ ಬರುತ್ತದೆ. ಆದ್ದರಿಂದಲೇ ಈ ಖಾಯಿಲೆ ಜೋಡಿ ಯನ್ನು ಹುಚ್ಚು-ಮಂಕು-ವಿಕಲತೆ (Manic Depressive Psychosis) ಎನ್ನುತ್ತಾರೆ. ಖಿನ್ನತೆ ಬಂದಾಗ, ಜಡತ್ವ ಆವರಿಸಿ, ವಿನಾಕಾರಣ ದುಃಖ, ಬೇಸರ, ನಿರಾಸಕ್ತಿ, ಆತ್ಮಹತ್ಯೆಯ ಯೋಚನೆಗಳು, ನಿದ್ರಾಹೀನತೆ, ನಿರಾಶೆ ವ್ಯಕ್ತಿಯನ್ನು ಕಾಡುತ್ತವೆ. ಸ್ವಲ್ಪ ದಿವಸಗಳಿದ್ದು ತನ್ನಷ್ಟಕ್ಕೆ ತಾನು ಹೋಗುವ ಈ ಸ್ಥಿತಿಗಳ ಮಧ್ಯೆ ವ್ಯಕ್ತಿ ಪೂರ್ಣ ಆರೋಗ್ಯವಾಗಿರುತ್ತಾನೆ.

ರಾಮಯ್ಯ ಲಲಿತಮ್ಮನವರನ್ನು ಸುತ್ತು ಬಳಸಿ ಕೇಳಿದ ಮೇಲೆ ಅವರ ಮಗ, ದಾಂಧಲೆ ನಡೆಸುವ ಕೆಲವು ದಿನಗಳ ನಂತರ, ಮಂಕಾಗಿ, ಯಾವಾಗಲೂ ತನ್ನ ರೂಮಾ ಯಿತು, ತಾನಾಯಿತು. ವೇಷಭೂಷಣಗಳ ಬಗ್ಗೆ ಅಕ್ಕರೆ ಇಲ್ಲ. ಊಟ ಬೇಡ. ಒತ್ತಾ ಯಿಸಿದರೆ ಅಳುವುದು ಮಾಡುತ್ತಾನೆ ಎಂದು ತಿಳಿಯಿತು.

ವೈದ್ಯರು ತಂದೆ ತಾಯಿಗಳಿಗೆ ಧೈರ್ಯ ಹೇಳಿದರು. ಈ ಹುಚ್ಚು ಮಂಕು ರೋಗಕ್ಕೆ ಈಗ ಔಷಧದ ಅಂಕುಶ ಬಂದಿದೆ. ಆದ್ದರಿಂದ ಅವರ ಮಗ ಎಲ್ಲರಂತೆ ಆಗಲು ಸಾಧ್ಯ ವಿದೆ ಎಂದಾಗ ಅವರ ಮುಖ ಅರಳಿದವು.

ವಿವಿಧ ರಕ್ತ,ಮೂತ್ರ ಹಾಗೂ ಹೃದಯ ಪರೀಕ್ಷೆಗಳ ನಂತರ ಆತನಿಗೆ ಲಿಥಿಯಂ ಲವಣವನ್ನು ದಿನವೂ ಕೊಡಲಾಯಿತು. ಕೆಲವೇ ದಿವಸಗಳಲ್ಲಿ ಉತ್ತಮಗೊಂಡ. ಈಗ ಎರಡು ತಿಂಗಳಿಗೊಮ್ಮೆ ರಕ್ತದಲ್ಲಿ ಲಿಥಿಯಂ ಪ್ರಮಾಣದ ಪರೀಕ್ಷೆಗೆ ಆಸ್ಪತ್ರೆಗೆ ಬರಬೇಕಾದ್ದನ್ನು ಬಿಟ್ಟರೆ, ಆತ ಎಲ್ಲರಂತಿದ್ದಾನೆ. ಹುಚ್ಚು ಮಂಕು ರೋಗ ಬರಲು ಮಿದುಳಿನಲ್ಲಿ, ನರತಂತುಗಳಲ್ಲಿ ಸಂವೇದನೆಯ ಸಾಗಾಟದಲ್ಲಿ ಸಹಕರಿಸುವ ಕೆಲವು ರಾಸಾಯನಿಕ ವಸ್ತುಗಳ ಪ್ರಮಾಣದಲ್ಲಿನ ವ್ಯತ್ಯಾಸವೇ ಕಾರಣವಿರಬಹುದೆಂಬ ಊಹೆ ಇದೆ. ಅಲ್ಲದೆ ಈ ಖಾಯಿಲೆ ವಂಶ ಪಾರಂಪರ್ಯವಾಗಿ ಕೂಡ ಬರುವುದುಂಟು. ಲಿಥಿಯಂ ಲವಣ ಚಿಕಿತ್ಸೆಯಿಂದ ಖಾಯಿಲೆ ಬರುವುದನ್ನು ತಡೆಗಟ್ಟಬಹುದು.

ಭಾಗ-೨

ಹದಿವಯಸ್ಸು

ಪೂರ್ಣಾವಲಂಬನೆಯ ಬಾಲ್ಯ ಮತ್ತು ಸ್ವಾವಲಂಬನೆಯ ಪ್ರೌಢತೆಗಳ ಮಧ್ಯೆ ಬರುವ ಬವಲಾವಣೆಯ ಕಾಲವೇ ಹದಿವಯಸ್ಸು. ಸಾಮಾನ್ಯವಾಗಿ ಹನ್ನೆರಡನೇ ವರ್ಷದಿಂದ ಹಿಡಿದು ಹದಿನೆಂಟರ ವರೆಗಿನ ಅವಧಿಯನ್ನು ಹದಿವಯಸ್ಸೆಂದು ತಜ್ಞರು ಒಪ್ಪುತ್ತಾರೆ. ವ್ಯಕ್ತಿಯ ಜೀವನದಲ್ಲಿ ಇದೊಂದು ವೈವಿಧ್ಯಮಯ, ವಿಶಿಷ್ಟ ಹಾಗೂ ಅಷ್ಟೇ ಪ್ರಾಮುಖ್ಯವಾದ ಕಾಲ.

ಹದಿವಯಸ್ಸು ಮನುಷ್ಯನಲ್ಲಿ ಮಾತ್ರ ಕಂಡು ಬರುವುದು ಒಂದು ವೈಶಿಷ್ಟ್ಯ. ಪ್ರಾಣಿಗಳಲ್ಲಿ ಬಾಲ್ಯ ಸ್ವಲ್ಪ ಕಾಲ ಮಾತ್ರವಿದ್ದು, ಬೇಗ ಪ್ರೌಢತೆಗೆ ದಾರಿ ಮಾಡಿಕೊಡುತ್ತದೆ. ಪ್ರಾಣಿಗಳು ತಮ್ಮ ಮರಿಗಳ ಪಾಲನೆ-ಪೋಷಣೆ ಮಾಡಿದರೂ, ಮರಿಗಳು ನಮ್ಮ ಮಕ್ಕಳಂತೆ ಅಸಹಾಯಕ ಪೂರ್ಣ ಪರಾವಂಬಿಗಳಾಗಿರುವುದಿಲ್ಲ. ಹುಟ್ಟಿದ ಕೆಲವೇ ಘಂಟೆಗಳು ಅಥವಾ ದಿವಸಗಳಲ್ಲಿ ಪ್ರಕೃತಿಯ ವೈಪರೀತ್ಯಗಳನ್ನು ಎದುರಿಸಲು ಸಜ್ಜಾಗಿರುತ್ತವೆ ಜೀವಿಸಲು ಹೋರಾಡುವುದನ್ನು ಪ್ರಕೃತಿಯೇ ಇವುಗಳಿಗೆ ಕಲಿಸುತ್ತದೆ. ಆದರೆ ಮಾನವ ಶಿಶು ಅಸಹಾಯಕತೆಯ ಪ್ರತಿರೂಪ. ಪ್ರಪಂಚದಲ್ಲಿ ತನ್ನ ಕಾಲ ಮೇಲೆ ನಿಲ್ಲಲು ಹಲವಾರು ವರ್ಷಗಳೇ ಬೇಕಾಗುತ್ತವೆ. ಈ ಅವಧಿಯಲ್ಲಿ ತಂದೆತಾಯಿಗಳ ಪ್ರೀತಿ ಮಮತೆ, ಪೋಷಣೆ ರಕ್ಷಣೆಗಳೂ, ಹಿರಿಯರ ತರಪೇತಿ ಮಾರ್ಗದರ್ಶನ, ಸುತ್ತಮುತ್ತಲಿನವರ ಸಹಾಯ ಪ್ರೋತ್ಸಾಹಗಳೂ ಅವಶ್ಯಕ.

ಹದಿವಯಸ್ಸಿನ ಅವಧಿಯನ್ನು ಮೂರು ಹಂತಗಳಾಗಿ ವಿಭಜಿಸಬಹುದು. ಮೈನೆರೆತ, ಪೂರ್ವಾರ್ಧ ಹದಿವಯಸ್ಸು ಹಾಗೂ ಉತ್ತರಾರ್ಧ ಹದಿವಯಸ್ಸು.

ಮೈನೆರೆತ : ಚೋದನಿಕಗಳ ಪ್ರಭಾವದಿಂದ ಮೊಗ್ಗು ಹೂವಾಗಿ ಅರಳುತ್ತದೆ. ಹೆಣ್ಣುಗಂಡಿನ ಅಂಗಾಂಗಗಳು ತಮ್ಮ ವಿಶಿಷ್ಟತೆಗೆ ಅನುಗುಣವಾಗಿ ವಿಕಸಿತಗೊಳ್ಳುತ್ತವೆ. ಹುಡುಗಿಯರಲ್ಲಿ ಹತ್ತರಿಂದ ಹದಿಮೂರು ವಯಸ್ಸಿನ ಅವಧಿಯಲ್ಲಿ ಋತುಮತಿಯಾಗು

ವುದು, ಸ್ತನಗಳ ಬೆಳವಣಿಗೆ, ಕಂಕುಳು, ಹೊಟ್ಟೆಯ ಕೆಳಗೆ ಕೂದಲುಗಳು ಕಾಣಿಸಿಕೊಳ್ಳುವುದು, ಹಾಗೂ ದೇಹದ ಅಂಕುಡೊಂಕುಗಳು ಮೂಡುತ್ತವೆ. ಹುಡುಗರಲ್ಲಿ ಧ್ವನಿ ಗಡುಸಾಗುವುದು, ಮೀಸೆ ಗಡ್ಡ ಮೊಳೆಯುವುದು, ಕಂಕುಳು ಹಾಗೂ ಹೊಟ್ಟೆಯ ಕೆಳಗೆ ಕೂದಲುಗಳು, ಮಾಂಸ ಖಂಡಗಳು ಹುರಿಗೊಳ್ಳುವುದು, ಜನನಾಂಗ ಉದ್ರೇಕಗೊಳ್ಳುವುದು, ವೀರ್ಯ ಸ್ಖಲನ ಹದಿಮೂರರಿಂದ ಹದಿನೇಳು ವರ್ಷಗಳ ಅವಧಿಯಲ್ಲಿ ಕಾಣಿಸಿಕೊಳ್ಳಬಹುದು. ಇಬ್ಬರಲ್ಲೂ ಜನನಾಂಗಗಳು ಪೂರ್ಣ ವಿಕಸನಗೊಳ್ಳುತ್ತವೆ. ಸಂತಾನೋತ್ಪತ್ತಿಗೆ ಸಜ್ಜಾಗುತ್ತವೆ.

ಇದರ ಜೊತೆಗೆ ಶರೀರದ ಉದ್ದ ಗಾತ್ರಗಳು ವಿಸ್ಮಯವಾಗುವಷ್ಟು ವೇಗದಲ್ಲಿ ಹೆಚ್ಚುತ್ತವೆ. "ಹೋದ ವರ್ಷ ನೋಡಿದ್ದಾಗ ಚೋಟುದ್ದ ಇದ್ದ ಈಗ ನೋಡಿದರೆ ಒಳ್ಳೇ ಗಣೇ ಮರದಂಗೆ ಬೆಳೆದು ಬಿಟ್ಟಿದ್ದಾನೆ", "ಕಳೆದ ಸಾರಿ ಕಂಡಾಗ ಲಂಗ ಹಾಕ್ಕೊಂಡು ಕುಂಟೆ ಬಿಲ್ಲೆ ಆಡ್ತಿದ್ದಳು. ಈಗ ಸೀರೆ ಉಟ್ಕೊಂಡು ದೊಡ್ಡ ಹೆಂಗಸಾಗಿ ಬಿಟ್ಟವಳೆ" ಎಂದು ನೋಡಿದವರು ಉದ್ಗರಿಸುವಂತಾಗುತ್ತದೆ.

ಈ ದಿಢೀರ್ ಬದಲಾವಣೆ ಹದಿವಯಸ್ಸಿನವರಲ್ಲಿ ಮಿಶ್ರ ಪ್ರತಿಕ್ರಿಯೆಯನ್ನುಂಟು ಮಾಡುತ್ತದೆ. ನಾನು ದೊಡ್ಡವನಾಗುತ್ತಿದ್ದೇನೆ, ಸ್ವತಂತ್ರನಾಗಿರಬಹುದು. ಎಲ್ಲದಕ್ಕೂ ಹಿರಿಯರ ಅನುಮತಿ ಪಡೆಯುವುದು, ದೊಡ್ಡವರನ್ನು ಅವಲಂಬಿಸುವುದು ನಿಲ್ಲುತ್ತದೆ ಎಂದು ಖುಷಿಯಾದರೆ, ಬೆಳೆದ ಶರೀರ ಚೆನ್ನಾಗಿ ಕಾಣುತ್ತಿದೆಯೋ, ಆಕರ್ಷಣೀಯವಾಗಿದೆಯೋ ಇಲ್ಲವೋ, ಉದ್ದ ಗಾತ್ರ ಸಮ ಪ್ರಮಾಣದಲ್ಲಿದೆಯೋ ಇಲ್ಲವೋ ಮುಂತಾದ ಆತಂಕಗಳು ಕಾಣಿಸಿಕೊಳ್ಳುತ್ತವೆ. ಹುಡುಗರಲ್ಲಿ ಎತ್ತರ, ಸ್ನಾಯುಗಳು ಜನನಾಂಗದ ಗಾತ್ರದ ಬಗ್ಗೆ, ಹುಡುಗಿಯರಲ್ಲಿ ಆಕಾರ, ಸ್ತನಗಳ ಗಾತ್ರ, ಋತು ಸ್ರಾವದ ಬಗ್ಗೆ ಆಸೆ ನಿರಾಶೆಗಳು ವ್ಯಕ್ತವಾಗುತ್ತವೆ. ತಮ್ಮ ಜೊತೆಯವರೊಂದಿಗೆ ಹೋಲಿಸಿಕೊಂಡು ಜಿಜ್ಞಾಸೆ ಪಡುತ್ತಾರೆ. ತಮ್ಮ ಆಸೆ, ಕಲ್ಪನೆಗೆ ತಕ್ಕಂತೆ ತಮ್ಮ ಶರೀರ ವಿಕಾಸಗೊಳ್ಳದಿದ್ದಾಗ, ಆತಂಕ-ಖಿನ್ನತೆಗೆ ಒಳಗಾಗುತ್ತಾರೆ. ತಕ್ಕ ಸಮಾಧಾನ ದೊರೆಯದಿದ್ದರೆ ಆತಂಕ ಹೆಚ್ಚಿ, ಕೀಳರಿಮೆ ಮೂಡಿ, ಕೊನೆಗೆ ಚಂಚಲತೆ ಅವರನ್ನು ಬಾಧಿಸಬಹುದು.

ಶರೀರದ ಹೊರರೂಪ, ಅಂಗಾಂಗಗಳ ಗಾತ್ರ, ಚೆಲುವು, ಬೆಳವಣಿಗೆಯ ಗತಿ ಎಲ್ಲರಲ್ಲೂ ಒಂದೇ ರೀತಿ ಇರುವುದಿಲ್ಲ. ವಂಶಿಕ ಗುಣ, ವಾತಾವರಣ, ಪೋಷಣೆಗಳಿಗೆ ಅನುಗುಣವಾಗಿ ಪ್ರತಿಯೊಬ್ಬರಲ್ಲೂ ಒಂದೊಂದು ರೀತಿಯದಾಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ನಾನು ಉದ್ದ ಅಥವಾ ಕುಳ್ಳ; ಮೀಸೆಗಡ್ಡ ಹುಲುಸಾಗಿ ಬೆಳೆದಿಲ್ಲ, ನಾನು ದುಮ್ಮಿ ಗಿಡ್ಡ ಕೂದಲುಳ್ಳವಳು, ಚಿಕ್ಕ ಸ್ತನಗಳು ಎಂದು ಕೊರಗಿದರೆ ಅರ್ಥವಿಲ್ಲ. ಪ್ರಕೃತಿ ಕೊಟ್ಟ ಶರೀರ. ನನ್ನ ವೈಶಿಷ್ಟ್ಯ ನನಗಿದೆ ಎಂಬ ಅಭಿಮಾನ ಬೆಳೆಸಿಕೊಳ್ಳಬೇಕು. ಚಿತ್ರನಟ ದ್ವಾರಕೀಶ್, ತನ್ನ ಕುಳ್ಳತನ, ಸೊಟ್ಟ ಮೂಗನ್ನೇ ತನ್ನ ಬಂಡವಾಳ ಮಾಡಿಕೊಂಡಿಲ್ಲವೇ?

ಈ ಅವಧಿಯಲ್ಲಿ ಶರೀರದ ಬಗ್ಗೆ ಹದಿವಯಸ್ಸಿನವರ ಗಮನ ಹೆಚ್ಚಾಗುತ್ತದೆ. ಕನ್ನಡಿಯ ಮುಂದೆ ನಿಂತು ಕಾಲವನ್ನು ಮರೆಯುತ್ತಾರೆ. ವಿವಿಧ ಭಂಗಿಗಳಲ್ಲಿ ನಿಂತು ನೋಡಿಕೊಂಡು ಆನಂದಿಸುವುದೋ, ಆತಂಕ ಪಡುವುದೋ ನಡೆದಿರುತ್ತದೆ. ಹುಡುಗ ಕ್ರಾಪು ತಿದ್ದಿ, ಮೀಸೆ ಹುರಿ ಮಾಡಿದರೆ; ಹುಡುಗಿ ಮುಂಗುರುಳು ತಿದ್ದಿ,ತುಟಿಗೆ ಕೆಂಪು, ಕೆನ್ನೆಗೆ ರೂಜು ಬಳಿದು ಕಣ್ಣಿಗೆ ಕಾಡಿಗೆ ಹಚ್ಚುತ್ತಾಳೆ.

ಇಬ್ಬರಿಗೂ ಕಡು ವೈರಿ ಮೊಡವೆಗಳು. ಹರೆಯದಲ್ಲಿ ಚೋದನಿಕಗಳ ಪ್ರಭಾವ ದಿಂದ ಬರುವ ಈ ಮೊಡವೆಗಳು ಸ್ವಾಭಾವಿಕ, ಅನಪಾಯಕಾರಿಯಾದರೂ ಸೌಂದರ್ಯದ ದೃಷ್ಟಿಯಿಂದ ಸಾಕಷ್ಟು ಕಾಟ ಕೊಡುತ್ತವೆ. ಅವನ್ನು ಉಗುರಿನಿಂದ ಬೇರು ಸಹಿತ ಚಿವುಟಿ ಹಾಕುತ್ತೇವೆ ಎನ್ನುವುದು ಅಪಾಯಕಾರಿ. ಅದರಲ್ಲೂ ಮೂಗಿನ ಮೇಲೆ, ತುಟಿಯ ಸುತ್ತಮುತ್ತಲಿರುವ ಮೊಡವೆಯ ಗೊಡವೆಗೆ ಹೋಗಬಾರದು. ಸೋಂಕು ರಕ್ತನಾಳದ ಮೂಲಕ ಮೆದುಳಿಗೆ ಏರಿ ಪ್ರಾಣಕ್ಕೆ ಕುತ್ತು ತರಬಲ್ಲುದು. ಮೊಡವೆ ಹುಡುಗಿಯರಲ್ಲಿ ತೀವ್ರ ಆತಂಕ, ಖಿನ್ನತೆ, ಕೀಳರಿಮೆಗೆ ಎಡೆಮಾಡಿಕೊಡುತ್ತದೆ. ಹರೆಯದವರು ಮೊಡವೆಗಳನ್ನು ಅವು ತಾತ್ಕಾಲಿಕವಾದ್ದರಿಂದ ಒಪ್ಪಿಕೊಂಡು ಆತಂಕ ಪಡದಿರುವುದು ಜಾಣತನ. ಮೊಡವೆಗಳು ಕಾಮ ಪ್ರವೃತ್ತಿಯನ್ನು ಸೂಚಿಸುತ್ತವೆ; ಮನಸ್ಸಿನಲ್ಲಿ ಯಾವಾಗಲೂ ಲೈಂಗಿಕ ವಿಚಾರಗಳನ್ನು ಮಾಡುವವರಿಗೆ ಬರುತ್ತವೆ; ಹಸ್ತ ಮೈಥುನ, ಕೆಟ್ಟ ಯೋಚನೆಗಳಿಂದ ಉಂಟಾಗುತ್ತವೆ ಮುಂತಾದ ತಪ್ಪು ನಂಬಿಕೆಗಳಿಂದ ದೂರವಿರಬೇಕು. ಮೊಡವೆಗಳಿಗೂ, ಇವಕ್ಕೂ ಯಾವ ಸಂಬಂಧವೂ ಇಲ್ಲ. ಮುಖದಲ್ಲಿ ಜಿಡ್ಡು ಇರದಂತೆ ಮುಖವನ್ನು ದಿನಕ್ಕೆ ಮೂರು ನಾಲ್ಕು ಬಾರಿ ಸೋಪು ಹಚ್ಚಿ ತೊಳೆ ಯುವುದು, ಜಿಡ್ಡಿನಂತಹ ಸ್ನೋ ವ್ಯಾನಿಷಿಂಗ್‌ಕ್ರೀಂ ಹಚ್ಚದಿರುವುದು, ಎಣ್ಣೆ, ಬೆಣ್ಣೆ ಯಂತಹ ಜಿಡ್ಡಿನ ಪದಾರ್ಥಗಳನ್ನು ಕಡಿಮೆ ತಿನ್ನುವುದು ಮೊಡವೆಗಳ ಉಪಟಳ ಕಡಿಮೆ ಯಾಗಲು ಸಹಕಾರಿ.

ಸ್ವಾಭಾವಿಕವಾಗಿ ನಡೆಯುವ ದೇಹದ ಬೆಳವಣಿಗೆ, ಲೈಂಗಿಕ ಬೆಳವಣಿಗೆಗಳ ಬಗ್ಗೆ ಆಂತರಿಕ ಆತಂಕದಿಂದಾಗಿ ಬೆವರುವುದು, ಏರಿದ ಎದೆ ಬಡಿತ, ಸುಸ್ತು, ಮಾಂಸಖಂಡಗಳ ಬಿಗಿತ, ಮೈ ಬಿಸಿ ಮುಂತಾದ ಚಿಹ್ನೆಗಳು ಹದಿಹರೆಯದವರಲ್ಲಿ ಕಾಣಿಸಿಕೊಳ್ಳುತ್ತವೆ. ಇವು ಏಕೆ ಬಂದುವು ಎಂದು ಗೊತ್ತಾಗದೆ, ಹಲವರು ತಮಗೆ ಯಾವುದೋ ಖಾಯಿಲೆ ಬಂತೆಂದು ತಿಳಿದು 'ರೋಗ ಭ್ರಾಂತಿ' ಗೊಳಗಾಗುತ್ತಾರೆ.

ಹರೆಯದಲ್ಲಿ ದೇಹ ಶಕ್ತಿ ಉತ್ಸಾಹಗಳಿಂದ ಪುಟಿಯುತ್ತದೆ. ಸ್ವಲ್ಪ ಚಾಲನೆ ಸಿಕ್ಕರೆ ಸಾಕು ಚಟುವಟಿಕೆಯ ಜೇನುಗೂಡಾಗುತ್ತದೆ. ಕೆಲವು ಸಾರಿ ಆಲೋಚನೆಯ ಗತಿಗಿಂತ, ಚಟುವಟಿಕೆಯ ಗತಿ ಚುರುಕಾಗುತ್ತದೆ. ಇದನ್ನೇ ದುಡುಕು ಎನ್ನುವುದು. ಎತ್ತು ಈಯಿತೆಂದರೆ ಕೊಟ್ಟಿಗೆಗೆ ಕಟ್ಟು ಎನ್ನುವ ಬುದ್ಧಿ ಹರೆಯದವರಲ್ಲಿ ಹೆಚ್ಚು,

“ಸಿಘಾಸ, ಸಿಘಾನ; ಮುಡುಕಿ ಮೂಗು ಕೊಯ್ದುಕೊಳ್ಳಬೇಡಿ” ಎಂದು ಅಜ್ಜ ಅಜ್ಜಿಯರು ಮೊಮ್ಮಕ್ಕಳಿಗೆ ಹೇಳುತ್ತಾರೆ.

ಹರೆಯದವರಲ್ಲಿ ದುಡುಕಿನಂತೆ ಸಿಡುಕೂ ಹೆಚ್ಚು. ತಾವು ಏನಾದರೂ ಮಾಡಬೇಕೆಂದಾಗ, ಎಲ್ಲಿಗಾದರೂ ಹೋಗಬೇಕೆಂದಾಗ, ಮನೆಯವರು ಬೇಡವೆಂದರೆ, ಕೋಪ ಮೂಗಿನ ತುದಿಯಲ್ಲೇ ಇರುತ್ತದೆ. ಈ ಸಿಡುಕನ್ನು ಅವರು ಮಾತಿನಲ್ಲಿ ತೋರಿಸಬಹುದು; ಕೃತಿಯಲ್ಲೂ ತೋರಿಸಬಹುದು. ಹಿರಿಯರಿಗೆ ಕೋಪ ಬರುವಂತಹ, ಮುಜುಗರ ತರಿಸುವಂತಹ ಕೆಲಸಗಳಲ್ಲಿ ತೊಡಗಬಹುದು. ಉದಾ. ಪಕ್ಕದ ಮನೆಗೆ ಕಲ್ಲು ಹೊಡೆದು ಜಗಳ ತರುವುದು, ತಮ್ಮನನ್ನೋ ತಂಗಿಯನ್ನೋ ಹೊಡೆದು ಅಳಿಸುವುದು, ಪ್ರಚೋದಕವಾಗಿ ಉಡುಪು ತೊಟ್ಟು ಅಡ್ಡಾಡುವುದು ಇತ್ಯಾದಿ.

ಹೀಗೆ ಮೈ ನೆರೆತ ವ್ಯಕ್ತಿಯಲ್ಲಿ ಹೊಸ ಅಧ್ಯಾಯವನ್ನೇ ಬರೆಯುತ್ತದೆ.

ಪೂರ್ವಾರ್ಧ ಹದಿವಯಸ್ಸು:

ಮೈನೆರೆತದಿಂದ ಪ್ರಾರಂಭವಾಗುವ ಹರೆಯದಲ್ಲಿ, ಪ್ರಾರಂಭಕ್ಕೆ ಕಾಮ ಮತ್ತು ಆಕ್ರಮಣಕಾರಿ ಭಾವನೆಗಳು ಮನಸ್ಸನ್ನು ಆವರಿಸುತ್ತವೆ. ಸ್ವಾವಲಂಬನೆಯ ಗೀಳು, ದುಡುಕುತನ ಹೆಚ್ಚಾಗಿ ಕಾಣಬರುತ್ತದೆ. ಈ ಮೊದಲೇ ವಿವರಿಸಿರುವ ಮೈನೆರೆತದಿಂದ ಬರುವ ಬದಲಾವಣೆ ಹಾಗೂ ತತ್‌ಸಂಬಂಧದ ಪರಿಣಾಮ,ಪ್ರತಿಕ್ರಿಯೆಗಳು ಹದಿವಯಸ್ಸಿನ ಪೂರ್ವಾರ್ಧದುದ್ದಕ್ಕೂ ಹರಡಿಕೊಳ್ಳುತ್ತವೆ. ನಿಜಪ್ರವೃತ್ತಿಯ ಹುಟ್ಟಾಸೆಗಳು ಮತ್ತು ಸಮಾಜದ ರೀತಿ ನೀತಿ ಕಟ್ಟುಪಾಡುಗಳನ್ನು ಬಿಂಬಿಸುವ ಮೇಲಹಂ ನಡುವಿನ ಘರ್ಷಣೆ ಇದರಿಂದಾಗಿ ಅಹಂ ಪಡುವ ಪಾಡು ಈ ಅವಧಿಯಲ್ಲಿ ಪ್ರಮುಖವಾಗುತ್ತವೆ.

ದೈಹಿಕ ಹಾಗೂ ಲೈಂಗಿಕ ಬೆಳವಣಿಗೆಗಳ ಗೊಂದಲ ಸ್ಥಿತಿಯಿಂದ ಪಾರಾಗಲು, ಕೆಲವು ಸಾರಿ ಕೆಲವು ಹವ್ಯಾಸಗಳಲ್ಲಿ ಪೂರ್ಣ ಮುಳುಗಿಹೋಗುತ್ತಾರೆ. ಸ್ಟ್ಯಾಂಪ್ ಸಂಗ್ರಹಣೆ, ಸಂಗೀತಾಭ್ಯಾಸ, ಚಿತ್ರರಚನೆ, ಪರ್ವತಾರೋಹಣ ಮುಂತಾದ ಚಟುವಟಿಕೆಗಳಲ್ಲಿ ತನುಮನಗಳನ್ನು ತೊಡಗಿಸುತ್ತಾರೆ. “ಸ್ಟ್ಯಾಂಪ್ ಸಿಕ್ಕಿ ಬಿಟ್ಟರೆ ಆಯಿತು. ಊಟ ಬೇಡ ನಿದ್ರೆ ಬೇಡ” ಎಂದು ತಂದೆತಾಯಿಗಳು ಉದ್ಗರಿಸುವಂತಾಗುತ್ತವೆ

ಸ್ವಾವಲಂಬನೆ-ಘರ್ಷಣೆ:

ಮಕ್ಕಳಿಗೆ ತಂದೆ ತಾಯಿ ಹೇಳಿದ್ದೆಲ್ಲವೂ ಸರಿ. ನುಡಿದದ್ದೆಲ್ಲವೂ ನಿಜ. ಹತ್ತು ತಲೆಯ ಹಾವು, ನೂರು ಕಣ್ಣಿನ ರಾಕ್ಷಸ, ಏಳು ಮಲ್ಲಿಗೆ ತೂಕದ ರಾಜಕುಮಾರಿ, ಕೀಲು ಕುದುರೆ ಮೇಲೆ ಕುಳಿತು ಹಾರುವ ರಾಜಕುಮಾರ, ಕತ್ತಲೆಯಲ್ಲಿ ಕಾದಿರುವ ಭೂತ ಎಲ್ಲವನ್ನೂ ಎದುರಾಡದೆ ನಂಬುತ್ತಾರೆ. ಆದರೆ ಹರೆಯ ಕಾಲಿಡುತ್ತಿದ್ದಂತೆಯೇ ಈ ನಂಬಿಕೆ ಮಾಯವಾಗತೊಡಗುತ್ತದೆ: ಫಕ್ಕನೆ ಯಾವುದನ್ನೂ ನಂಬದೆ, ಸ್ವತಃ ಯೋಚಿಸಿ, ಸಾಧುವೇ ಅಸಾಧುವೇ ಎಂಬ ನಿರ್ಧಾರಕ್ಕೆ ಬರುತ್ತಾರೆ. ತಂದೆ

ತಾಯಿಗಳ ಹೇಳಿಕೆ, ಅಭಿಪ್ರಾಯಗಳನ್ನು ಏಕಾಏಕಿ ನಂಬುವುದು, ಪಾಲಿಸುವುದು ಪರಾವಲಂಬಿತನವೆಂದು ತಿಳಿಸು ಅವನ್ನು ವಿರೋಧಿಸುತ್ತಾರೆ. ಇವರಿನ್ನೂ ಮಕ್ಕಳು, ನಾವು ಹೇಳಿದಂತೆ ಕೇಳುತ್ತಾರೆ ಎಂದು ನಂಬುವ ತಂದೆ ತಾಯಿಗಳೊಂದಿಗೆ ಘರ್ಷಣೆಗೆ ಇಳಿಯುತ್ತಾರೆ.

ನಾನು, ನನ್ನತನ:

ಗುಂಪಿನಲ್ಲಿ ಗೋವಿಂದನಾಗಲು ಯಾವ ಹರೆಯದ ವ್ಯಕ್ತಿಯೂ ಒಪ್ಪುವುದಿಲ್ಲ. ನಾನು, ನನ್ನತನ ಎಂಬ ಅಭಿಮಾನ ಚಿಗುರೊಡೆಯುವುದು ಈ ವಯಸ್ಸಿನಲ್ಲಿ. ಉಳಿದವರು ನನ್ನನ್ನು ಗುರುತಿಸಬೇಕು, ನನ್ನ ವೈಶಿಷ್ಟ್ಯವನ್ನು ಕಾಣಬೇಕು, ನಾನಿಲ್ಲದಿದ್ದರೆ, ನನ್ನ ಗೈರು ಹಾಜರಿ ಎದ್ದುಕಾಣಬೇಕು ಎಂಬ ಬಯಕೆಗಳು ಮೂಡುವುದು ಈಗಲೇ. ಯಾವುದರಲ್ಲಾದರೂ ತನ್ನ ಹಿರಿಮೆಯನ್ನು ಸಾಧಿಸಿ ತೋರಿಸುವ ಚಪಲ ಮೂಡುತ್ತದೆ ಬಹುಮಾನ ಗಿಟ್ಟಿಸಿ, ಎಲ್ಲರೆದುರು ಎದೆಯುಬ್ಬಿಸಿ, ವೇದಿಕೆಯ ಮೇಲೆ ಹೋಗಲು ಹಾತೊರೆಯದಿರುವ ಹರೆಯದವರೇ ಇಲ್ಲ. ಚರಿತ್ರಾರ್ಹವ್ಯಕ್ತಿಗಳು, ಪುರಾಣ ಪುರುಷರು ಸಿನೇಮಾ ತಾರೆಯರು ಇವರ ಆದರ್ಶ ಮೂರ್ತಿಗಳಾಗುತ್ತಾರೆ. ಅವರಂತೆ ನಾವಾಗಬೇಕು ಎಂದು ಬಯಸುತ್ತಾರೆ. ಇದು ಆರೋಗ್ಯಕರ. ಆದರೆ ವಿವಿಧ ಕಾರಣಗಳಿಂದ ಈ ನನ್ನತನ ಬೆಳೆಯದೆ, ಹೀಗೆ ಆಗಬೇಕು ಎನ್ನಲು ಮನಸ್ಸಿನಲ್ಲಿ ಆದರ್ಶ ವ್ಯಕ್ತಿ ಮೂಡದಿದ್ದರೆ, ಹರೆಯದ ವ್ಯಕ್ತಿ ದಿಕ್ಕುತಪ್ಪಿದ ದೋಣಿಯಂತಾಗುತ್ತಾನೆ. ಅವ್ಯವಸ್ಥೆ, ಚಾರಿತ್ರ್ಯ ಹೀನ, ಸ್ವಾಭಿಮಾನದ ಕೊರತೆಯುಳ್ಳ ಸಮಾಜಕ್ಕೆ ಸೇರಿದ ಹರೆಯದವರು ಈ ಅಪಾಯಕ್ಕೊಳಗಾಗುತ್ತಾರೆ.

ಜೊತೆಗಾರರು:

ಹರೆಯದ ತ್ರಿಶಂಕು ಸ್ಥಿತಿಯಲ್ಲಿ ವ್ಯಕ್ತಿಗೆ ಆಸರೆಯಾಗಿ, ಒತ್ತಾಸೆಯಾಗಿ ನಿಲ್ಲುವವರು ಅವನ ವಯಸ್ಸಿನ ಜೊತೆಗಾರರು. ಇವರ ಸ್ನೇಹ ಸಂಗವೇ ಆತನ ಮಹಾಬಲ. ಎಲ್ಲಿಗೆ ಹೋಗಲೀ, ಏನು ಮಾಡಲೀ ಅವರ ಒಡನಾಟ ಅವನಿಗೆ ಬೇಕು. ಅವರ ಒಪ್ಪಿಗೆ, ಮೆಚ್ಚುಗೆ ಪಡೆಯಲು ಎಂತಹ ಸರ್ಕಸ್ ಮಾಡಲೂ ರೆಡಿ. ವೇಷಭೂಷಣ, ಮಾತುಕತೆ, ಅಭಿರುಚಿ ಎಲ್ಲವೂ ಜೊತೆಗಾರರಂತೆಯೇ. ಗಳಸ್ಯ ಕಂಠಸ್ಯ ಸ್ನೇಹ ಕುದುರುವುದು ಈಗಲೇ. ಗ್ಯಾಂಗ್, ಪಟಾಲಂ ಗೆಳೆಯರ ಬಳಗಗಳು ಹುಟ್ಟುವುದು ಇವರಿಂದಲೇ. ಹಿರಿಯರೊಡನೆ ಭಿನ್ನಾಭಿಪ್ರಾಯ, ಘರ್ಷಣೆಯಲ್ಲಿ, ಈ ಜೊತೆಗಾರರ ಗುಂಪು ವ್ಯಕ್ತಿಗೆ ಒತ್ತಾಸೆ, ರಕ್ಷಣೆ ನೀಡುತ್ತದೆ. ಆತನ ಆಸೆ ಆಕಾಂಕ್ಷೆ, ಉತ್ಸಾಹ ಉದ್ಧಟತನಗಳಿಗೆ ಸ್ಫೂರ್ತಿಯ ನೆಲೆಯಾಗುತ್ತದೆ. ಸಮಾಜ ಈ ಶಕ್ತಿಯನ್ನು ಸರಿಯಾಗಿ ಬಳಸಿಕೊಂಡರೆ ಅಪರಿಮಿತ ಲಾಭ, ಇಲ್ಲದಿದ್ದರೆ ತುಂಬಲಾಗದ ನಷ್ಟ.

ಆಲೋಚನಾ ಶಕ್ತಿ:

ಅತ್ಯುನ್ನತ ಮಟ್ಟದಲ್ಲಿ ಆಲೋಚಿಸುವ ಸಾಮರ್ಥ್ಯ ಹದಿಹರೆಯದ ಪೂರ್ವಾರ್ಧದಲ್ಲಿ ಮೂಡಲು ಪ್ರಾರಂಭವಾಗುತ್ತದೆ. ಸಕಾರಣವಾಗಿ, ತರ್ಕಬದ್ಧವಾಗಿ ಆಲೋಚಿಸುವುದು, ಮಾತುಗಳ ಒಳ ಅರ್ಥವನ್ನು ಅರಿಯುವುದು, ಏನನ್ನಾದರೂ ಮಾಡುವ ಮೊದಲು, ಮನಸ್ಸಿನಲ್ಲೇ ಸಾಧಕ ಬಾಧಕಗಳ ಬಗ್ಗೆ ಲೆಕ್ಕಾಚಾರ ಹಾಕುವುದು ಈ ಸಾಮರ್ಥ್ಯದ ವಿವಿಧ ಮುಖಗಳು. ಇದರ ಜೊತೆಗೆ, ಬೆಳೆಯುತ್ತಿರುವ ಬುದ್ಧಿಶಕ್ತಿಯು ವಿವಿಧ ಆಸಕ್ತಿ ಚಟುವಟಿಕೆಗಳನ್ನು, ಕಲೆ, ವಿಜ್ಞಾನ, ತತ್ವ ಶಾಸ್ತ್ರಗಳನ್ನು ಅರಿಸಿಕೊಳ್ಳಲು ಸಹಾಯ ಮಾಡುತ್ತದೆ. ದೈಹಿಕ ಹಾಗೂ ಲೈಂಗಿಕ ವಿಷಯಗಳ ಬಗ್ಗೆಯೇ ಯೋಚಿಸುವ ಮನಸ್ಸನ್ನು, ಆ ಗೊಂದಲಗಳಿಂದ ಬಿಡುಗಡೆ ಮಾಡಿಕೊಂಡು ಉಪಯುಕ್ತ ವಿಷಯಗಳ ಬಗ್ಗೆ ಯೋಚಿಸಲು ಆಲೋಚನೆ ಮತ್ತು ಬುದ್ಧಿಶಕ್ತಿಗಳು ನೆರವಾಗುತ್ತವೆ.

ಹಸ್ತಮೈಥುನ, ವೀರ್ಯ ಸ್ಖಲನ:

ಹದಿವಯಸ್ಸಿನ ಪೂರ್ವಾರ್ಧದಲ್ಲಿ ಪ್ರಮುಖವಾಗಿ ಕಂಡುಬರುವ ಚಟುವಟಿಕೆ ಮತ್ತು ಮನಸ್ಸನ್ನು ಮುತ್ತಿ ಕಾಡುವ ವಿಷಯ ಹಸ್ತಮೈಥುನ ಹಾಗೂ ವೀರ್ಯಸ್ಖಲನ. ಮೈನೆರೆದಾಗ ವಿವಿಧ ಚೋದನಿಕಗಳ ಪ್ರಭಾವದಿಂದ ಲೈಂಗಿಕ ಆಸೆಗಳು ಚಿಗುರೊಡೆದು ಕುತೂಹಲದಿಂದ, ನಂತರ ಸ್ಪರ್ಶ ಸುಖಕ್ಕಾಗಿ ಹುಡುಗರೂ, ಹುಡುಗಿಯರೂ ಹಸ್ತಮೈಥುನದಲ್ಲಿ ತೊಡಗುತ್ತಾರೆ. ಆದರೆ ಹುಡುಗರಲ್ಲಿ ಇದು ಹೆಚ್ಚು ಸಾಮಾನ್ಯ. ಹಸ್ತಮೈಥುನ ಈ ವಯಸ್ಸಿಗೆ ಸಹಜವಾದ ಕ್ರಿಯೆ.

ಆದರೆ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಇದೊಂದು 'ಮಾಡಬಾರದ ಕೆಲಸ' ಎಂಬ ತಪ್ಪು ನಂಬಿಕೆ ಪ್ರಚಲಿತವಿದೆ; ಲೈಂಗಿಕ ಶಿಕ್ಷಣವಿರಲಿ, ಲೈಂಗಿಕ ವಿಷಯಗಳ ಬಗ್ಗೆ ಮಾತನಾಡುವುದನ್ನೂ ನಿಷೇಧಿಸಲ್ಪಟ್ಟಿದೆ. ಹೀಗಾಗಿ ಅಜ್ಞಾನದಿಂದ, ತಪ್ಪು ತಿಳುವಳಿಕೆಯಿಂದ ಹಸ್ತಮೈಥುನ ಮಾಡಿಕೊಳ್ಳುವ ವ್ಯಕ್ತಿ ನಾಚಿಕೆ, ಭಯ, ತಪ್ಪಿತಸ್ಥ ಭಾವನೆಗಳಿಂದ ಬಳಲುತ್ತಾನೆ. ಒಂದು ಕಡೆ ಹಸ್ತಮೈಥುನ ನೀಡುವ ಖುಷಿ–ಸುಖ, ಇನ್ನೊಂದು ಕಡೆಯಿಂದ 'ಮಾಡಬೇಡ ಅದು ಕೆಟ್ಟದ್ದು ಹಾಳಾಗುತ್ತಿಯೇ' ಎಂಬ ಎಚ್ಚರಿಕೆ ವ್ಯಕ್ತಿಯನ್ನು ಹಿಗ್ಗಾ ಮುಗ್ಗಾ ಎಳೆದು ಬಳಲಿಸುತ್ತವೆ. ಸಾಮಾನ್ಯವಾಗಿ ನಿಜಪ್ರವೃತ್ತಿಯೇ ಗೆದ್ದು, ವ್ಯಕ್ತಿ ಹಸ್ತ ಮೈಥುನ ಮಾಡಿಕೊಂಡು ನಂತರ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಾನೆ. ಮಾಡಬಾರದ್ದನ್ನು ಮಾಡಿಬಿಟ್ಟೆ. ಏನಾಗುವುದೋ. ನನ್ನ ಜನನಾಂಗ ಚಿಕ್ಕನಾಗಿ ಬಿಡಬಹುದು. ನನ್ನ ಪುರುಷತ್ವ ಕಡಿಮೆಯಾಗಿ ಬಿಡಬಹುದು, ನಾನು ಷಂಡನಾಗಿ ಬಿಡಬಹುದು ಎಂದು ಕಳವಳಿಸುತ್ತಾನೆ. ಶ್ರೀನಿವಾಸನಂತೆ ಮನೋರೋಗಿಯಾಗಬಹುದು.

ಹಸ್ತಮೈಥುನ ಮಾಡಿಕೊಂಡಾಗ ವೀರ್ಯಸ್ಖಲನವಾಗುತ್ತದೆ. ಅದೇನೆಂದು ತಿಳಿಯದೆ ಹೌಹಾರುತ್ತಾನೆ. ಹಸ್ತಮೈಥುನ ಮಾಡಿದ್ದರಿಂದ ಒಳಗೆ ಏನೋ ಆಗಿ, ಏನೋ ಒಡೆದು ಹೋಗಿ ಈ ದ್ರವ ಈಚೆಗೆ ಬಂದಿತು ಎಂತಲೋ ಅಥವಾ ವೀರ್ಯ ಪುರುಷತ್ವದ ಸಂಕೇತ, ಅದು ಕಳೆದು ಹೋದರೆ ಪುರುಷತ್ವವೇ ಹೋಗಿಬಿಡುತ್ತದೆ ಎಂಬ ಪ್ರಚಲಿತ (ತಪ್ಪು) ನಂಬಿಕೆಯಿಂದಲೋ 'ನನ್ನ ಕತೆ ಮುಗಿಯಿತು' ಎಂದು ವೀರೇಂದ್ರನಂತೆ ಭೀತನಾಗುತ್ತಾನೆ. ಹಸ್ತಮೈಥುನ ಮಾಡದಿದ್ದರೂ, ಮನಸ್ಸು ಲೈಂಗಿಕವಾಗಿ ಉದ್ರೇಕಗೊಂಡಾಗ ಅಥವಾ ಕನಸಿನಲ್ಲಿ ಲೈಂಗಿಕ ಚಟುವಟಿಕೆ ನಡೆಸಿದಂತೆ ಕಂಡು ವೀರ್ಯ ಸ್ಖಲನವಾಗಬಹುದು. ಇದೂ ಸ್ವಾಭಾವಿಕವಾದದ್ದೇ. ಆದರೆ ತಿಳಿಯದ ಮನಸ್ಸಿನಲ್ಲಿ ಭಯವನ್ನ ಬಿತ್ತುತ್ತದೆ. ಇವನ್ನು ದೊಡ್ಡವರೊಂದಿಗೆ ಹೇಳಿಕೊಳ್ಳಲು ಸಂಕೋಚ. ಜೊತೆಯವರನ್ನು ಕೇಳುತ್ತಾನೆ. ಅವರಿಗೆ ಅವನಷ್ಟೇ ತಿಳುವಳಿಕೆ. ಏನು ಮಾಡಲೂ ತೋರದೆ ತೊಳಲಾಡುತ್ತಾನೆ.

ಹಸ್ತಮೈಥುನ, ವೀರ್ಯಸ್ಖಲನಗಳು ವ್ಯಕ್ತಿಯ ಬೆಳವಣಿಗೆಯಲ್ಲಿ ಸಹಜವಾದ ಹಂತಗಳು. ನಿಜಪ್ರವೃತ್ತಿಯ ಹುಟ್ಟಾಸೆಗಳನ್ನು ತೃಪ್ತಿಪಡಿಸಲು ಹಸ್ತಮೈಥುನ ಸಹಾಯ ಮಾಡುವುದಲ್ಲದೆ, ಲೈಂಗಿಕವಾಗಿ ಪ್ರಬುದ್ಧವಾಗಲು ನೆರವಾಗುತ್ತವೆ. ಕಾಮಾವೇಶವನ್ನು ಅನುಭವಿಸಲು ವ್ಯಕ್ತಿಯನ್ನು ಸಿದ್ಧಗೊಳಿಸುತ್ತದೆ. ದೇಹದಲ್ಲಿ ವೀರ್ಯೋತ್ಪತ್ತಿ ಸತತವಾಗಿ ನಡೆದಿರುತ್ತದೆ. ಉದ್ರೇಕದಿಂದ ಸ್ಖಲನಗೊಳ್ಳುತ್ತದೆ. ಮತ್ತೆ ತುಂಬಿಕೊಳ್ಳುತ್ತದೆ. ಅದು ಹೋಗುವುದರಿಂದ ಯಾವ ಅಹಿತವೂ ಇಲ್ಲ. ಆದ್ದರಿಂದ ಹಸ್ತಮೈಥುನ ಮತ್ತು ವೀರ್ಯ ಸ್ಖಲನದ ಬಗ್ಗೆ ಆತಂಕ ಪಡಬೇಕಿಲ್ಲ. ಅವು ಸಂಭವಿಸಿದಾಗ ನಾಚಿಕೆ, ಅವಮಾನ, ಭಯ ಪಡಬೇಕಾಗಿಲ್ಲ.

ಋತುಸ್ರಾವ:

ಹುಡುಗಿ ಋತುಮತಿಯಾಗುವುದು ಆಕೆ ತಾಯಿಯಾಗಲು ದೈಹಿಕವಾಗಿ ಪ್ರಬುದ್ಧಳಾಗಿದ್ದಾಳೆ ಎಂದು ಪ್ರಕೃತಿ ಸೂಚಿಸುವ ಹಸಿರು ಚಿನ್ಹೆ. ನಂತರ ಮಾನಸಿಕವಾಗಿ ಗೃಹಿಣಿಯಾಗಲು, ತಾಯ್ತನದ ಜವಾಬ್ದಾರಿ ಹೊರಲು ಸಿದ್ಧತೆ ನಡೆಸುತ್ತಾಳೆ. ಇದು ಸರಾಗವಾಗಿ ನಡೆಯಲು ಹಿರಿಯರು ಅವಳಿಗೆ ಸೂಕ್ತ ತಿಳುವಳಿಕೆ, ಆಸರೆ, ಮಾರ್ಗದರ್ಶನ ನೀಡಬೇಕು. ಇಲ್ಲವಾದರೆ ಋತುಸ್ರಾವ ಅವಳ ಪಾಲಿಗೆ ಕಷ್ಟಪರಂಪರೆಯನ್ನೇ ತಂದೊಡ್ಡಬಹುದು (ಪಂಕಜಳಿಗಾದಂತೆ). ಏನೂ ಅರಿಯದ ಕಿಶೋರಿ, ಋತುಮತಿಯಾದ ಮೊದಲ ದಿನ ಗಾಭರಿಯಾಗುತ್ತಾಳೆ. ಯೋನಿಯಿಂದ ರಕ್ತಸ್ರಾವವನ್ನು ಕಂಡು ದಿಗಿಲು ಪಡಬಹುದು. ಶರೀರದೊಳಗೆ ಏನಾಯಿತೋ ಎಂಬ ಆತಂಕ ಕಾಡುತ್ತದೆ ಅಥವಾ ಲೋಳೆಯಂತಹ ದ್ರವವನ್ನು ಕಂಡು ಅಸಹ್ಯಗೊಂಡು, 'ಏನು ಇದು ನನ್ನ ದೇಹದೊಳಗಿತ್ತೇ' ಎಂದು ವಾಕರಿಸುತ್ತಾಳೆ. ಚೋದನಿಕಗಳ ಏರುಪೇರಿನಿಂದ ಬರುವ ನೋವು, ಇತರ

ಶಾರೀರಕ ಅಹಿತ ಚಿನ್ಹೆಗಳಿಂದ ನನಗೆ ಖಾಯಿಲೆ ಬಂದಿದೆ ಎಂದುಕೊಳ್ಳಬಹುದು. ಆ ವಯಸ್ಸಿನಲ್ಲಿ ಮನಸ್ಸನ್ನು ಕಾಡುವ ಲೈಂಗಿಕ ವಿಚಾರ, ಆಕರ್ಷಣೆಗಳೇ ಈ ಸ್ರಾವಕ್ಕೆ ಕಾರಣವಿರಬಹುದೆಂದು ತರ್ಕಿಸಿ, ತಪ್ಪಿತಸ್ಥ ಭಾವನೆಯಿಂದ ಬಳಲಬಹುದು. ಜೊತೆಗೆ ಸಂಪ್ರದಾಯಗಳು–ಮೂರು ದಿನ ಸ್ನಾನಾದಿಗಳಿಲ್ಲದೆ ಅಸ್ಪೃಶ್ಯಳಂತೆ ಕಸದ ಮೂಲೆಯಲ್ಲಿ ಕುಳಿತುಕೊಳ್ಳಬೇಕಾದಾಗ; ಇವಳೂ ದೊಡ್ಡವಳಾದಳು. ಇನ್ನು ವರ ಹುಡುಕಬೇಕು ಎಂಬ ಚಿಂತೆಯಿಂದ ತಂದೆತಾಯಿ ಬೇಸರ ತೋರಿಸಿದಾಗ; ತನ್ನ ಜೊತೆಯವರೆಲ್ಲ ಕುಣಿದು ನಲಿಯುವಾಗ ತನಗೆ ಹೀಗಾಯಿತು ಇನ್ನು ಮನೆಯಲ್ಲೇ ಕೂರಬೇಕಾಯಿತಲ್ಲ (ಎಷ್ಟೋ ಜನ ತಂದೆತಾಯಿಗಳು ಹುಡುಗಿ ಋತುಮತಿಯಾದ ಕೂಡಲೇ ಶಾಲೆ ಬಿಡಿಸಿ, ಮನೆಯಲ್ಲಿ ಕೊಳೆಹಾಕಿ ಬಿಡುತ್ತಾರೆ ಹೊರ ಹೋಗುವಂತಿಲ್ಲ. ಯಾರ ಕೂಡ ಹೆಚ್ಚಿಗೆ ಮಾತನಾಡುವಂತಿಲ್ಲ. ಚಿಟಿಕೆ ಹೊಡೆಯುವಷ್ಟರಲ್ಲಿ ಅವಳ ಬಾಲ್ಯವನ್ನು ಕಳೆದು ಹಿರಿತನವನ್ನು ಅವಳ ಮೇಲೆ ಹೇರಿ ಬಿಡುತ್ತಾರೆ). ಇನ್ನು ಮದುವೆ ಮಾಡಿ ಅಪರಿಚಿತನ ಮನೆಗೆ ಅಟ್ಟಿಬಿಡುತ್ತಾರಲ್ಲ....ಇವೆಲ್ಲಾ ಅವಳ ಮನಸ್ಸಿನ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಇದಕ್ಕೆಲ್ಲಾ ಕಾರಣವಾದ ಋತುಸ್ರಾವವನ್ನು ಶಪಿಸುತ್ತಾಳೆ.

ಆದ್ದರಿಂದ ಹರೆಯದ ಹುಡುಗಿಗೆ, ಋತುಸ್ರಾವದ ಬಗ್ಗೆ ಪೂರ್ಣ ಮಾಹಿತಿಯನ್ನು ತಾಯಿಯಾಗಲೀ, ಅಕ್ಕನಾಗಲೀ ಕೊಡಬೇಕು. ಮಾನಸಿಕವಾಗಿ ಅವಳನ್ನು ಈ ಬೆಳವಣಿಗೆಗೆ ಸಿದ್ಧಗೊಳಿಸಬೇಕು. ನಮ್ಮ ಸಂಸ್ಕೃತಿಯಲ್ಲಿ ಹುಡುಗಿ ಮೈನೆರೆದಾಗ ಹಸೆಹಚ್ಚಿ ಸಂಭ್ರಮಪಡುತ್ತಾರೆ. ಈ ಮೂಲಕ ಹುಡುಗಿಗೆ 'ನಾನು ದೊಡ್ಡವಳಾದದ್ದು ಎಲ್ಲರಿಗೂ ಸಂತೋಷ ತಂದಿದೆ' ಎಂದು ತಿಳಿದು ತನ್ನ ಬಗ್ಗೆ ಹೆಮ್ಮೆ ಪಡುತ್ತಾಳೆ.

ಹುಡುಗ–ಹುಡುಗಿಯರ ಸಂಬಂಧ:

ಹರೆಯದ ಪೂರ್ವಾರ್ಧದಲ್ಲಿ ಹುಡುಗ ಹುಡುಗಿಯರು ಸಂಕೋಚದ ಮುದ್ದೆಗಳಾಗುತ್ತಾರೆ. ಮನದಲ್ಲಿ ಲೈಂಗಿಕ ಆಸೆಗಳು ಮೊಳೆಯುವುದರಿಂದ ಹುಡುಗನನ್ನು ಅಥವಾ ಹುಡುಗಿಯನ್ನು ನೋಡಲು, ಮಾತನಾಡಿಸಲು, ಒಟ್ಟಿಗೆ ಓಡಾಡಲು ಇಷ್ಟಪಡುತ್ತಾರೆ. ಆದರೆ ಸಂಪ್ರದಾಯ ಅಡ್ಡಬಂದು, ಅಂತಹ ಯೋಚನೆ ತಪ್ಪು ಎಂದು ತಿಳಿದು, ಆತಂಕ ಪೀಡಿತರಾಗುತ್ತಾರೆ. ಪರಸ್ಪರ ಸಂಕೋಚ ಮತ್ತು ದೊಡ್ಡವರು ಬೈದಾರು ಎನ್ನುವ ಭಯದಿಂದ ಸ್ನೇಹ ಬೆಳೆಸಲು ಹಿಂದೆಗೆಯುತ್ತಾರೆ. ಈ ಆಸೆ ನಿರಾಸೆಯನ್ನು ಬೇರೆ ರೂಪದಲ್ಲಿ ತೋರ್ಪಡಿಸುತ್ತಾರೆ–ದೂರದಿಂದಲೇ ಒಬ್ಬರನ್ನೊಬ್ಬರು ಚುಡಾಯಿಸುವುದು, ಟೀಕೆ ಮಾಡುವುದು, ಹಂಗಿಸಿ ತಮಾಷೆ ಮಾಡುವುದು, ದೂಷಿಸುವುದು, ಜಗಳವಾಡುವುದು ಇತ್ಯಾದಿ. ಈ ವಯಸ್ಸಿನಲ್ಲಿ ಬೆಕ್ಕು ನಾಯಿಗಳಂತೆ ಕಚ್ಚಾಡಿ, ಪ್ರೌಢರಾದಾಗ ಒಬ್ಬರಲ್ಲಿ ಇನ್ನೊಬ್ಬರು ಅನುರಕ್ತರಾಗುವುದು ಸಾಮಾನ್ಯ.

ಹೀಗೆ ಹರೆಯದ ಪೂರ್ವಾರ್ಧದಲ್ಲಿ ಹಿರಿಯರ ವಿರುದ್ಧ ಬಂಡುಕೋರ ಪ್ರವೃತ್ತಿ, ತನ್ನ ಶರೀರ, ರೂಪದ ಬಗ್ಗೆ ತೀವ್ರ ಆಸಕ್ತಿ. ಜೊತೆ ವಯಸ್ಸಿನವರೊಂದಿಗೆ ಗಳಸ್ಯ–

ಕೆಂಠಸ್ಯ ಸ್ನೇಹ, ಲೈಂಗಿಕ ವಿಚಾರಗಳಲ್ಲಿ ಆಳವಾದ ಆಸಕ್ತಿ, ಹಸ್ತಮೈಥುನ, ಪುಡುಕು ತನ, ಭಾವನಾತ್ಮಕವಾಗಿ, ಬೌದ್ಧಿಕವಾಗಿ ಹೆಚ್ಚಿನ ಸಾಮರ್ಥ್ಯ, ವಿವಿಧ ಹವ್ಯಾಸ ಕ್ರೀಡೆ ಗಳು, ಪ್ರಯೋಗಶೀಲತೆ ಮತ್ತು ಸ್ವಾವಲಂಬನೆಗಳನ್ನು ಪ್ರಮುಖವಾಗಿ ಕಾಣುತ್ತೇವೆ.

ಹರೆಯದ ಉತ್ತರಾರ್ಧ

ಹುಡುಗ ಹುಡುಗಿಯರು ಬೆಳೆದು ಪ್ರೌಢರಾಗುತ್ತಿರುವುದನ್ನು ಈಗ ದೊಡ್ಡವರು ಗುರುತಿಸುತ್ತಾರೆ. ಅವರು ಜವಾಬ್ದಾರಿಯನ್ನು ಹೊರಬೇಕು–ಹುಡುಗರಾದರೆ ಸಂಪಾ ದನೆ ಮಾಡಿ ಸ್ವಾವಲಂಬಿಗಳಾಗಬೇಕು; ಹುಡುಗಿಯರು, ಮನೆಗೆಲಸ ಕಲಿತು ಗೃಹಿಣಿ ಯಾಗಲು ಸಿದ್ಧಳಾಗಬೇಕು ಎಂದು ಬಯಸುತ್ತಾರೆ. (ನಮ್ಮ ಹಳ್ಳಿಗಳಲ್ಲಿ ಈ ವಯ ಸ್ಸಿಗೆ ಹೆಣ್ಣುಮಕ್ಕಳು ಮದುವೆಯಾಗಿ, ಮಗುವಿನ ತಾಯಿಯೂ ಆಗಿಬಿಡುತ್ತಾರೆ) ಹುಡುಗ, ಹುಡುಗಿ ಮೆಜಾರಿಟಿಗೆ ಬಂದಿದ್ದಾರೆ ಎಂದು ಸಮಾಜವೂ ಒಪ್ಪಿ, ಸ್ಥಾನಮಾನ ಗಳನ್ನು ಕೊಡುತ್ತದೆ.

ಹದಿವಯಸ್ಸಿನವರು ಈ ಸೌಲಭ್ಯಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಾರೆ. ತಮಗಿಷ್ಟಬಂದ ವೇಷಭೂಷಣಗಳು, ಮನರಂಜನಾ ಚಟುವಟಿಕೆಗಳು, ಓಡಾಟ, ಹವ್ಯಾಸಗಳನ್ನು ರಾಜಾರೋಷವಾಗಿ ಮಾಡುತ್ತಾರೆ. ಆದರೆ ಹಿರಿಯರನ್ನು, ಸಂಪ್ರ ದಾಯಗಳನ್ನು ಪೂರ ಧಿಕ್ಕರಿಸಲು ಹಿಂಜರಿಯುತ್ತಾರೆ. ಹೀಗಾಗಿ ಬೀಡಿ, ಸಿಗರೇಟು ಸೇವನೆ, ಕಂಪನಿಗಾಗಿ ತೆಗೆದುಕೊಳ್ಳುವ ಮದ್ಯ, ಮತ್ತುಬರುವ ಔಷಧಗಳು, ಲೈಂಗಿಕ ಚಟುವಟಿಕೆಗಳನ್ನು ಕದ್ದು ಮುಚ್ಚಿ ಮಾಡುತ್ತಾರೆ. ಇವನ್ನು ಮರೆಸಲು ರ್ಯಾಂಕ್, ಫಸ್ಟ್‌ಕ್ಲಾಸ್ ಬರುವುದು, ಕ್ರೀಡೆ ಅಥವಾ ಇತರ ಬೌದ್ಧಿಕ ಚಟುವಟಿಕೆಗಳಲ್ಲಿ ಬಹು ಮಾನ ಗಿಟ್ಟಿಸುವುದು, ಸ್ಕೌಟ್, ಎನ್.ಸಿ.ಸಿ.ಗಳಲ್ಲಿ ಮೆಡಲ್ ಪಡೆಯುವುದು ಮಾಡಿ ಹಿರಿಯರ ಮನ್ನಣೆ ಗಳಿಸಲು ಯತ್ನಿಸುತ್ತಾರೆ.

ಒಂಟಿತನ, ಬಂಡುಕೋರತನ:

ನನ್ನನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ. ನನ್ನ ರೀತಿನೀತಿಗಳಿಗೆ ಯಾರೂ ಬೆಂಬಲ ಕೊಡುವುದಿಲ್ಲ. ನಾನು ಒಂಟಿ ಎಂಬ ಭಾವನೆ ಬಹಳ ಜನ ಹರೆಯದವರನ್ನು ಕಾಡುತ್ತದೆ. "ಯಾಕೋ ಬೇಜಾರು ಕಣೆ" ಎನ್ನುವ ಹುಡುಗಿಯರೂ, "ತಥ್ ಬೇಜಾರು ಕಣೋ ಎಲ್ಲಾದರೂ ಹೋಗಿಬಿಡೋಣ ಅನ್ನಸ್ತೋ" ಎನ್ನುವ ಹುಡುಗರೂ ಧಂಡಿಯಾಗಿ ಸಿಗುತ್ತಾರೆ. ಮನೆಯವರೊಂದಿಗೆ ಮಾತುಕತೆ ಕಡಿಮೆಯಾಗುತ್ತದೆ. ತಮ್ಮ ರೂಮಿ ನಲ್ಲಿ ಸೇರಿಕೊಂಡರೆ, ಊಟ ತಿಂಡಿಗೆ ಮಾತ್ರ ಹೊರಬರುತ್ತಾರೆ. ಬುದ್ಧಿವಂತರು, ಪ್ರತಿಭಾವಂತರು ಈ ಒಂಟಿತನದ ಲಾಭ ಪಡೆದು ಅನೇಕ ಕೌಶಲಪೂರ್ಣ ಹವ್ಯಾಸಗಳಲ್ಲಿ ತೊಡಗುತ್ತಾರೆ. ಸಂಗೀತ, ಚಿತ್ರಕಲೆ, ಸಾಹಿತ್ಯ, ರೇಡಿಯೋ ಇನ್ನಿತರ ಯಂತ್ರೋಪ ಕರಣಗಳ ಜೋಡಣೆಯಲ್ಲಿ ಸಿದ್ಧಹಸ್ತರಾಗುತ್ತಾರೆ. ಉಳಿದವರು ಏನು ಮಾಡಲೂ

ತೋಚನೆ, ಚಡಪಡಿಸುತ್ತಾರೆ. ಕ್ರಮೇಣ ಸಿಡುಕರಾಗಿ, ಬಂಡುಕೋರರಾಗುತ್ತಾರೆ. ತಮ್ಮ ಒಂಟಿತನಕ್ಕೆ ಸಮಾಜವೇ ಕಾರಣವೆಂದು ಭ್ರಮಿಸಿ, ಅದರ ವಿರುದ್ಧ ದ್ವೇಷ ಸಾಧಿಸುತ್ತಾರೆ. ಅಡ್ಡದಾರಿ ಹಿಡಿಯುತ್ತಾರೆ. ವಾಸ್ತವಿಕತೆಯನ್ನು ಮರೆಯಲು, ತಮ್ಮದೇ ಆದ ಕಲ್ಪನಾ ಲೋಕದಲ್ಲಿ ವಿಹರಿಸಲು, ಮದ್ಯಪಾನ ಮಾಡುವುದು, ಅಮಲು ತರುವ ಮದ್ದುಗಳನ್ನು ಸೇವಿಸುವುದು ಅವರಿಗೆ ಇಷ್ಟವಾಗುತ್ತದೆ. ಅಥವಾ ದಿನಕ್ಕೊಂದು ಸಿನೇಮಾ ನೋಡುವುದು, ಗುಂಪು ಕಟ್ಟಿಕೊಂಡು, ಕೀಳುದರ್ಜೆಯ ಅದರಲ್ಲೂ ಲೈಂಗಿಕ ಜೋಕುಗಳನ್ನು ಮಾಡಿಕೊಂಡು ಖುಷಿಪಡಬಹುದು. ಹುಡುಗಿಯರನ್ನು ಚುಡಾಯಿಸುತ್ತಾ, ಹಿರಿಯರನ್ನು ಗೇಲಿಮಾಡುತ್ತಾ, ಸಂಪ್ರದಾಯ, ಕಟ್ಟುಪಾಡುಗಳನ್ನು ಮುರಿಯುತ್ತಾ ವಿಘ್ನಸಂತೋಷಿಗಳಾಗಬಹುದು ಮೇಲೆ ಕಾಣುವ ಇವೆಲ್ಲ ಸಮಾಜ ವಿರೋಧಿ ಚಟುವಟಿಕೆಗಳನ್ನು ಮಾಡುವ ಹರೆಯದವರನ್ನು ಸಹಾನುಭೂತಿಯಿಂದ ಪರೀಕ್ಷಿಸಿದರೆ, ಕೆಲವು ಸಾರಿ ಅವರಿಗೇ ಗೊತ್ತಿಲ್ಲದ ಈ ಒಂಟಿತನ, ಖಿನ್ನತೆ ಮನದಾಳದಲ್ಲಿ ಹರಡಿಕೊಂಡಿರುವುದು ಕಂಡು ಬರುತ್ತದೆ.

ಆದರ್ಶವಾದಿ:

ಹರೆಯದವರು ಆದರ್ಶವಾದಿಗಳು. ನುಡಿದಂತೆ ನಡೆಯಬೇಕು. ಮೋಸ, ವಂಚನೆ ಕೂಡದು. ಆದರ್ಶ ಗುರಿಸಾಧನೆಗಾಗಿ ಎಂತಹ ಕಷ್ಟ ನಷ್ಟಗಳನ್ನು ಅನುಭವಿಸಲೂ ಸಿದ್ಧರಿರಬೇಕು. ಎನ್ನುವ ಛಲ ಅವರಲ್ಲಿರುತ್ತದೆ. ಇದನ್ನು ಅರಿತೇ ಗಾಂಧೀಜಿ ಹರೆಯದವರನ್ನು ಊಟದಲ್ಲಿನ ಉಪ್ಪಿಗೆ ಹೋಲಿಸಿ, ದೇಶ ಮುನ್ನಡೆಯಲು ಹರೆಯದವರು ಮುಂಚೂಣಿಯಲ್ಲಿ ಇರಬೇಕೆಂದು ಬಯಸಿದರು. ಸುಳ್ಳು ತಟವಟಗಳಿಲ್ಲದೆ, ನೇರವಾಗಿ ಯೋಚಿಸುವ, ಅಂತೆಯೇ ಮಾಡುವ ಹರೆಯದವರನ್ನು ಕಂಡರೆ ತಂತ್ರಗಾರ ಹಿರಿಯರಿಗೆ ಕೊಂಚ ಭಯವೇ. ವ್ಯವಹಾರಿಕ ಎಂದು ಕುಂಟು ನೆಪವೊಡ್ಡಿ, ಸಮಯಸಾಧಕ ನೀತಿಯನ್ನು ಅನುಸರಿಸುವ ಸಮಾಜವನ್ನು ಕಂಡರೆ ಹರೆಯದವರು ಕೆರಳುವುದು ಸಹಜ. ಅಂತೆಯೇ ಕಮ್ಯುನಿಸ್ಟ್ ತತ್ವಗಳು ಹರೆಯದವರನ್ನು ಆಯಸ್ಕಾಂತದಂತೆ ಆಕರ್ಷಿಸುವುದನ್ನು ಜಗತ್ತಿನ ಇತಿಹಾಸದುದ್ದಕ್ಕೂ ಕಾಣುತ್ತೇವೆ.

* * *

ಹೀಗೆ ಹದಿವಯಸ್ಸಿನಲ್ಲಿ ವ್ಯಕ್ತಿ ನಾನಾ ಅಡ್ಡಿ ಆತಂಕಗಳನ್ನು ಎದುರಿಸಿ ಕ್ರಮೇಣ ಪ್ರೌಢತೆಯ ದಡವನ್ನು ಸೇರುತ್ತಾನೆ. ಈ ಅವಧಿಯಲ್ಲಿ ಆತ ಮುಖ್ಯವಾಗಿ ಸಾಧಿಸಬೇಕಾದದ್ದು—

೧. ತನ್ನ ಶಾರೀರಕ ಹೊರರೂಪವನ್ನು ಒಪ್ಪಿಕೊಂಡು, ಪುರುಷತ್ವ ಅಥವಾ ಸ್ತ್ರೀತ್ವವನ್ನು ಸ್ವೀಕರಿಸಿ, ಆ ಪಾತ್ರವನ್ನು ನಿರ್ವಹಿಸಲು ಸಜ್ಜಾಗುವುದು.

೨. ಸಹವಯಸ್ಸಿನ ಹುಡುಗ ಹುಡುಗಿಯರೊಂದಿಗೆ ಸ್ನೇಹಸಂಬಂಧ.

೩. ಭಾವನಾತ್ಮಕವಾಗಿ ತಂದೆತಾಯಿಗಳನ್ನು ಮತ್ತು ಹಿರಿಯರನ್ನು ಅವಲಂಬಿಸುವುದು ಬಿಟ್ಟು ಸ್ವಾವಲಂಬಿಯಾಗುವುದು.

೪. ಅಭಿರುಚಿಗೆ ತಕ್ಕಂತೆ ಒಂದು ವೃತ್ತಿ ಹಿಡಿದು, ಸಂಪಾದಿಸುವ ಶಕ್ತಿ ಪಡೆಯುವುದು.

೫. ಪ್ರಪಂಚದಲ್ಲಿ ಎಲ್ಲರೊಡನೆ ಹೊಂದಿ ಬಾಳುವ ಬುದ್ಧಿ ಸಾಮರ್ಥ್ಯಗಳನ್ನು ಹೊಂದುವುದು.

೬. ಸಮಾಜದಲ್ಲಿ ಗೌರವ ಹಾಗೂ ಜವಾಬ್ದಾರಿಯುತವಾಗಿ ಬಾಳುವುದು.

೭. ಮದುವೆ ಮತ್ತು ವೈವಾಹಿಕ ಜೀವನಕ್ಕೆ ಸಿದ್ಧರಾಗುವುದು. ಆರೋಗ್ಯವಂತನಾದ ವ್ಯಕ್ತಿ ಇವೆಲ್ಲವನ್ನೂ ಸಾಧಿಸುತ್ತಾನೆ.

ಹರೆಯದವರು—ಹಿರಿಯರು

ಆದಿಯಿಂದಲೂ, ಜಗತ್ತಿನಾದ್ಯಂತ ಎಲ್ಲ ಸಮಾಜಗಳಲ್ಲೂ ಹರೆಯದವರಿಗೂ, ಹಿರಿಯರಿಗೂ ಎಣ್ಣೆ ಸೀಗೇಕಾಯಿ ಸಂಬಂಧವೇ. ಸಂಪ್ರದಾಯದ ಮುದಿಗೊಡ್ಡುಗಳು ಎಂದು ಹರೆಯದವರು ಹಿರಿಯರನ್ನು ಮೂದಲಿಸುವುದೂ, ಹುಡುಗು ಮುಂಡೇವು ಅವಕ್ಕೇನು ತಿಳಿಯುತ್ತದೆ ಎಂದು ಹಿರಿಯರು ಹರೆಯದವರನ್ನು ತೆಗಳುವುದೂ ಮಾಮೂಲು. ಮಕ್ಕಳಾಗಿದ್ದಾಗ ಮುದ್ದು ಮುದ್ದಾಗಿ ಲಲ್ಲೆಗರೆಯುತ್ತಾ ಹೇಳಿದಂತೆ ಕೇಳಿಕೊಂಡು ಬಿದ್ದಿರುವ ಪಿಳ್ಳೆಗಳು, ಹರೆಯಕ್ಕೆ ಬರುತ್ತಿದ್ದಂತೆಯೇ, ತಮ್ಮನ್ನು ಧಿಕ್ಕರಿಸಿ 'ನಾವೇ ಬೃಹಸ್ಪತಿಗಳು' ಎಂದು ಕುಣಿಯುವ ಹರೆಯದವರನ್ನು ಕಂಡರೆ ದೊಡ್ಡವರಿಗೆ ಕಣ್ಣು ಕೆಂಪಗಾಗುವುದು ಸಹಜವೇ. ಬಾಯಲ್ಲಿ ವೇದಾಂತ ನುಡಿಯುತ್ತಾ, ಕೃತಿಯಲ್ಲಿ ಅನಾಚಾರ ಮಾಡುವ ಮತ್ತು ತಮ್ಮ ಅನುಭವದ ಮುಂದೆ ಬೇರಿಲ್ಲ ಎಂದು ಜಂಬ ಕೊಚ್ಚುವ ದೊಡ್ಡವರನ್ನು ಕಂಡರೆ ಹರೆಯದವರು ಕೆಂಡ ಕಾರುವುದೂ ಸಹಜವೇ. ಹೀಗೆ ಒಬ್ಬರನ್ನೊಬ್ಬರು ಗೇಲಿ ಮಾಡಿ, ಕುಹಕವಾಡಿ, ದೂಷಿಸಿ, ಕಾದಾಡಿದರೂ ಕೊನೆಗೆ ಒಂದಾಗಿ ಬಿಡುತ್ತಾರೆ.

ಹರೆಯದವರನ್ನು ದೊಡ್ಡವರಾಗಿದ್ದಾರೆಂದು ಹಿರಿಯರು ಒಪ್ಪಿಕೊಳ್ಳುವ ಈ ಕ್ರಿಯೆ ವಿವಿಧ ಸಮಾಜವಲ್ಲಿ ಒಂದೊಂದು ತೆರನಾಗಿರುತ್ತದೆ.

ನಾಗರೀಕತೆ ಕಾಣದ ಕೆಲವು ಬುಡಕಟ್ಟುಗಳಲ್ಲಿ ಮೈನೆರೆದ ಹುಡುಗ ಹುಡುಗಿಯರನ್ನು ಪ್ರತ್ಯೇಕಿಸಿ ಕೂಡಿ ಹಾಕುತ್ತಾರೆ. ಅವರನ್ನು ಉಪವಾಸ ಕೆಡಹುವುದು, ಹೊಡೆಯುವುದು, ಬರೆಹಾಕುವುದು ಇತ್ಯಾದಿ ಕಟ್ಟಳೆಗಳು ನಡೆಯುತ್ತವೆ. ಹೀಗೆ ಮಾಡಿ ಅವರ ಬಾಲ್ಯವನ್ನು ಸಾಯಿಸಲಾಗುತ್ತದೆ. ನಂತರ ಅವರನ್ನು ಶುಚಿಗೊಳಿಸಿ ಬುಡಕಟ್ಟಿನ ಹಿರಿಯರು 'ಪ್ರೌಢತ್ವದ ಜವಾಬ್ದಾರಿಯನ್ನು' ಬೋಧಿಸುತ್ತಾರೆ. ಬಳಿಕ ಪೂಜೆ ಹಬ್ಬ ಮಾಡಿ ಅವರನ್ನು ದೊಡ್ಡವರೆಂದು ಘೋಷಿಸುತ್ತಾರೆ.

ನಾಗರಿಕ ಜಗತ್ತಿನಲ್ಲಿ ಹರೆಯದವ ಶಾಲಾ ಕಾಲೇಜುಗಳಲ್ಲಿ ಓದಿ, ಪರೀಕ್ಷೆ ಪಾಸು ಮಾಡಿ, ಪದವಿಪಡೆದರೆ ಆತ ಪ್ರೌಢನಾಗಲು ಲಾಯಕ್ಕಾಗುತ್ತಾನೆ. ಅಲ್ಲಿಯತನಕ

ಎಳೆನಿಂಬೇಕಾಯಿ, ಹುಡುಗ ಮುಂಡೇದು ಎಂದು ಮೂತಿ ತಿವಿಸಿಕೊಂಡು, ಆಟಕ್ಕಿದ್ದರೂ ಲೆಕ್ಕಕ್ಕಿಲ್ಲದವನಂತೆ ಇರುತ್ತಾನೆ.

ಇದು ತಪ್ಪ ಬೇಕು. ಹರೆಯದವರು ಮತ್ತು ಹಿರಿಯರ ನಡುವೆ ಹೆಚ್ಚಿನ ಸಾಮರಸ್ಯ ಮೂಡಬೇಕು. ಹಿರಿಯರು ಹರೆಯದವರನ್ನು ಅರ್ಥಮಾಡಿಕೊಂಡು ಸ್ವಾಗತಿಸಿದರೆ, ಹರೆಯದವರು ಹೆಚ್ಚು ಪಾಡು ಪಡಬೇಕಾಗಿಲ್ಲ.

ಹರೆಯದವರು ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಳ್ಳಲು ಈ ಕೆಳಕಂಡ ಅಂಶಗಳು ನೆರವಾಗುತ್ತವೆ.

ಅಗಲಿಕೆ : ಬಾಲ್ಯದಲ್ಲಿ ಮಗು ತಂದೆತಾಯಿಗಳಿಂದ ದೀರ್ಘಕಾಲ ಬೇರ್ಪಟ್ಟು ಅವರ ಸ್ಥಾನವನ್ನು ತುಂಬಬಲ್ಲ ಬೇರೆ ವ್ಯಕ್ತಿಗಳ ಪೋಷಣೆಯಿಂದಲೂ ವಂಚಿತರಾದರೆ, ಮುಂದೆ ಹದಿವಯಸ್ಸಿನಲ್ಲಿ ಮನೋರೋಗಿಯಾಗುವ ಸಂಭವ ಹೆಚ್ಚು ಎಂದು ಜಾಲ್ಬಿ ಮುಂತಾದ ಮಕ್ಕಳ ತಜ್ಞರು ನುಡಿದಿದ್ದಾರೆ. ಪ್ರಪಂಚದಾದ್ಯಂತ ನಡೆದಿರುವ ಬಾಲಾಪರಾಧಗಳ ಅಧ್ಯಯನಗಳು, ಈ ಮಕ್ಕಳಲ್ಲಿ ಬಹುಮಂದಿ, ಒಂದಲ್ಲ ಒಂದು ಹಂತದಲ್ಲಿ ತಂದೆತಾಯಿಗಳ ಅಥವಾ ಪಾಲಕರಿಂದ ಬೇರ್ಪಟ್ಟು ಪ್ರೀತಿ ಆಸರೆಗಳಿಂದ ದೂರವಾಗಿದ್ದರೆಂದು ಸಾರಿವೆ.

ತಂದೆ ತಾಯಿಗಳ ವಯಸ್ಸು: ವಯಸ್ಸಾದ ತಂದೆ ತಾಯಿಗಳು, ತಮ್ಮ ಮಕ್ಕಳು ಹರೆಯಕ್ಕೆ ಬಂದಾಗ, ಅವರೊಂದಿಗೆ ಹೊಂದಿಕೊಳ್ಳಲು ಕಷ್ಟಪಡುತ್ತಾರೆ.

ಜಗಳ ವೈಮನಸ್ಯ ತುಂಬಿದ ಕುಟುಂಬಗಳು: ಜಗಳವಾಡುವ ಗಂಡ ಹೆಂಡತಿ, ಕಚ್ಚಾಡುವ ಅತ್ತೆ ಸೊಸೆ, ಸಂಶಯ ಪೀಡಿತ ಅಣ್ಣ ತಮ್ಮಂದಿರು, ಅಕ್ಕತಂಗಿಯರು, ಅಸೂಯೆ ಮತ್ಸರದ ವಾತಾವರಣ, ದುರಭ್ಯಾಸ, ಚಟ, ಪ್ರೀತಿ ವಿಶ್ವಾಸಗಳ ಕೊರತೆ ಇರುವ ಕುಟುಂಬಗಳಲ್ಲಿ, ಮಗು ಬೆಳೆದಂತೆ ಅನಾರೋಗ್ಯಪೀಡಿತವಾಗುತ್ತದೆ. ಬೇಟ್ಸನ್, ಲಿಡ್ಸ್ ನಂತಹ ಸಮಾಜ ವಿಜ್ಞಾನಿಗಳು ಇಂತಹ ಹಲವು ಕುಟುಂಬಗಳನ್ನು ಅಧ್ಯಯನ ಮಾಡಿ, ಹರೆಯದವರಲ್ಲಿ ಚಿತ್ತವಿಕಲತೆ ಬರಲು ಕುಟುಂಬದ ಅಹಿತ ವಾತಾವರಣವೇ ಕಾರಣ ಎಂಬ ಸಿದ್ಧಾಂತಕ್ಕೆ ಬಂದಿದ್ದಾರೆ. ತಂದೆತಾಯಿಗಳು ತಮ್ಮ ಅನಿಶ್ಚಿತ, ಪರಸ್ಪರ ವಿರುದ್ಧ ಬಗೆಯ ನಡವಳಿಕೆ ಮತ್ತು ಹೇಳಿಕೆಗಳಿಂದ ಮಗುವನ್ನು ಗೊಂದಲದಲ್ಲಿ ಕೆಡವಿ, ಅದು ತನ್ನ ನಡೆನುಡಿ ಬಗ್ಗೆ ಒಂದು ನಿಶ್ಚಿತ ನಿಲುವನ್ನು ತಳೆಯಲಾಗದೆ ಮಂಕಾಗಬಹುದು.

ಬೇಡದ ಗರ್ಭ: ವಿವಿಧ ಕಾರಣಗಳಿಂದ ತಾಯಿಗೆ ತಾನು ಗರ್ಭಧರಿಸಿದ್ದು ಇಷ್ಟವಾಗದೆ, ಬೇಡದ ಮಗುಹುಟ್ಟಿದರೆ, ಅಂತಹ ಮಗು ಹರೆಯದಲ್ಲಿ ಮಾನಸಿಕ ಕ್ಷೋಭೆಗೊಳಗಾಗುತ್ತದೆ ಎಂದು ತಿಳಿದು ಬಂದಿದೆ.

ತಂದೆ ತಾಯಿಗಳ ಅತಿ:

ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂಬ ಗಾದೆ. ಪ್ರೀತಿ, ಶಿಸ್ತು, ಶಿಕ್ಷೆ ಬೆಂಬಲ, ಪ್ರೋತ್ಸಾಹ, ಟೀಕೆ, ಹೊಗಳಿಕೆ ಎಲ್ಲವೂ ಹಿತ ಮಿತವಾಗಿದ್ದರೆ ಲಾಭಕಾರಿ;

ಮಿತಿಮೀರಿ ಅತಿಯಾದರೆ ಹಾನಿಕಾರಿ. ತಂದೆತಾಯಿಗಳು ಮಕ್ಕಳನ್ನು ಅತಿ ಮುದ್ದು ಮಾಡಿದರೆ ಅಥವಾ ತೀವ್ರವಾಗಿ ಶಿಸ್ತಿನ ಹೆಸರಿನಲ್ಲಿ ಶಿಕ್ಷಿಸಿದರೆ, ಅನಿಯಮಿತವಾಗಿ ಟೀಕೆ ಅಥವಾ ಹೊಗಳಿದರೆ ಹರೆಯದಲ್ಲಿ ಅವರು ತಾವು ದೊಡ್ಡವರಾಗುತ್ತಿರುವುದನ್ನು ಒಪ್ಪಿ ಕೊಳ್ಳಲು ಕಷ್ಟಪಡುತ್ತಾರೆ. ಮಕ್ಕಳಾಗಿಯೇ ಇದ್ದು ತಂದೆತಾಯಿಗಳ ಆಶ್ರಯದಲ್ಲಿಯೆ ಪರಾವಲಂಬಿಯಾಗಿರಲು ಅಥವಾ ಅವರಿಂದ ಸಿಡಿದೆದ್ದು, ಒಂದೇ ದಿನದಲ್ಲಿ ಪ್ರೌಢರಾಗಿ ಬಿಡಲು ಇಷ್ಟಪಡಬಹುದು. ಶಾರೀರಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಸ್ವಲ್ಪ ಕೂಡ ಹೊಂದಾಣಿಕೆಯಿಲ್ಲವೆ ಅವರು ಮಾನಸಿಕ ದುರ್ಬಲತೆಗೆ ಒಳಗಾಗಬಹುದು.

ನಿರೀಕ್ಷೆ, ಸಾಮರ್ಥ್ಯ, ಸಾಧನೆಗಳಲ್ಲಿನ ಅಸಮತೆ:

ನಮ್ಮ ಮಗು ಹೀಗಾಗಬೇಕು, ಹಾಗಾಗಬೇಕು ಎಂದು ತಂದೆ ತಾಯಿಗಳು ನೂರೆಂಟು ಆಸೆಗಳನ್ನು ಇಟ್ಟುಕೊಂಡಿರುತ್ತಾರೆ. ನೀನು ಡಬ್ಬಲ್ ಗ್ರಾಜುಯೇಟ್ ಆಗಬೇಕು, ಇಂಜನಿಯರೋ, ಡಾಕ್ಟರೊ ಆಗಬೇಕು ಎಂದು ಹೇಳಿಯೂಹೇಳುತ್ತಾರೆ ಮಗು ಯಾವಾಗಲೂ ಫಸ್ಟ್ ಬರಬೇಕು, ರ್‍ಯಾಂಕ್ ಗಿಟ್ಟಿಸಬೇಕು ಎಂದು ಒದ್ದಾಡು ತ್ತಾರೆ. ಆದರೆ ಮಗುವಿಗೆ ಆ ಸಾಮರ್ಥ್ಯವಿಲ್ಲದಿದ್ದರೆ, ನಿರೀಕ್ಷೆಯ ಮಟ್ಟ ಮುಟ್ಟದಿದ್ದರೆ ಇಬ್ಬರಿಗೂ ನಿರಾಶೆ ತಪ್ಪದು. ನಿರಾಶೆ, ನೋವು ತರುತ್ತದೆ. ಸಾಧಿಸಲಿಲ್ಲವಲ್ಲ ಎಂಬ ಕೊರಗನ್ನು ಉಂಟುಮಾಡುತ್ತದೆ. ಈ ನೋವು, ನಿರಾಶೆ, ಕೊರಗುಗಳು ಮನಸ್ಸಿನ ಸಮ ತೋಲನ ಬೆಳವಣಿಗೆಗೆ ಅಡ್ಡಗಾಲು ಹಾಕುತ್ತವೆ.

ಮುಂಚಿನ ಹೊಂದಾಣಿಕೆ:

ಬಾಲ್ಯದಲ್ಲಿ ಮನೆ, ಶಾಲೆ, ನೆರೆಹೊರೆಯಲ್ಲಿ ಚೆನ್ನಾಗಿ ಹೊಂದಿಕೊಂಡ ಮಗು, ಹರೆಯದಲ್ಲಿ ಸಮಸ್ಯೆಗಳು ಉದ್ಭವಿಸಿದರೂ, ಧೃತಿಗೆಡದೆ ಆರೋಗ್ಯವಾಗಿ ಬೆಳೆಯುತ್ತದೆ. ಆದರೆ ಹೊಂದಾಣಿಕೆ ಇಲ್ಲದ ಮಗು ಹರೆಯದ ಬದಲಾವಣೆಯ ಧಾಳಿಗೆ ಬಲಿಯಾಗುವ ಸಂಭವ ಹೆಚ್ಚು.

ದೀರ್ಘ ಕಾಲದ ಖಾಯಿಲೆ, ಶಾರೀರಕ ನ್ಯೂನತೆಗಳು:

ಬಹಳ ಕಾಲ ಖಾಯಿಲೆಯಿಂದ ನರಳಿದ ಮಗು, ಕೈಯೋ ಕಾಲೋ, ಯಾವು ದಾದರೂ ಇಂದ್ರಿಯವೋ ಸರಿಯಾಗಿರದ ಮಗು, ಹರೆಯದ ಘರ್ಷಣೆಗಳಲ್ಲಿ ಸೋತು ರೋಗಗ್ರಸ್ತವಾಗುತ್ತದೆ.

ಅಲ್ಪ ಪ್ರಮಾಣದ ಮಿದುಳಿಗಾದ ಘಾಸಿ ಮತ್ತು ಬುದ್ಧಿಮಾಂದ್ಯತೆ :

ಗರ್ಭದಲ್ಲಿರುವಾಗ ಅಥವಾ ಜನನ ಸಮಯದಲ್ಲಿ ಅಥವಾ ಬಾಲ್ಯದಲ್ಲಿ ಬಂದ ಮಿದುಳು ಜ್ವರ, ಸೋಂಕು, ಉರಿತ, ಮಿದುಳಿಗೆ ಬಿದ್ದ ಪೆಟ್ಟು, ರಕ್ತಸ್ರಾವ, ಅಪಸ್ಮಾರ ದಿಂದ ಮಿದುಳಿಗೆ ಘಾಸಿಯಾದಾಗ ಅಥವಾ ಇದೇ ಬಗೆಯ ಕಾರಣಗಳಿಂದ ಅಥವಾ ನಮಗೆ ಸರಿಯಾಗಿ ಗೊತ್ತಿಲ್ಲದ ಕಾರಣಗಳಿಂದ ಬರುವ ಬುದ್ಧಿಮಾಂದ್ಯತೆಯಿಂದ ಮಗುವಿನ ಸಾಮರ್ಥ್ಯ ಕಡಿಮೆಯಾಗುತ್ತದೆ. ಹರೆಯದ ಸವಾಲನ್ನು ಎದುರಿಸಲು ಅಶಕ್ತ ವಾಗುತ್ತದೆ.

ಹದಿವಯಸ್ಸಿನವರ ಬೇಕು-ಬೇಡಗಳು

೧. ಲೈಂಗಿಕ ಶಿಕ್ಷಣ :

ಶಾರೀರಕವಾಗಿ ಲೈಂಗಿಕವಾಗಿ ವಿಕಸಿತಗೊಳ್ಳುವ ಈ ಅವಧಿಯಲ್ಲಿ ಹದಿವಯಸ್ಸಿನವರಿಗೆ ಅವರ ಶರೀರದಲ್ಲಿ ಆಗುತ್ತಿರುವ ಅಸಂಖ್ಯಾತ ಬದಲಾವಣೆಗಳ ಅರಿವು ಆಗಬೇಕಾದ್ದು ಅತ್ಯವಶ್ಯ. ಪ್ರತಿಯೊಂದು ಬದಲಾವಣೆಯ ಪ್ರಾಮುಖ್ಯತೆ, ಉಪಯುಕ್ತತೆ, ವೈಶಿಷ್ಟ್ಯತೆಯನ್ನು ಅವರು ತಿಳಿಯಬೇಕು. ಪ್ರಕೃತಿ ಅವರಿಗೆ ಸ್ವಾಭಾವಿಕವಾಗಿ ಕೊಡುವ ಈ ಸಂತಾನೋತ್ಪತ್ತಿ ಹಾಗೂ ಸಂತತಿಯನ್ನು ಮುಂದುವರೆಸುವ ಅಮೂಲ್ಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಅವರು ಮಾನಸಿಕವಾಗಿ ಸಜ್ಜಾಗಲು ಲೈಂಗಿಕ ಶಿಕ್ಷಣ ಅತಿಮುಖ್ಯ. ಲೈಂಗಿಕ ಆಸೆ ಆಕಾಂಕ್ಷೆಗಳನ್ನು, ಶಾರೀರಕ ಬಯಕೆಗಳನ್ನು ಸಾಮಾಜಿಕ ಕಟ್ಟುಪಾಡುಗಳ ಚೌಕಟ್ಟಿನೊಳಗೇ ಇನ್ನೊಬ್ಬರಿಗೆ ತೊಂದರೆಯಾಗದಂತೆ ಅನುಭವಿಸಿ ತೃಪ್ತಿಪಡುವ ಕಲೆಯನ್ನು ಲೈಂಗಿಕ ಶಿಕ್ಷಣ ನೀಡಬಲ್ಲುದು. ಅಜ್ಞಾನದಿಂದ ಆಗುವ ಅನಾಹುತಗಳನ್ನು ತಡೆಯಬಲ್ಲುದು. ಸಮಾಜ ಲೈಂಗಿಕ ಜ್ಞಾನವನ್ನು ಮುಚ್ಚಿಟ್ಟು ಗುಪ್ತವಾಗಿರಿಸಿದರೆ, ಕುತೂಹಲ ಅನಾರೋಗ್ಯಕರ ಹಾಗೂ ಅಪಾಯಕಾರಿ ಮಟ್ಟ ಮುಟ್ಟಿ, ಒಂದು ದಿನ ಒಡೆದು, ವ್ಯಕ್ತಿಗಳೇ ಏಕೆ, ಸಂಸಾರಗಳೇ ಕೊಚ್ಚಿಹೋಗುವುದನ್ನು ನಾವು ಕಂಡಿದ್ದೇವೆ. ಆದ್ದರಿಂದ ಸಮಾಜದ ಸಮಸ್ತರೂ ಈ ದಿಸೆಯಲ್ಲಿ ಯೋಚಿಸಿ ಹರೆಯದವರಿಗೆ ಲೈಂಗಿಕ ಶಿಕ್ಷಣ ನೀಡಲು ನಿರ್ಧರಿಸಬೇಕು.

೨. ಸ್ವಾವಲಂಬನೆ :

ಪರಾವಲಂಬನೆಯ ಬಾಲ್ಯದಿಂದ ಸ್ವಾವಲಂಬನೆಯ ಪ್ರೌಢತನಕ್ಕೆ ಸೇತುವೆ ಹದಿವಯಸ್ಸು ಎಂದು ಅರಿತೆವು. ಸ್ವಾವಲಂಬನೆಯನ್ನು ಕಲಿಯುವ ವಯಸ್ಸು ಇದು. ತಂದೆ ತಾಯಿಗಳು ಇದಕ್ಕೆ ಅನುವು ಮಾಡಿಕೊಡಬೇಕು. ಮುದ್ದಿನಿಂದ 'ಅಯ್ಯೋ ಇನ್ನೂ ಮಗು, ಅದಕ್ಕೇನು ತಿಳಿಯುತ್ತೆ' ಎಂದೋ, 'ಹೂಂ ಅವನಿಗೇ ಬಿಟ್ಟರೆ, ನಾಳೆಗೆ ಮುಗಿಸ್ತಾನೆ' ಎಂದೋ ತಾವೇ ಎಲ್ಲವನ್ನೂ ಮಾಡಿಬಿಟ್ಟರೆ, ಮಗು, ಮಗುವಾಗಿಯೇ

ಉಳಿಸುತ್ತದೆ. ವಯಸ್ಸಾದರೂ ಏನನ್ನೂ ಕಲಿಯುವುದಿಲ್ಲ. ತನ್ನ ವಸ್ತುಗಳನ್ನು ಜೋಪಾನವಾಗಿ, ಓರಣವಾಗಿಟ್ಟುಕೊಳ್ಳುವುದು, ಹೇಳಿಸಿಕೊಳ್ಳದೆ ದಿನ ನಿತ್ಯ ಕೆಲಸಗಳನ್ನು ಮಾಡುವುದು, ಸಣ್ಣಪುಟ್ಟ ನಿರ್ಧಾರಗಳನ್ನು ಮಾಡುವುದು ಇತ್ಯಾದಿಗಳನ್ನು ಪ್ರೋತ್ಸಾಹಿಸಬೇಕು.

೩. ಸ್ವಾತಂತ್ರ್ಯ :

ಹದಿವಯಸ್ಸಿನವರಿಗೆ ಸ್ವಾತಂತ್ರ್ಯಕೊಟ್ಟರೆ, ಕೋತಿಯ ಕೈಗೆ ಮಾಣಿಕ್ಯ ಕೊಟ್ಟಂತೆ ಎಂದು ಜರೆಯುವವರಿದ್ದಾರೆ. ಸ್ವಾತಂತ್ರ್ಯವಿತ್ತರೆ ಅವರು ಕೆಟ್ಟುಹೋಗುತ್ತಾರೆ ಎಂದು ಹೆದರುವವರಿದ್ದಾರೆ. ಆದರೆ ಈ ರೀತಿ ಜರೆಯುವ ಹೆದರುವ ಕಾರಣವಿಲ್ಲ. ಕಿರಿಯರು ಹಿರಿಯರ ವಿರುದ್ಧ ಬಂಡೇಳಲು ಮುಖ್ಯ ಕಾರಣ ಹಿರಿಯರು ಕಿರಿಯರಿಗೆ ಸ್ವಾತಂತ್ರ್ಯ ನೀಡಲು ನಿರಾಕರಿಸುವುದು. ಹರೆಯದ ಮಗಳು ಶಾಲೆಯಿಂದ ನೇರವಾಗಿ ಮನೆಗೆ ಬರಬೇಕು; ಒಂದು ನಿಮಿಷವೂ ತಡವಾಗಬಾರದು ಎನ್ನುವ ಹಿರಿಯರು, ಶಾಲೆಯಲ್ಲಿ ಜೊತೆಯವರೊಂದಿಗೆ ಆಡಿ ನಲಿಯುವ ಅವಕಾಶವನ್ನು ಅವಳಿಂದ ಕಸಿಯುತ್ತಾರೆ. ಉಲ್ಲಾಸದಿಂದ ಅರಳಬೇಕಾದ ಮನಸ್ಸನ್ನು ಮುದುಡಿಸುತ್ತಾರೆ. ಸಂಜೆ ಹೊತ್ತಾಗಿ ಬಂದ ಮಗನನ್ನು ತರಾಟೆಗೆ ತೆಗೆದುಕೊಳ್ಳುವ ತಂದೆ, ಮಗನ ವ್ಯಕ್ತಿತ್ವ ವಿಕಾಸಗೊಳ್ಳಲು ಅಡ್ಡಿಯಾಗುತ್ತಾರೆ. ಮೊದಲು ಭಯದಿಂದ ಅಂತೆಯೇ ಮಾಡಿ, ಕೊನೆಗೆ ಕಟ್ಟು ಒಡೆದು ಸ್ವೇಚ್ಛಾಚಾರಿಯಾಗಬಹುದು. ಸಾಧಕ ಬಾಧಕಗಳನ್ನು ವಿವರಿಸಿ, ಒಳಿತು ಕೆಡುಕುಗಳನ್ನು ಹೇಳಿ, ಇರಬಹುದಾದ ಅಪಾಯಗಳ ಬಗ್ಗೆ ಮಾಹಿತಿ ನೀಡಿ, ಏನು ಮಾಡಬೇಕೆಂದು ಹರೆಯದವರಿಗೇ ಬಿಡಬೇಕು. ಹಿತಮಿತವಾದ ಸ್ವಾತಂತ್ರ್ಯ ಆನಂದ ತಂದರೆ, ಮಿತಿ ಮೀರಿದ ಸ್ವಾತಂತ್ರ್ಯ ಹಾನಿ ತರುತ್ತದೆ ಎಂಬುದನ್ನು ತಿಳಿಯ ಹೇಳಬೇಕು.

೪. ಮಾನ್ಯತೆ :

ಎಷ್ಟೋ ತಂದೆ ತಾಯಿಗಳು ಮತ್ತು ಮನೆಯವರು, ಬಾಲ್ಯಕಳೆದು ಹದಿವಯಸ್ಸಿಗೆ ಕಾಲಿಟ್ಟ ಹರೆಯದವರನ್ನು ಮಾನ್ಯ ಮಾಡುವುದೇ ಇಲ್ಲ. ಹುಡುಗರ ವಿಚಾರವಲ್ಲಿ ಇದು ಸಾಮಾನ್ಯ. (ಹುಡುಗಿಯರಾದರೆ ಅವರು ಋತುಮತಿಯಾಗುತ್ತಿದ್ದಂತೆ ಅವರು ದೊಡ್ಡವರಾದುದನ್ನು ಗುರುತಿಸಲು ಶಾಸ್ತ್ರೋಕ್ತ ಸಂಪ್ರದಾಯಗಳೇ ಇವೆ. ಮೈನೆರೆದಾಗ ಹತ್ತು ಸಮಸ್ತರನ್ನು ಕರೆದು ಹಸೆಹಚ್ಚಿ ಜಗಜ್ಜಾಹೀರು ಮಾಡಲಾಗುತ್ತದೆ) ಕೆಲವು ಸಾರಿ ತಂದೆ ತಾಯಿಗಳಿಗೆ ಮಕ್ಕಳು ಮಕ್ಕಳಾಗಿಯೇ ಉಳಿಯುವುದು ಬೇಕಾಗಿರುತ್ತದೆ. ತಮ್ಮ ನಡುವಿನ ವೈಮನಸ್ಯವನ್ನು, ಮಗುವಿನ ಲಾಲನೆ, ಪಾಲನೆಯಲ್ಲಿ ಮರೆತಿರುತ್ತಾರೆ. ಮಗು ದೊಡ್ಡದಾಗಿ, ಸ್ವಾವಲಂಬಿಯಾಗಲು ಪ್ರಯತ್ನಿಸಿದಾಗ ಅವರು ವಿಚಲಿತರಾಗುತ್ತಾರೆ. ಮಗು ತಮ್ಮಿಂದ ದೂರವಾದರೆ, ತಮ್ಮ ವೈಮನಸ್ಯ ಮತ್ತೆ ಮೇಲಕ್ಕೆ ಬರಬಹುದೆಂದು ಹೆದರಿ, ಮಗುವನ್ನು ಪರಾವಲಂಬಿಯಾಗಿರಲು ನೇರವಾಗಿಯೋ, ಪರೋಕ್ಷವಾಗಿಯೋ ಪ್ರೋತ್ಸಾಹಿಸುತ್ತಾರೆ. ಇದು ಸಲ್ಲದು ಬೆಳೆದ ಮಕ್ಕಳನ್ನು ಸ್ನೇಹಿತರಂತೆ ಕಾಣು ಎಂದು

ಪಾಶ್ಚಾತ್ಯರು ಹೇಳುತ್ತಾರೆ. ಹರೆಯದವರಿಗೆ ಉಚಿತ ಸ್ಥಾನಮಾನ ನೀಡುವುದು ಹಿರಿಯರಿಗೂ, ಕಿರಿಯರಿಗೂ ಕ್ಷೇಮ.

೫. ಒಳ್ಳೆಯ ಮಾದರಿ :

"ನಾವು ದೊಡ್ಡವರಾದಾಗ ಹೀಗಾಗಬೇಕು. ಅವರ ಮಟ್ಟವನ್ನು ಮುಟ್ಟಬೇಕು ಅವರು ಮಾಡಿದಂತೆ ನಾವು ಮಾಡಬೇಕು ಅವರ ನಡೆ ನುಡಿ ನಮಗೂ ಬರಬೇಕು" ಎಂದು ಪ್ರತಿ ಹರೆಯದ ಹುಡುಗ, ಹುಡುಗಿ ಒಬ್ಬ ಮಾದರಿ ಆದರ್ಶ ವ್ಯಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅದಕ್ಕಾಗಿ ಶ್ರಮಿಸುತ್ತಾರೆ. ಹಿಂದಿನ ಕಾಲದಲ್ಲಿ ಪುರಾಣ ವ್ಯಕ್ತಿಗಳು ಹರೆಯದವರ ಮಾದರಿಯಾಗಿದ್ದರು. ಅರ್ಜುನ, ಅಭಿಮನ್ಯು, ರಾಮ ಭೀಮ, ಆಂಜನೇಯರು ಹುಡುಗರ ಆದರ್ಶವಾಗಿದ್ದರೆ, ಸೀತೆ ಸಾವಿತ್ರಿ ಅರುಂಧತಿಯರು ಹುಡುಗಿಯರ ಆರಾಧ್ಯ ದೈವಗಳಾಗಿದ್ದರು. ಆದರೆ ಇಂದು ನಮ್ಮ ಹರೆಯದವರ ಆದರ್ಶ ಮೂರ್ತಿಗಳು-ಸಿನೆಮಾ ತಾರೆಯರು. ಸಿನೆಮಾ ಹೀರೋ ಹಾಡೇಳುತ್ತಾ ಹೀರೋಯಿನ್ ಹಿಂದೆ ಸುತ್ತುವುದು, ಅವಳ ಪ್ರೀತಿ ಸಂಪಾದಿಸಲು ವಿವಿಧ ಸರ್ಕಸ್, ಕಪಿಚೇಷ್ಟೆ, ಕರಾಮತ್ತುಗಳನ್ನು ಮಾಡುವುದು, ಅವಳನ್ನು ಕೆಣಕಲು ಬಂದ ರೌಡಿಗಳನ್ನು ತದುಕುವುದು, ಸೇಡುತೀರಿಸಿಕೊಳ್ಳಲು ಹಿಂಸಾಚಾರದಲ್ಲಿ ತೊಡಗುವುದು ಮಾಡಿದರೆ, ಹೀರೋಯಿನ್‌ಗಳು ಅಂಗಾಂಗ ಪ್ರದರ್ಶನ ಮಾಡುತ್ತಾ, ಬೆಡಗು ಬಿನ್ನಾಣ ಬೀರಿ ಹೀರೋ, ವಿಲ್ಲನ್‌ಗಳು ಹುಚ್ಚುಚ್ಚಾಗಿ ಆಡುವಂತೆ ಪ್ರಚೋದಿಸುವುದು, ವಿಲನ್ ಕೈಲಿ ಬಲಾತ್ಕಾರ ಮಾಡಿಸಿಕೊಂಡು ಅಳುವುದು ಮಾಡುತ್ತಾರೆ. ಕೆಲವು ಸಾರಿ ವಿಲನ್‌ಗಳೇ ಜನಪ್ರಿಯರಾಗುತ್ತಾರೆ. ಬಾಯಲ್ಲಿ ಸಿಗರೇಟನ್ನು ಆ ಕಡೆಯಿಂದ ಈ ಕಡೆಗೆ ಹೊರಳಾಡಿಸಿ, ಹುಡುಗಿಯರೊಂದಿಗೆ ಕುಣಿಯುತ್ತಾ, ಪಾನ ಮತ್ತರಾಗಿ, ಸಮಾಜನ ಸಿರಿವಂತರ ಮೋಸ ತಟವಟ, ಗೋಮುಖ ವ್ಯಾಘ್ರತನವನ್ನು ಖಂಡಿಸಿದಾಗ ಜನ ಚಪ್ಪಾಳೆ ತಟ್ಟುತ್ತಾರೆ. ಇಂತಹ ಬಂಡುಕೋರ ಪಾತ್ರ ಯುವ ಜನರಿಗೆ ಮೆಚ್ಚುಕೆಯಾಗುತ್ತದೆ. ರಸ್ತೆಯಲ್ಲಿ ಸಂಚಾರ ನಿಯಮಗಳನ್ನು ಗಾಳಿಗೆ ತೂರಿ ಹಾವಿನಂತೆ ಬಳುಕುತ್ತಾ, ಸಿಳ್ಳು ಹಾಕಿ, ಹಾಡು ಹೇಳಿಕೊಂಡು ಮೋಟರ್ ಸೈಕಲ್ ನಡೆಸುವ, ಮಾತೆತ್ತಿದರೆ ಡಿಶುಂ ಎಂದು ಹೊಡೆದು ವೈರಿಯನ್ನು ಉರುಳಿಸುವ ನಾಯಕ ಇಷ್ಟವಾಗುತ್ತಾನೆ. ಇಂದಿನ ಯುವ ಜನಾಂಗಕ್ಕೆ ನಾವು ಇತ್ತಿರುವ 'ಮಾದರಿ' ವ್ಯಕ್ತಿಗಳಿವರು. ಅವರಿಂದ ಸಿನೇಮಾ ನಾಯಕ, ನಾಯಕಿ ಖಳನಾಯಕರ ವರ್ತನೆಯ ಪ್ರತಿರೂಪವನ್ನಲ್ಲದೆ ಮತ್ತೇನನ್ನು ನಿರೀಕ್ಷಿಸಲು ಸಾಧ್ಯ? ಹರೆಯದವರಿಗೆ ಇಂದು ತುರ್ತಾಗಿ ಬೇಕಾಗಿರುವುದು, ಅನುಕರಿಸಲು ಯೋಗ್ಯರಾದ ಆದರ್ಶ, ಒಳ್ಳೆಯ ಮಾದರಿ ವ್ಯಕ್ತಿಗಳು.

ಬೇಡಗಳು

ಅಪ್ರಾಮಾಣಿಕತೆ:

ಹರೆಯದವರು ಪ್ರಾಮಾಣಿಕತೆಯನ್ನು ಪ್ರೀತಿಸುತ್ತಾರೆ. ಹಿರಿಯರೆಲ್ಲ ಒಳ್ಳೆಯ

ವರು, ಪ್ರಾಮಾಣಿಕರು ಎಂದು ಬಾಲ್ಯದಲ್ಲಿ ನಂಬಿರುತ್ತಾರೆ. ಒಳಿತು ಕೆಡಕು, ಸರಿತಪ್ಪುಗಳನ್ನು ತಿಳಿಸಿ, ನೀತಿ ಹೇಳುವ ದೊಡ್ಡವರು ತಾವು ಏನು ಬೋಧಿಸುತ್ತಾರೋ ಅದರಂತೆಯೇ ನಡೆಯುತ್ತಾರೆ ಎಂದು ತಿಳಿದಿರುತ್ತಾರೆ. ಸರ್ವರೂ ಸಮಾನರು, ಒಬ್ಬರಿಗೊಂದು ಇನ್ನೊಬ್ಬರಿಗೊಂದು ಮಾಡದಿರಿ ಎಂದು ಪಾಠಹೇಳಿ, ಸ್ಕೂಲ್ ಪ್ರೆಸಿಡೆಂಟರ ಮಗ ತುಂಟತನ ಮಾಡಿದರೂ ಅವನನ್ನು ಶಿಕ್ಷಿಸದೆ, ಇನ್ನೊಬ್ಬ ಸಾಮಾನ್ಯ ಬಾಲಕನ ಅದೇ ತಪ್ಪಿಗೆ ಶಿಕ್ಷೆ ಕೊಡುವ ಉಪಾಧ್ಯಾಯರನ್ನು ಹರೆಯದವರು ದ್ವೇಷಿಸುತ್ತಾರೆ. ಸುಳ್ಳು ಹೇಳುವುದು ಮಹಾಪಾಪ ಎಂದು ನೀತಿ ಚಿಂತಾಮಣಿ ಹೇಳಿ, ಮ್ಯಾಟಿನಿ ಸಿನೇಮ ನೋಡಿ ಬಂದು, ಗಂಡನಿಗೆ ಮನೆಯಲ್ಲೇ ಇದ್ದೆ ಎನ್ನುವ ತಾಯಿ, ಮೋಸ ಮಾಡುವುದು ತಪ್ಪು ಎಂದು ಹೇಳಿ, ಹಳೆಯ ಗಡಿಯಾರವನ್ನು ಮಾರುವಾಗ ಹೇಗೆ ಬುದ್ಧಿವಂತಿಕೆಯಿಂದ ಇನ್ನೊಬ್ಬನಿಗೆ ಟೋಪಿ ಹಾಕಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ತಂದೆ, ಹಣ ಮಾಡುವುದೇ ಮುಖ್ಯ ಹೊರತು ನೀತಿಧರ್ಮಗಳಲ್ಲ ಎಂದು ನಡೆಯುವ ಸಮಾಜ, ಭರವಸೆಗಳನ್ನಿತ್ತು ಮರೆಯುವ ಸರ್ಕಾರ–ಇವರೆಲ್ಲರ ಅಪ್ರಾಮಾಣಿಕತೆಯನ್ನು ಕಂಡು ಹರೆಯದವರು ಕೆರಳುತ್ತಾರೆ. ಹರೆಯದವರನ್ನು ಒಲಿಸಿಕೊಳ್ಳುವ ತಾರಕ ಮಂತ್ರ 'ಪ್ರಾಮಾಣಿಕತೆ' ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಬಲವಂತ:

ತಮ್ಮ ಮೇಲೆ ಹಿರಿಯರು ಅವರ ವಿಚಾರಗಳನ್ನು ಹೊರಿಸುವುದನ್ನು ಹರೆಯದವರು ಸಹಿಸರು. 'ಇವರು ನಮ್ಮ ಕಣ್ಣ ಮುಂದೆ ಹುಟ್ಟಿ ಕಣ್ಣು ಬಿಟ್ಟ ಪಿಳ್ಳೆಗಳು. ನಾವು ಹೇಳಿದಂತೆ ಇವರು ಕೇಳಬೇಕು. ನಮಗೆ ಎಷ್ಟೊಂದು ಅನುಭವವಿದೆ. ನಮ್ಮ ಸಲಹೆಯಂತೆ ನಡೆದರೆ ಕ್ಷೇಮ' ಎಂದು ಬಲವಂತ ಮಾಡಿದರೆ ಹರೆಯದವರು ಸಿಡಿದೇಳುತ್ತಾರೆ. ಈ ಬಲವಂತ ಬೇಡ.

ಗುಟ್ಟು:

ಹರೆಯದವರೊಂದಿಗೆ ಗುಟ್ಟು ಮಾಡುವುದು, ಮುಚ್ಚಿಡುವುದು, ಜ್ವಾಲಾಮುಖಿಯನ್ನು ಮುಚ್ಚಿದಂತೆ. ಒಂದು ದಿನ ಭುಗಿಲೆಂದು ಸ್ಫೋಟವಾಗುತ್ತದೆ. ಸಹನೆಯಿಂದ ವಿವರಿಸುವುದು ಪ್ರಯೋಜನಕಾರಿ. ಲೈಂಗಿಕ ವಿಷಯಗಳನ್ನು ಅವರಿಂದ ಗುಟ್ಟಾಗಿಡಲು ಯತ್ನಿಸುವ ನಮ್ಮ ಸಮಾಜದ ಅವಸ್ಥೆಯನ್ನು ಕಾಣುತ್ತಿದ್ದೇವಲ್ಲಾ. ಇತ್ತ ಗುಟ್ಟೂ ಇಲ್ಲ, ಅತ್ತ ರಟ್ಟೂ ಇಲ್ಲ, ಎಡಬಿಡಂಗಿಯಾಗಿ, ಅವೈಜ್ಞಾನಿಕ, ತಪ್ಪುಮಾಹಿತಿ ಪಡೆದು ಅಡ್ಡದಾರಿ ಹಿಡಿದು ನರಳುತ್ತಿರುವುದು ಈ ಗುಟ್ಟಿನ ಫಲ.

ಹೀಗೆ ಹರೆಯದವರ ಬೇಕು, ಬೇಡಗಳ ಬಗ್ಗೆ ಹಿರಿಯರ, ಸಮಾಜದ ಗಮನ ಹರಿಯುವಂತಾಗಬೇಕು.